ಚಿತ್ರದುರ್ಗದಲ್ಲಿ—ವಿದ್ಯಾರ್ಥಿಗಳ ಮುಷ್ಕರವು ಮುಂದುವರಿಯುತ್ತಿದೆ ... ಪಿಕೆಟಿಂಗ್ ನಡೆಸುವ ... ಮಂದಿಗಳನ್ನು ದಸ್ತಗಿರಿ ಮಾಡಿದ್ದಾರೆ ... ಬಿಡುಗಡೆ ಮಾಡಲಾಗಿದೆಯಂತೆ

ಶಿವಮೊಗ್ಗ—ಕಳವಾದ ... ಶ್ರೀ ... ಬಂಧಿಸಿದ್ದಾರೆ.

ಮೈಸೂರಿನಲ್ಲಿ—ಶ್ರೀ ವೆಂಕಟಗಿರಿಯಪ್ಪನವರೂ ... ಶ್ರೀ ಕೆಂಪಯ್ಯನವರೂ ಬಂಧಿಸಲ್ಪಟ್ಟಿರುವರು

ನ್ಯೂಗಿನಿಯಾದಲ್ಲಿ ಜಪಾನರ ಮುಂದೋಟವನ್ನು ತಡೆಯಲಾಯಿತು

ನ್ಯೂಗಿನಿಯಾದಲ್ಲಿ ಜಪಾನರ ಮುಂದೋಟವನ್ನು ಆಸ್ಟ್ರೇಲಿಯಾದ ಸೈನ್ಯದವರು ತಡೆಯುತ್ತಿದ್ದಾರೆ. ಮೋರೆಸ್ಬಿ ಬಂದರಕ್ಕೆ ಇನ್ನೂ ... ಮೈಲಿ ದೂರದಲ್ಲಿರುವರು. ಆಸ್ಟ್ರೇಲಿಯಾದ ನೌಕಾ ಮಂತ್ರಿಗಳು ಹೇಳಿದ್ದೇನೆಂದರೆ ನ್ಯೂಗಿನಿಯ ... ಯತ್ನವು ... ಗಳ ಮುಂದೋಟವನ್ನು ತಡೆಯುತ್ತವೆ ಎಂದು ಹೇಳಿದರು.

ಉತ್ತರ ಇಂಡಿಯಾದ ಸುದ್ದಿಗಳು

... [illegible]

ಭೂಮಿಯನ್ನು ಸರ್ಕಾರಕ್ಕೆ ವಹಿಸಿಕೊಳ್ಳುವುದು

ರಷ್ಯಾ ದೇಶದಲ್ಲಿ ಭೂಮಿಯೆಲ್ಲವೂ ಸರ್ಕಾರಕ್ಕೆ ಸೇರಿದ್ದು. ಬ್ರಿಟನಿನಲ್ಲಿ ಜಮೀನ್ದಾರರನ್ನು ಹೀಗೆ ಇಂಗ್ಲೆಂಡಿನಲ್ಲಿಯೂ ಮಾಡಬೇಕೆಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಒಂದು ವಿಷಯವು ಬಂದಿತು. ಆಗ ಜಮೀನ್ದಾರನಿಗೆ ಪ್ರತಿಫಲವನ್ನು ಕೊಟ್ಟು ಭೂಮಿಯನ್ನೆಲ್ಲಾ ಸರ್ಕಾರಕ್ಕೆ ವಹಿಸಿಕೊಳ್ಳಲು ಸಾಧ್ಯವೆ? ಎಂಬುದನ್ನು ಪರಿಶೀಲಿಸಿ ವರದಿಮಾಡಲು ಲಾರ್ಡ್ ಉತ್ವಾಟ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಗೊತ್ತುಮಾಡಿದರು. ಆ ಸಭೆಯವರು ಇದು ಅಸಾಧ್ಯವೆಂದು ಅವರು ಕಾರಣಗಳನ್ನು ತಿಳಿಸಿದ ವರದಿಯನ್ನು ಒಪ್ಪಿಸಿದರು.

೧. ಇದು ಸರಾಗವಾಗಿ ನಡೆಯುವಂತಾದ ನೀತಿಯಲ್ಲ ರಾಜ್ಯದ ಗೊಂದಲವೇಳುತ್ತದೆ.

೨. ಯುದ್ಧ ಮುಗಿದ ಸಮಯದಲ್ಲಿ ಹಣವನ್ನು ಒದಗಿಸುವುದು ಸಾಧ್ಯವೇ ಇಲ್ಲ.

೩. ಇದಕ್ಕೆ ಬಹುತೊಡಕಿನ ಆಡಳಿತ ಯಂತ್ರದ ಅವಶ್ಯಕತೆಯಿದೆ

—

ಇಟಲಿಯ ಹೊಸ ಸಬ್ ಮರೀನ್‌ಗಳು

ಅತ್ತ ಕಪ್ಪು ಸಮುದ್ರದಲ್ಲಿ ಓಡಾಡುತ್ತಿರುವ ಇಟಲಿಗಳ ತೋಣಿಗಳು ಕೇವಲ ೩೫ ಟನ್ನುಗಳು ಮಾತ್ರವೇ! ಇವು ಬಹಳ ಚಿಕ್ಕದಾಗಿ ನಿರ್ಮಿತವಾಗಿವೆ. ಇವು ನೀರಿನಲ್ಲಿ ಎಂಟು ದಿನಗಳು ಇರಬಲ್ಲವೆಂದು ಹೇಳುತ್ತಾರೆ. ಸಾಧಾರಣ ದಿನಗಳು ನೀರಿನಲ್ಲಿ ಮುಳುಗಿಯೇ ಇರಬಲ್ಲವು.

ಇಂಗ್ಲೆಂಡಿಗೆ ಸಾಮಾನು ಸಾಗಿಸುವ ವಿಮಾನಗಳು

ಇಂಗ್ಲೆಂಡಿನ ಸರ್ಕಾರವು ಸಂಯುಕ್ತ ಸಂಸ್ಥಾನಗಳಲ್ಲಿ ಅಂತಹ ವಿಮಾನಗಳನ್ನು ತಯಾರಿಸುತ್ತಿದೆ. ಕೆಲವು ದಿನಗಳಲ್ಲಿಯೇ ಸಾಕಾದಷ್ಟು ಸಂಖ್ಯೆಯಲ್ಲಿ ಈ ವಿಮಾನಗಳು ಕೆಲಸಮಾಡಬಲ್ಲವು.

ಅಮೆರಿಕದ ಸೈನಿಕರಿಗೆ ಯುದ್ಧರಂಗದಲ್ಲಿ ಈಗ ಪ್ರತ್ಯೇಕ ಬಗೆಯ ಹೊಸ ಉಡುಪುಗಳನ್ನು ಕೊಟ್ಟಿರುವರು.

ಇಂಗ್ಲೆಂಡಿನಲ್ಲಿ ಹಡಗುಗಳ ತಯಾರಿಕೆ

ಕಳೆದ ವರ್ಷಗಳ ಕೊನೆಗೆ ಮುಚ್ಚಿದ್ದ ೧೧ ಶಿಲ್ಪಾಗಾರಗಳಲ್ಲಿ ಹಡಗುಗಳನ್ನು ಈಗ ಹೊಸದಾಗಿ ಕಟ್ಟಲಾಗುತ್ತಿದೆ. ೧೨ ಹೊಸ ಶಿಲ್ಪಾಗಾರಗಳೂ ಇವುಗಳೊಂದಿಗೆ ಕೆಲಸಮಾಡುತ್ತಿವೆ. ಮತ್ತೊಂದು, ಅಂಗಳವು ಹಡಗುಗಳನ್ನು ಕಟ್ಟುತ್ತಿದೆ. ಇನ್ನು ಒಂದು ಹಡಗು ತಯಾರಿಕೆಯು ಕೇಂದ್ರ ದಿವಾನ ಸಮಾಲೋಚನೆಯಿಂದ ಇತರ ಕೈಗಾರಿಕೆಗಳಿಂದ ಹಿಂತೆಗೆಯಲ್ಪಟ್ಟ ಜನರು ಈ ಕೈಗಾರಿಕೆಗೆ ವರ್ಗಾಯಿಸಲ್ಪಟ್ಟಿರುವರು. ಈಗೀಗ ಮುಳುಗುತ್ತಿರುವ ಸಂಖ್ಯೆ ತಯಾರಾಗುತ್ತಿರುವ ಸಂಖ್ಯೆಗಳು ಸರಿಸಮಾನವಾಗಿವೆ ಎಂದು ಹೇಳಬಹುದು. ಇನ್ನು ಸ್ವಲ್ಪ ದಿನಗಳಲ್ಲಿಯೇ ಕಳೆದುಹೋದ ಸಂಖ್ಯೆಯನ್ನು ಸಾಧಿಸಬಹುದೆಂದು ಸರ್ ಅಲೆಗ್ಸಾಂಡರ್ ಅವರು ಹೇಳಿದರು.

—

ಅಸ್ಸಾಮಿನ ಅನಾಗರೀಕನಿಗೆ ಆಲ್ಬರ್ಟ್ ಮೆಡಲ್ ಬಹುಮಾನ

ಜಮಾರ್,

ನ್ಯಾಂಬಿಜಗ್ ಎಂಬ ಕಡೆಯಲ್ಲಿ ಅತಿ ಕಷ್ಟಪಡುತ್ತಿದ್ದ ಒಬ್ಬ ತಾಯಿ ಮತ್ತು ಮಗುವನ್ನು ನೋಡಿದನು. ಅವರನ್ನು ಏನಾದರೂ ಮಾಡಿ ರಕ್ಷಿಸಬೇಕೆಂದು ಪ್ರಯತ್ನಮಾಡಿದನು. [illegible]

ಅಕ್ಷರ ಪ್ರಚಾರ ಸಮಿತಿ

ಇದೇ ಮಾಸ ೧೦ ನೇ ತಾ|| ಟಿ. ನರಸೀಪುರದಲ್ಲಿ ಶ್ರೀಮಾನ್ ಕೆ. ಎಚ್. ಗುಂಡೂರಾವ್, ಬಿ.ಎ. ಬಿ.ಟಿ. ಇವರ ಅಧ್ಯಕ್ಷತೆಯಲ್ಲಿ ಒಂದು ಉಪಾಧ್ಯಾಯರುಗಳ ಸಭೆಯು ಸೇರಿದ್ದಿತು. ಕಾರ್ಯದರ್ಶಿಗಳು ಸಭೆಯನ್ನು ಉದ್ದೇಶಿಸಿ, ಅಕ್ಷರ ಪ್ರಚಾರದ ತತ್ವ ಮತ್ತು ಧ್ಯೇಯಗಳನ್ನು ವಿವರಿಸುತ್ತಾ, ಅಕ್ಷರ ಪ್ರಚಾರಣೆಯ ರೀತಿಯ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಟ್ಟರು

ಅಧ್ಯಕ್ಷರು ಉಪಾಧ್ಯಾಯರುಗಳ ಸಹಕಾರವನ್ನು ಕೋರುತ್ತಾ, ಉಪಾಧ್ಯಾಯರುಗಳನ್ನು ಅಕ್ಷರ ಪ್ರಚಾರಣಾ ಕಾರ್ಯಕ್ಕೆ ಸೇರಿಸಿಕೊಂಡರು. ಮುನಿಸಿಪಾಲಿಟಿಯವರು ೧೦೦ ರೂಗಳನ್ನು ಕೊಟ್ಟಿರುವುದರಿಂದ, ಅಕ್ಷರ ಪ್ರಚಾರಣಾ ತರಗತಿಗಳು ೩೫ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಲು ಕೆಲಸಕಾರ್ಯಗಳು ಪ್ರಾರಂಭವಾಗುವುದು.

ಸಿಲ್ಕ್ ಫಿಲೇಚರ್‌ನ ಸೂಪರಿಂಟೆಂಡೆಂಟರಾದ ಶ್ರೀ ಜೆ. ಕೃಷ್ಣಮೂರ್ತಿಯವರು ಅಕ್ಷರಪ್ರಚಾರ ಸಮಿತಿಯವರೊಂದಿಗೆ ಸಹಕರಿಸುವುದಾಗಿ ಒಪ್ಪಿ, ಮೈ ಕಾರ್ಖಾನೆಯಲ್ಲಿಯೂ ಮತ್ತು ಕೆಲಸಗಾರರಿರುವ ಹಳ್ಳಿಯಲ್ಲಿಯೂ ಅನಕ್ಷರಸ್ಥ ಕೆಲಸಗಾರರಿಗಾಗಿ ತರಗತಿಗಳನ್ನು ಏರ್ಪಡಿಸುವುದಾಗಿ ಭರವಸೆಕೊಟ್ಟರು.

ಹಿಂದೀ ವರ್ಗಗಳು

ಲಕ್ಷ್ಮೀಪುರಂ ಬಡಾವಣೆಯಲ್ಲಿರುವ ಹಿಂದೀ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ಇದೇ ತಿಂಗಳು ೧೬ ನೆಯ ತಾರೀಖು ಬುಧವಾರದಿಂದ ನಿತ್ಯ ಸಂಜೆ ೬ ಗಂಟೆಯಿಂದ (ನವೀನ ಕಾಲದ ಪ್ರಕಾರ) ಪ್ರಾಥಮಿಕ, ರಾಷ್ಟ್ರಭಾಷಾ ಮೊದಲಾದ ವರ್ಗಗಳು ನಡೆಯುವುವು. ವರ್ಗಗಳಿಗೆ ಸೇರಬಯಸುವವರು ಸಭಾ ಕಾರ್ಯಾಲಯದಲ್ಲಿ ತಾ|| ೧೫-೯-೪೨ ರೊಳಗಾಗಿ ಹೆಸರು ಕೊಡಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಆ ಕಾ ಶ ವಾ ಣಿ

ಸೆಪ್ಟೆಂಬರ್ ೧೩ನೇ ಭಾನುವಾರ

೬-೦೦ ನಾದಸ್ವರ ೬-೦೫ ಪೇಟಿಫಾರಸ್; ಕಾರ್ಯಕ್ರಮ ೬-೧೦ 'ವಿಶ್ವಧರ್ಮ' ಶ್ರೀಮಾನ್ ಅ. ನ. ಕೃಷ್ಣರಾಯ ರಚಿತ ನಾಟಕ: ಆಕಾಶವಾಣಿ ಕಲಾಸಂಘದವರಿಂದ ೭-೩೦ ವೃತ್ತಾಂತ ೭-೪೦ ಕರ್ನಾಟಕ ಹಾಡುಗಾರಿಕೆ ೮-೦೦ 'ಕೃತ್ರಿಮ ಆಹಾರ': ಭಾಷಣ: ಶ್ರೀಮಾನ್ ಆನಂದರಾಮರಾವ್, ಎಂ ಎಸ್‌ಸಿ. ೮-೧೫ ಮಿಬರ್ ೮-೩೦ ತಾ ಠಾವಾಣಿ ೮-೩೦ 'ಗಂಡಸಿಗ್ಯಾಕೆ ಗೌರಿದುಃಖ?' ಒಂದು ಸಂಸಾರ ಚಿತ್ರ ೮-೪೫ ಹಾಡುಗಾರಿಕೆ ಆಸ್ಥಾನ ವಿದ್ವಾನ್ ಸಂಗೀತರತ್ನ ಕೆ. ವಾಸುದೇವಾಚಾರ್ಯ ೯-೧೫ ವೃತ್ತಾಂತ ಮಂಗಳ.

ಗುಳ್ಳೆನರಿಗಳ ಯುದ್ಧ

ತಲಚೇರಿಯನ್ನು ಗುಳ್ಳೆನರಿಗಳು ಆಕ್ರಮಿಸಿಬಿಟ್ಟವು ಪುರಸಭೆಯವರು ಯುದ್ಧಾರಂಭ ಮಾಡಿದರು. ಒಂದು ಗುಳ್ಳೆನರಿಯನ್ನು ಕೊಂದವರಿಗೆ ೮ ಆಣೆಗಳ ಬಹುಮಾನವು ಸಾರಲ್ಪಟ್ಟಿತ್ತು. ಈಗ ಗುಳ್ಳೆನರಿಗಳು ಸೋತು ಬಹು ಸಂಖ್ಯೆಯನ್ನು ಕಳೆದುಕೊಂಡು ಕಾಡಿಗೆ ಓಡಿಹೋಗಿವೆ.

ಒಂದೊಂದು ಮಾತ್ರ ಈಗಲೂ ಕೂಗುತ್ತಿವೆಯಂತೆ ಈ ಯುದ್ಧದ ವೆಚ್ಚವು ಪುರಸಭೆಗೆ ನಾನೂರು ರೂಪಾಯಿಗಳಾಯಿತೆಂದು ಸುದ್ದಿ ಇದೆ.

—

ದಸ್ತಗಿರಿಗಳು

ಬಂಗಾರ್‌ಪೇಟೆ ಕಾಂಗ್ರೆಸ್ ಅಧ್ಯಕ್ಷರೂ, ಸೂರತ್ತಿನ ಕಾಲೇಜ್ ಮತ್ತು ಸ್ಕೂಲುಗಳ ಮುಂದೆ ಪಿಕೆಟಿಂಗ್ ನಡೆಸಿದರೆಂದು ೯ ಜನರೂ ದಸ್ತಗಿರಿ ಮಾಡಲ್ಪಟ್ಟರು.

ಅಹಮದಾಬಾದ್ ಬಳಿ ದರಿಯಾಪುರದಲ್ಲಿ ಮೊನ್ನೆ ದಿನ ಕೆಲವು ವಿದ್ಯಾರ್ಥಿ ವಿದ್ಯಾರ್ಥಿನಿಯರು ಮೆರವಣಿಗೆ ನಡೆಸಿದರು, ತತ್ಸಂಬಂಧವಾಗಿ ಪಿಕೆಟಿಂಗ್ ಮಾಡಿದರೆಂದು ಮೂವರು ವಿದ್ಯಾರ್ಥಿನಿಯರಿಗೆ ತಲಾ ೩ ತಿಂಗಳು ಕಠಿಣ ಸಜಾ ಮತ್ತು ನೂರು ರೂ ಜುಲ್ಮಾನೆ ವಿಧಿಸಲಾಯಿತೆಂದು ತಿಳಿಯಬಂದಿದೆ.

ಯುದ್ಧವಾರ್ತೆಗಳು

ಬಹು ಮುಖ್ಯ ಸಂಭಾಷಣೆ

ಲಿಟ್ವಿನಾಫರು ಕಾರ್ಡಿನಲ್ ಹಲ್ ಅವರನ್ನು ಸಂಧಿಸಿ ಮಾತನಾಡಿದರು. ಈ ಸಂಭಾಷಣೆಗೆ ಬಹು ಪ್ರಾಮುಖ್ಯತೆ ಬಂದಿದೆ ಏಕೆಂದರೆ ಈ ಸಂಭಾಷಣೆಯು ರಷ್ಯದ ಈಗಿನ ವಿಷಮಾವಸ್ಥೆಗೇ ಸಂಬಂಧಪಟ್ಟುದು. ಪತ್ರಿಕಾ ಪ್ರತಿನಿಧಿಗಳು ಕೇಳಿದ್ದಕ್ಕೆ ಉತ್ತರವಾಗಿ ಲಿಟ್ವಿನಾಫರೂ ಯುದ್ಧಕ್ಕೆ ಕಾಲ ಛೇದವಾಗಲಿ, ಋತುನಿಯಮವಾಗಲಿ ಅಡ್ಡಿ ಬರುವುದಿಲ್ಲ. ಯಾವಾಗ ಬೇಕಾದರೂ ಜಪಾನು ಸೈಬೀರಿಯದ ಮೇಲೆ ಬೀಳಬಹುದೆಂದರು.

ರಷ್ಯನರ ಸಾಹಸ

ಮಿ|| ಚರ್ಚಿಲ್ ಅವರೊಡನೆ ರಷ್ಯಕ್ಕೆ ಹೋಗಿದ್ದ ಮಿ|| ಹ್ಯಾರಿಮನ್ ಅವರು ರಷ್ಯನರ ಸಾಹಸವನ್ನು ಕುರಿತು ಹೀಗೆ ಹೇಳಿದರು—

ಇಂಗ್ಲೆಂಡ್ ಮತ್ತು ಅಮೆರಿಕಗಳ ಪ್ರಾಮುಖ್ಯವಾದ ಕಾರ್ಯವು ಈಗ ರಷ್ಯಕ್ಕೆ ಸಾಮಾನುಗಳ ಸಹಾಯವನ್ನು ಒದಗಿಸಬೇಕಾದುದು. ಮತ್ತು ಭರವಸೆಯನ್ನು ಕೊಡಬೇಕಾದುದು. ಅಲ್ಲಿ ಹೊಸ ಗಣಿಗಳು ತೆಗೆಯಲ್ಪಟ್ಟಿವೆ ಹೊಸ ಎಣ್ಣೆಯ ಬಾವಿಗಳು ಕೊರೆಯಲ್ಪಟ್ಟಿವೆ. ಹೊಸಭೂಗಳು ವ್ಯವಸಾಯ ಮಾಡಲ್ಪಡುತ್ತಿವೆ ಇಷ್ಟನ್ನೂ ಮಾಡಿಕೊಂಡು ಶತ್ರುಗಳೊಡನೆ ಹೋರಾಡುತ್ತಿದ್ದಾರೆ.

ಸಿಂಗಪುರವು ಹೋದದ್ದೇಕೆ?

ಆಸ್ಟ್ರೇಲಿಯದ ಪ್ರಧಾನಾಮಾತ್ಯರಾದ ಮಿ|| ಕರ್ಟಿನ್‌ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಪ್ರತಿನಿಧಿಗಳ ಸಭೆಯಲ್ಲಿ— ಮಿ|| ಕರ್ಟಿನ್‌ರವರು ಪ್ರೆಸಿಡೆಂಟ್ ರೂಸ್‌ವೆಲ್ಟರವರ ಆಹ್ವಾನದ ಮೇಲೆ ವಾಷಿಂಗ್‌ಟನ್ನಿಗೆ ತೆರಳಿದರೆಂದೂ ಸಿಂಗಪುರವು ಜನಬಲವಿಲ್ಲದುದರಿಂದ ಶತ್ರುವಶವಾಗಲಿಲ್ಲ ತಪ್ಪು ಮಾರ್ಗದಲ್ಲಿ ಯುದ್ಧವನ್ನು ಮುಂದುವರಿಸಿದುದರಿಂದ ಕೈಬಿಟ್ಟುಹೋಯಿತೆಂದೂ ಸೈನ್ಯವೂ ವಿಮಾನಗಳೂ ಸಾಕಾದಷ್ಟು ಇದ್ದಿತಾದರೂ ಬರ್ಮಾದ ರಸ್ತೆಯನ್ನಾದರೂ ಬೇಕಾದಾಗ ಸುರಕ್ಷಿತವಾಗಿ ಕಾಪಾಡುವುದಂತೂ ಸಾಧ್ಯವಿದ್ದಿತು ಎಂದು ಸರ್ ಅರ್ಲ್‌ಪೇಜ್ ಅವರು ತಿಳಿಸಿದರು. ಆಸ್ಟ್ರೇಲಿಯಕ್ಕೆ ಅಪಾಯವು ಇನ್ನೂ ಇದೆಯೆಂದೂ ಪ್ರತಿಯೊಬ್ಬರ ಅತ್ಯಲ್ಪ ಸಹಾಯವೂ ಸಹಕಾರವೂ ಆತ್ಯಾವಶ್ಯಕವೆಂದೂ ಹೇಳಿದರು.

ಸುಬ್ಬಕೃಷ್ಣಯ್ಯ ಟೂರ್ನಿ

ನೆನ್ನೆ ಮೈಸೂರು ರೋವರ್ಸ್ ಕ್ಲಬ್ಬಿಗೂ ಮತ್ತು ಮೈಸೂರು ಮುಸ್ಲಿಂಸ್ 'ಎ'ಗೂ ಇದ್ದ ಪಂದ್ಯದಲ್ಲಿ ಯಾರೂ ಗೋಲುಗಳನ್ನು ಹೊಡೆಯದೇ ಇದ್ದುದರಿಂದ ಪಂದ್ಯವು ಡ್ರಾ ಆಯಿತು

ಎರಡನೇ ಅರ್ಧದಲ್ಲಿ ಮುಸ್ಲಿಂಸ್ ಕ್ಲಬ್ಬಿನ ಕರೀಂಖಾನ್ ಎಂಬುವರು ರೋವರ್ಸ್ ಟೀಮಿನ ಫುಲ್‌ಬ್ಯಾಕ್ ಆದ ಜಯಸಿಂಹ ಎಂಬುವರನ್ನು ಹೊಡೆದಿದ್ದರಿಂದ ರೆಫ್ರಿಯವರಾದ ಶ್ರೀನಿವಾಸಯ್ಯಂಗಾರ್ಯರು ಕರೀಂಖಾನರನ್ನು ಆಟದ ಮೈದಾನದಿಂದ ಹೊರಕ್ಕೆ ಕಳುಹಿಸಿದರು.

ರೋವರ್ಸ್ ಕಡೆ ಗೋಲ್ ಕೀಪರ್ ಆದ ಪಾಲ್ ಎಂಬುವರು ಅದ್ಭುತವಾಗಿ ಆಡಿ ಪ್ರೇಕ್ಷಕರ ಮನಸ್ಸಂತೋಷಗೊಳಿಸಿದರು

ಈ ದಿನ ಬ್ಲೂಸ್ 'ಎ' ಟೀಮಿಗೂ ಮುಸ್ಲಿಂಸ್ 'ಬಿ' ಟೀಮಿಗೂ ಪಂದ್ಯವಿರುತ್ತದೆ.

ರಾಜಧಾನಿಯ ಪರಿಸ್ಥಿತಿ

ನಿನ್ನೆ ಸಂಜೆ ಕೃಷ್ಣರಾಜನಗರದಿಂದ ದಸ್ತಗಿರಿಯಾದವರು ಆರುಮಂದಿಗಳನ್ನು ಇಲ್ಲಿಗೆ ಕರೆದುಕೊಂಡಿದ್ದಾರೆ. ಇಬ್ಬರು ವಿದ್ಯಾರ್ಥಿಗಳೆಂದೂ ನಾಲ್ಕು ಮಂದಿ ವಯಸ್ಕರೆಂದೂ ತಿಳಿದುಬಂದಿದೆ

ಚಾಮರಾಜನಗರದಲ್ಲಿ ಶ್ರೀ ಗೋಪಾಲರಾವ್ ಎಂಬುವರು ಬಂಧಿಸಲ್ಪಟ್ಟಿರುವರು.

ಇಂದು ಪ್ರಾತಃಕಾಲ ಶ್ರೀ ರಾಮಚಂದ್ರ ಅರಸ್ ಎಂಬ ವಿದ್ಯಾರ್ಥಿಯನ್ನು ಬಂಧಿಸಿರುವರೆಂದು ಸುದ್ದಿ. ಇವರು ಕೋಲಾರದ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಶ್ರೀ|| ಆರ್. ಪುಟ್ಟರಾಜೇಅರಸು ಎಂ. ಎ. ಬಿ. ಎಲ್. ಅವರ ಮಕ್ಕಳೆಂದು ತಿಳಿದುಬಂದಿದೆ.

ನಾರೀಕುಪ್ಪಂ ಸ್ಟೇಷನ್ ಬಳಿ ಕಂಬಿಯ ಮೇಲೆ ಅಡ್ಡವಾಗಿ ಕಲ್ಲುಗಳನ್ನು ಇಟ್ಟಿದ್ದರೆಂದು ಸುದ್ದಿ ಬಂದಿದೆ

ತುಮಕೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಚನ್ನಪ್ಪನವರನ್ನು ಬಂಧಿಸಲಾಗಿದೆ.

—

ಬೊಂಬಾಯಿಯ ಸುದ್ದಿಗಳು

ಮೊನ್ನೆ ನಡೆದ ಗಲಾಟೆಯಲ್ಲಿ ಬೊಂಬಾಯಿ ಸಿಟಿ ಪ್ರಾಮುಖ್ಯ ಪ್ರದೇಶಗಳಲ್ಲಿ ಪೋಲೀಸ್ ಕಮಿಷನರು, ಕಳೆದ ಭಾನುವಾರದಿಂದ ಕರ್ಫ್ಯೂ ಆರ್ಡರನ್ನು ಜಾರಿಗೆ ತಂದಿದ್ದಾರೆ.

ಮೊನ್ನೆ ಬೆಳಿಗ್ಗೆ ಕೆಲವು ಜನ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಮೆರವಣಿಗೆ ಹೊರಡಬೇಕೆಂದು ಪ್ರಯತ್ನಿಸಿದರು, ಪೋಲೀಸರು ಇದಕ್ಕೆ ಅವಕಾಶ ಕೊಡಲಿಲ್ಲ

ಒಬ್ಬ ಕಾಂಗ್ರೆಸ್ ಸ್ವಯಂಸೇವಕಿಯನ್ನೂ ಇಬ್ಬರು ಮಹನೀಯರನ್ನೂ ಪೋಲೀಸರು ಬಂಧನದಲ್ಲಿಟ್ಟಿದ್ದಾರೆ.

ಸಿಟಿಯಲ್ಲಿ ಈಗಿನ ಗಲಭೆಯಲ್ಲಿ ೧೫೬ ಜನ ಮಹಿಳೆಯರನ್ನು ಮತ್ತು ೨೦ ಜನ ಮಹನೀಯರನ್ನು ದಸ್ತಗಿರಿ ಮಾಡಿದ್ದಾರೆ.

ಸ್ಕೂಲು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಾಜರಿಯು ತೀರಾ ಕಡಿಮೆಯಾಗಿದೆ ಪಿಕೆಟ್ ಮಾಡಿದವರನ್ನು ದಸ್ತಗಿರಿ ಮಾಡಿದ್ದಾರೆ.

—

ಇಂದಿರಾ ದಂಪತಿಗಳ ಬಂಧನ

ಶ್ರೀಮತಿ ಇಂದಿರಾನೆಹರೂ ಅವರ ಪತಿಗಳೂ ಸಹ ಬಂಧಿಸಲ್ಪಟ್ಟಿದ್ದಾರೆ.

ಬಂದೂಕಿನ ಸಮಿತಿಗಳು

ಇವು ಕಾಡುಹಂದಿಗಳ ಮೇಲೆ ಯುದ್ಧವನ್ನು ಹೂಡಿವೆ. ವರ್ಷಂಪ್ರತಿ ಮೂರು ಸಾವಿರ ಕಾಡು ಹಂದಿಗಳನ್ನು ಈ ಸಮಿತಿಯು ಸದೆಬಡಿದು ಕೊಲ್ಲುತ್ತಿದ್ದಾರೆ ಈ ಕಾಡು ಹಂದಿಗಳು ವ್ಯವಸಾಯದ ಭೂಮಿಗಳನ್ನು ಮತ್ತು ಬೆಳೆಗಳನ್ನು ಹಾಳುಮಾಡುತ್ತಿವೆ ಈ ಸಮಿತಿಯವರು ಸುಗ್ಗಿ ಕಾಲದಲ್ಲಿ ಶಿಕಾರಿದಾರರನ್ನು ನೇಮಕಮಾಡಿ ಮತ್ತು ಕಾಡು ಹಂದಿಗಳ ಬೇಟೆಗೆ ಬಿಡುವರು. ಈ ಶಿಕಾರಿದಾರರಿಗೆ ಕೊಡುವ ಬಂದೂಕುಗಳು ಜಿಲ್ಲೆಯ ಗ್ರಾಮಾಭಿವೃದ್ಧಿ ಸಂಘಗಳಿಗೆ ಸೇರಿದುವು. ನಾಸಿಕ್, ಸತಾರ್, ಧಾರವಾಡ್ ಜಾಲ್‌ಗಾಂ ಪ್ರಾಂತಗಳಿಂದ ಈ ಕಾಡು ಹಂದಿಗಳ ಹಾವಳಿಯು ಕಡಿಮೆಯಾಗಿದೆ ಈಗ ಸಾತ್ಪುರಾ ಬೆಟ್ಟದ ತಾಲ್ಲೂಕುಗಳಲ್ಲಿ ಈ ಯುದ್ಧವು ಮುಂದುವರಿಸಬೇಕಾಗಿದೆ.

ಸುಲಭವಾಗಿಯೂ ಮತ್ತು ಉತ್ತಮವಾಗಿಯೂ ಇರುವ ಬಟ್ಟೆಗಳು ನಿಮಗೆ ಬೇಕೋ!!

ಹಾಗಾದರೆ:

ನ್ಯಾಷನಲ್ ಎಂಪೋರಿಯಂ,

(ಮಾವರಾಸಿನ ಅಂಗಡಿ)

ಸಯ್ಯಾಜಿರಾವ್ ರಸ್ತೆ, ಮೈಸೂರು.

ಇವರಲ್ಲಿಗೆ ಬನ್ನಿ

ಮೈಸೂರಿನಲ್ಲೆಲ್ಲಾ ಪ್ರಾಮುಖ್ಯವಾದ ಪೀಸ್ ಗೂಡ್ಸ್ ವ್ಯಾಪಾರಿಗಳು ಮತ್ತು ಇತರ ಅಂಗಡಿಗಳಿಗಿಂತ ಇವರಲ್ಲಿ ಉತ್ತಮವಾದ ದಾಸ್ತಾನು ಹೊಂದಿದ ಅಂಗಡಿ

Edited printed and published by N. S[illegible], Sadhvi Press, D. Subbiah Road, Mysore.

Regd M 4342

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಮೈಸೂರು, ಬೆಂಗಳೂರಿಗೆ ತಿಂಗಳಿಗೆ ಎಂಟಾಣೆ.
ಪರಸ್ಥಳಗಳಿಗೆ ತಿಂಗಳಿಗೆ ಹತ್ತಾಣೆ.
ಪೋಸ್ಟು ಮೂಲಕ ತಿಂಗಳಿಗೆ ಒಂದು ರೂ.

ಸಾಧ್ವಿ

ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಪ್ರಚಾರವಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕಳುಹಿ ಪ್ರಯೋಜನಪಡೆಯಿರಿ. ದರಗಳಿಗೆ ಬರೆಯಿರಿ.

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

SADHWI : LEADING NATIONALIST DAILY OF MYSORE.

ಸಂಪುಟ ೧] MYSORE : SUNDAY 13-9-1942 ಮೈಸೂರು : ಭಾನುವಾರ ೧೩—೯—೪೨ [ಸಂಚಿಕೆ ೫೬

★ ಪಾರ್ಲಿಮೆಂಟಿನಲ್ಲಿ ಭಾರತದಮೇಲೆ ಚರ್ಚೆ ★

ಮೆಡಗಾಸ್ಕರಿನಲ್ಲಿ ಬ್ರಿಟಿಷರ ಮುಂದೋಟ

ಜಿನ್ನಾ—ಶ್ಯಾಮಪ್ರಸಾದ ಮುಖರ್ಜಿ ಭೇಟಿ

ಮಿ|| ಆರ್ಥರ್ ಗ್ರೀನ್‌ವುಡ್ಡರು ಕಾಮನ್ಸಿನಲ್ಲಿ ಚರ್ಚೆಯನ್ನು ಪ್ರಾರಂಭಿಸುತ್ತಾ ಮಿ|| ಚರ್ಚಿಲ್ಲರ ಭಾಷಣವು ಭಾರತದ ಮತ್ತು ಬ್ರಿಟನ್ನಿನ ಸಂಬಂಧವನ್ನು ಅಭಿವೃದ್ಧಿಪಡಿಸುವಂತಿಲ್ಲ. ನಿನ್ನೆ ನಡೆದ ಸಭೆಯಲ್ಲಿ ಅನೇಕ ಸದಸ್ಯರು ಪ್ರತಿಕೂಲವಾದ ಅಭಿಮತವನ್ನು ತಿಳಿಸಿರುತ್ತಾರೆ. ಇಂಡಿಯಾದ ಪರಿಸ್ಥಿತಿಯ ವಿಷಯದಲ್ಲಿ ತುಂಬಾ ವಿಸ್ತಾರವಾದ ಲಾವಣಿ ಇತ್ತು. ಅವರೆ ಅದನ್ನು ಇಾದು ನಾನು ಹೇಳುವುದಿಲ್ಲ. ಚರ್ಚಿಲ್ಲರ ಹೇಳಿಕೆಯು ಸಂಯುಕ್ತ ಸಂಸ್ಥಾನದಲ್ಲಿ ಒಳ್ಳೆಯ ಅಭಿಪ್ರಾಯವನ್ನು ಪಡೆಯುವುದೆಂದು ಹೇಳಲಾರೆ. ಇಂತಹ ಸಂದಿಗ್ಧ ಸಮಯದಲ್ಲಿ ಮನಸ್ಸಿನ ಅಕ್ರ.

ಆದ್ದರಿಂದ ನಾವು ಸರ್ಕಾರವನ್ನು, 'ಈ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡಲ್ಲಿ ಸಂಧಾನ ನಡೆಸಲು ಮುಂದೆ ಬರಲು ತಯಾರಿದ್ದೇವೆ' ಎಂದು ಒಂದು ಹೇಳಿಕೆಯನ್ನು ಕೊಡಲು ಪ್ರೋತ್ಸಾಹ ಪಡಿಸುತ್ತೇವೆ.

ಮಿ|| ಜರಾಲ್ಡ್ ಪಾಮರ್‌ರವರು ಮಾತನಾಡುತ್ತಾ ಕಾಂಗ್ರೆಸ್ಸಿನಲ್ಲೆ ಒಂದು ಪ್ರಗತಿಪರಯುತವಾದ ಒಪ್ಪಂದಕ್ಕೆ ಬರಲು ಅನೇಕರು ತಯಾರಿದ್ದಾರೆಂದೂ, ಆದರೆ ಗಾಂಧಿಯವರು ತಮ್ಮ ಪ್ರಭಾವವು ಕುಗ್ಗುವುದೆಂಬ ಆ ಭೀತಿಯಿಂದ ಅದಕ್ಕೆ ಅಡ್ಡಿಯಾಗಿರುವರೆಂದೂ ಹೇಳಿದರು.

ಮಿ|| ವಿಲ್‌ಫ್ರೆಡ್ ರಾಬರ್ಟ್ಸರವರು ಮಾತನಾಡುತ್ತಾ ಗಾಂಧಿಯವರನ್ನು ಜಪಾನಿನ ಮಿತ್ರರೆಂದು ಕರೆಯುವುದನ್ನು ಒಪ್ಪುವುದಕ್ಕಾಗುವುದಿಲ್ಲವೆಂದೂ, ಅವರು ಯುದ್ಧದ ವಿರೋಧಿಗಳೆಂದೂ ಇವರಿಗೆ ಯುದ್ಧಕಾಲದಲ್ಲಿ ತೊಂದರೆಗಳು ಒದಗುವುದು ಸಹಜವೆಂದು ಪಂ|| ನೆಹ್ರು ಗಾಂಧಿ ಮುಂತಾದ ಮುಖಂಡರನ್ನು ಬಂಧಿಸಬೇಕಾದುದಕ್ಕೆ ವಿಷಾದಿಸಬೇಕೆಂದೂ ಹೇಳಿದರು.

ಮುಂಬಾಯಿಯ ಮಾಜಿ ಗವರ್ನರಾದ ಸರ್ ಫ್ರೆಡ್ರಿಕ್ ಸ್ಟೈಕ್ಸ್‌ರವರು ಮಾತನಾಡುತ್ತಾ ಕಾಂಗ್ರೆಸ್ಸಿನವರು "ಬ್ರಿಟಿಷರು ಭಾರತದಿಂದ ಆಚೆಗೆ ಹೋಗಬೇಕೆಂಬ ತಮ್ಮ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳುವವರೆಗೂ ಅವರೊಡನೆ ಸಂಧಾನ ನಡೆಸಕೂಡದೆಂದು, ಹಾಗೆ ನಡೆಸಿದಲ್ಲಿ ದೇಶದಲ್ಲಿ ದಂಗೆಯುಂಟಾಗುವುದು. ಮಿತ್ರರಾಷ್ಟ್ರಗಳಲ್ಲಿ ಇನ್ನೂ ಕಾಂಗ್ರೆಸ್ ಸಂಸ್ಥೆಯೇ ಭಾರತವನ್ನು ಪ್ರತಿನಿಧಿಸುವುದೆಂಬ ಅಭಿಪ್ರಾಯ ಇರುವುದು ನಮ್ಮ ದುರದೃಷ್ಟವೇ ಸರಿ ಎಂದು ಹೇಳಿದರು.

ಚರ್ಚಿಲ್ಲರ ಹೇಳಿಕೆಯ ಮೇಲೆ ಸ್ವಾರಸ್ಯವಾದ ಪ್ರಶ್ನೋತ್ತರಗಳಾದವು. ಕಾಂಗ್ರೆಸ್ಸು ಭಾರತದ ಪ್ರತಿನಿಧಿಯಲ್ಲವೆಂದು ಹೇಳಿದ್ದಕ್ಕೆ ನಾರ್ಮನ್ ಬೇವಿನ್ಸರು ಇದರ ಸಂಖ್ಯೆಯನ್ನು ತೆಗೆದುಕೊಂಡಿರುವಿರೆಂದು ಪ್ರಶ್ನಿಸಿದರು. ಮಿ|| ಶಿನ್‌ವೆಲ್ಲರು ಪ್ರಶ್ನಿಸುತ್ತಾ ಚರ್ಚಿಲ್ಲರ ಹೇಳಿಕೆಯು ಮಂತ್ರಿಮಂಡಲದವರೆಲ್ಲರ ಅನುಮೋದನೆ ಪಡೆದಿದೆಯೇ ಎಂದು ಕೇಳಿದ್ದಕ್ಕೆ ಚರ್ಚಿಲ್ಲರು ಹೌದೆಂದರು. ಅದಕ್ಕೆ ಶಿನ್‌ವೆಲ್ಲರು 'ಅದರ ಪರಿಣಾಮ ಎದುರಿಸಬೇಕಾಗಿದೆ' ಎಂದು ಹೇಳಿದರು.

ಕಾಂಗ್ರೆಸ್ಸಿನ ಕ್ರಾಂತಿಕಾರಕ ಚಳುವಳಿಯಲ್ಲಿ ಹಿಂಸೆಯಿದೆ ಪ್ರಶ್ನಿಸುತ್ತಾ ಈ ಅಪಾದನೆಗಳನ್ನು ಕಾಂಗ್ರೆಸ್ಸಿನ ಮೇಲೆ ಹೊರಿಸಬೇಕಾದರೆ ತಕ್ಕಷ್ಟು ಸಾಕ್ಷ್ಯಗಳಿಲ್ಲವೆ ಹಾಗೆ ಹೊರಿಸಲಾಗುವುದು? ಎಂದರು. ಅದಕ್ಕೆ ಅಮೆರಿಯವರು ನಮ್ಮಲ್ಲಿ ಸಾಕಷ್ಟು ರುಜುವಾತಿದೆ, ಆದರೆ ಅದನ್ನು ಪ್ರಕಟಿಸಲಾಗದೆಂದು ತಿಳಿಸಿದರು.

ಚರ್ಚೆಗೆ ಉತ್ತರಕೊಡುತ್ತಾ ಅಮೆರಿಯವರು, ಇಂಡಿಯಾದ ಅದೃಷ್ಟಪರೀಕ್ಷೆಯು ಇಂಡಿಯಾದ ಜನಗಳ ಏಕಮತ್ಯದಿಂದಲೇ ಆಗಬೇಕು. ಆದರೆ ಚರಿತ್ರೆಯ ಯಾವ ಕಾಲದಲ್ಲೂ ಇಂತಹ ಐಕ್ಯತೆ ದೊರೆತಿರಲಿಲ್ಲವೆಂದು ಹೇಳಬಹುದು. ಮಿ|| ಅಮೆರಿಯವರು ಸೋಷಸ್ ವಿಷಯದಲ್ಲಿ ಮಾತನಾಡುತ್ತಾ ೬ ವರ್ಷಗಳ ಹಿಂದೆ ನಡೆದ ಚುನಾವಣೆಗಳಲ್ಲಿ ಮುಸ್ಲಿಂ ಜನಗಳ ಒಟ್ಟು ಬಂಬಲವು ಕಾಂಗ್ರೆಸ್ಸಿಗೆ ಅಧಿಕವಾಗಿತ್ತು, ಕಾಂಗ್ರೆಸ್ಸಿನ ಆಡಳಿತದಲ್ಲಿ ಮುಸ್ಲಿಂ ಸಂಘದ ಶಕ್ತಿಯೇ ಸಂಪೂರ್ಣವಾಯಿತು. ಕಾಂಗ್ರೆಸ್ಸಿಗೆ ಸೇರಿರುವ ಮುಸ್ಲಿಂರೆಲ್ಲರೂ ಇಂದು, ತಾತ್ಕಾಲಿಕ ಪ್ರತಿನಿಧಿಗಳಾಗಿರುವರು. ಇದು ರಾಷ್ಟ್ರವಲ್ಲವಲ್ಲದೆ ಸಂಯುಕ್ತ ಸಂಸ್ಥಾನದಲ್ಲೂ ಅಸ್ಥೈರ್ಯವನ್ನೂ ಎಚ್ಚರಿಕೆಯನ್ನೂ ಉಂಟುಮಾಡಿದೆ. (ಕಾಂಗ್ರೆಸ್ ಇಂದು ಕೇಳುತ್ತಿರುವ ವಿಚಾರಗಳಲ್ಲಿ) ಇಂಡಿಯಾವು ಅನೇಕ ಸಂಘಗಳನ್ನೊಳಗೊಂಡಿದೆ. ಅವರಲ್ಲಿ ಕೆಲವು ಮಾತ್ರ ಕಾಂಗ್ರೆಸ್ಸಿನೊಡನೆ ಸಹಕರಿಸಿವೆ. ಇವರಲ್ಲಿ ಯಾವುದು ಶಾಂತಿಯಾದ ಅಪೇಕ್ಷೆಯನ್ನು ಬಲವಂತಪಡಿಸುತ್ತವೆಯೆಂಬುದನ್ನು ತಿಳಿಯಲಾಗುವುದಿಲ್ಲ. ಸರ್ ಸ್ಟಾಫರ್ಡ್ ಕ್ರಿಪ್ಸರು ಇಂಡಿಯಾವನ್ನು ಬಿಟ್ಟು ಬಂದಾಗಿನಿಂದ ಗಾಂಧೀಜಿಯವರ ಪ್ರೇರಣೆಯಿಂದ ಇಂಡಿಯಾದಲ್ಲಿ ಈ ರೀತಿ ಸರ್ಕಾರದ ವಿರೋಧವಿದೆ. ಅದರೆ ಗಾಂಧಿಯವರು ಹಿಂದಿನ ಚಳುವಳಿಗಿಂತ ಈಗಿನ ಚಳುವಳಿ ವಿಪರೀತವಾಗಿದೆಯೆಂದು ಹೇಳುತ್ತಿದ್ದರು.

ಇಂಡಿಯಾದಲ್ಲಿ ವ್ಯವಸ್ಥೆ ಇನ್ನೂ ಕೆಳದುಕೆಟ್ಟಿಲ್ಲ. ಆದರೆ ಬಹುಕಾಲ ಹೀಗೆಯೇ ಇರದು. ಭಾರತದಲ್ಲಿ ಸ್ವಾತಂತ್ರ್ಯ ಸಂಪಾದಿಸುವ ಮತ್ತು ಸಂಪತ್ತನ್ನು ಉಪಯೋಗಿಸಿಕೊಳ್ಳುವ ಅನುಕೂಲವಾದ ರಾಜ್ಯಾಂಗ ವ್ಯವಸ್ಥೆಯನ್ನು ಇಂಡಿಯಾದವರೆ ಒಪ್ಪಿಗೆಮಾಡಿಕೊಂಡರೆ ಈ ತೊಂದರೆ ಬಹಳ ಕೊನೆಗಾಣುವುದು.

ಮೆಡಗಾಸ್ಕರ್ ಕದನ

ಬ್ರಿಟಿಷ್ ಸೈನ್ಯಗಳು ಮಡಗಾಸ್ಕರಿಗೆ ರಾಜಧಾನಿ ಕಡೆಗೆ ನುಗ್ಗಿ ಹೋಗುತ್ತಿವೆ. ಮತ್ತೆ ರಾತ್ರಿ ರಾಜಧಾನಿಯಿಂದ ೧೪೦ ಮೈಲಿ ದೂರದಲ್ಲಿರುವುವು ಎಂದು ವರ್ತಮಾನ.

ಪೈರುಗಳ ಸಂಹಾರ

ನಿನ್ನೆಯಿಂದ ಹಿಂದಿನಂತೆ ಬೆಂಗಳೂರು ಪ್ಲೇಗೂ ಮನೆಗಳಿಗೆ ದಾಳಿ ಪೈರುಗಳು ಹಿ ಹಾ ದ ಟ ಮೊರೆಬಿದ್ದಿವೆ

ತಾಯಿನಾಡುವಿಗೆ ನಮ್ಮ ಶುಭಾಶಯ

ವೃತ್ತಪತ್ರಿಕಾ ಪ್ರಪಂಚದಲ್ಲಿ ಹದಿನೈದು ವರ್ಷಗಳನ್ನು ಕಳೆದು ಹದಿನಾರನೇ ವರ್ಷದಲ್ಲಿ ನಿನ್ನೆಯಿಂದ ಅಡಿಯಿಡಲಿಕ್ಕಿಸಿರುವ "ತಾಯಿನಾಡು" ವಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಇದು ವಾರಪತ್ರಿಕೆಯಾಗಿ ಜನ್ಮತಾಳಿದ್ದು ನಮ್ಮ ಈ ಕಾರ್ಯಾಲಯದಲ್ಲಿಯೆ. ವಾರಕ್ಕೆರಡು, ಸಾರಿಯಾಗಿ ಬದಲಾಯಿಸಿ ದಿನಚರಿಪತ್ರಿಕೆಯಾಗಿ ಬಾಳಿ ದಿನಚರಿಯಾಗುವವರೆಗೂ ಇಲ್ಲಿಯೇ ಬೆಳೆದು ನಂತರ ಬೆಂಗಳೂರಿನಲ್ಲಿ ಕಳೆದ ಸುಮಾರು ೧೪ ವರ್ಷಗಳಿಂದ ನೆಲಸಿ ಜನ್ಮತಾಳಿದ ವಾರಪತ್ರಿಕೆಯು ಜೊತೆಗೆ ಈಗಿನ ದೊಡ್ಡ ಕೃತಿಯ ದಿನಪತ್ರಿಕೆಯು ಮಾತ್ರವಲ್ಲದೆ ಇಂಗ್ಲೀಷ್ ವೈನಂದಿನ ಪತ್ರಿಕೆಯಾಗಿಯೂ ಇಡೀ ದೇಶದ ಸರ್ವಜನ ಪತ್ರಿಕೆಯಂತೆ ನಡೆಯುತ್ತಿರುವುದು ತುಂಬಾ ಸಂತೋಷಪ್ರದವಾಗಿದೆ.

ಅನಿವಾರ್ಯವಾಗಿ ಈ ಪತ್ರಿಕೆಗಳ ಸಂಚಾಲಕತ್ವದಿಂದ ದೂರವಾಗಿರುವ ಶ್ರೀ || ಪಿ ಆರ್ ರಾಮಯ್ಯನವರು ಚಾತ್ರಿಕರಾಗಿ ಹಿಂದಿನ ನೂತನ ಸಂಪಾದಕರು ಸಹಕಾರದೊಡನೆ ಮತ್ತಷ್ಟು ಹುರುಪಿನಿಂದಲೂ ಜನಪ್ರಿಯವಾಗಿಯೂ ಇರುವ ಪತ್ರಿಕೆಯನ್ನು ನಡೆಸಲಹುದಾಗುವಂತೆ ಸರ್ವಶಕ್ತನಾದ ಗಣಾಧಿಪನು ಎಲ್ಲ ಎಡರುತೊಡರುಗಳನ್ನೂ ನಿವಾರಿಸಿ ಆಶೀರ್ವದಿಸಲೆಂದು ಆ ಪತ್ರಿಕೆಗೆ ನಮ್ಮ ಶುಭಾಶಯಗಳನ್ನು ಕೋರುತ್ತೇವೆ. ಅಲ್ಲದೆ ನಮ್ಮ ಇತರ ಸಹೋದ್ಯೋಗಿ ಪತ್ರಿಕಾ ಸಂಪಾದಕರುಗಳೂ, ಸಂಚಾಲಕರೂ ಶೀಘ್ರವಲ್ಲಿಯೇ ಎಂದಿನಂತೆ ತಮ್ಮ ಕಾರ್ಯಗಳಿಗೆ ಹಿಂತಿರುಗಿ ಜನತಾಸೇವೆ ಗೈಯ್ಯುವಂತಾಗಲೆಂದು ಹಾರೈಸುವೆವು

[ಸಂ ಸಾ]

ಚರ್ಚಿಲರ ಹೇಳಿಕೆಯ ಮೇಲೆ ಪ್ರಮುಖ ಮುಸ್ಲಿಮರ ಅಭಿಪ್ರಾಯ

ಸಿಂಧ್ ಪ್ರಾಂತ್ಯದ ಮುಖ್ಯಮಂತ್ರಿಗಳಾದ ಖಾನ್ ಬಹದ್ದೂರ್ ಅಲ್ಲಾಭಕ್ಷ್‌ರವರು "ಚರ್ಚಿಲರು ಭಾರತದ 9 ಕೋಟಿ ಮುಸ್ಲಿಮರು ಸ್ವಾತಂತ್ರ್ಯದ ಪರವಾಗಿರುವರೆಂದೂ, ದೇಶಭಕ್ತಿಯಲ್ಲಿ ಹಿಂದು ಬಾಂಧವರಿಗೇನೂ ಕಡಿಮೆಯಿಲ್ಲವೆಂಬುದನ್ನು ಲೀಗ್ ಮುಸ್ಲಿಂಗಳ ಪರವಾಗಿ ಪ್ರತಿಭಟಿಸುತ್ತೇನೆ. ಇಂದಿನ ಪಟ್ಟುಳಿಯು ಬ್ರಿಟನ್ನಿಗೆ ಸರಿಯಾದ ಸಮಾಲೋಚನೆಯಲ್ಲ. ಮಿ|| ಚರ್ಚಿಲರು ಇದನ್ನು ಚೆನ್ನಾಗಿ ಅರಿಯಲಿ. ಅವರು ಸಿರಾಶೆಗೊಳಿಸಿ, ಗಾಬರಿಗೊಳಿಸಿ ಏನೂ ಇಲ್ಲವೆಂದು ತಿಳಿದಿರುವರು. ಆ ರೀತಿ ಸರ್ಕಾರವು ರಾಜಕೀಯ ಬಿಕ್ಕಟ್ಟನ್ನು ಪರಿಹರಿಸದೆ ದೇಶವು ಹದಗೆಡುತ್ತಿದೆ. ನನ್ನ ಸೋದರರಾದ ಅವರನ್ನು ನೋಡಿ ಬಹುದೊಡ್ಡ ಜವಾಬ್ದಾರಿಯುಳ್ಳವರು ಜನ್ಮಕೊಂಡವರೆ ಪರಿಹಾರವಿದ್ದಲ್ಲ"

ನಿರಾಕರಣೆ

ಅಖಿಲಭಾರತ ಮೋಮಿನ್ ಕಾನ್ಫರೆನ್ಸಿನ ಅಧ್ಯಕ್ಷರಾದ ಸೇ ಜಹೀರ್ ಜಹೀರುದ್ದೀನರು 9

ರಾಜಗೋಪಾಲಾಚಾರಿಯವರ ಹೇಳಿಕೆ

"ಇಂಡಿಯಾವು ಉತ್ಕಟ ಪರಿಸ್ಥಿತಿಯಲ್ಲಿದೆ. ವೈಸರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್ಲಿನಲ್ಲಿರುವ ಮಂತ್ರಿಗಳು ಪ್ರಪಂಚದ ಯಾವ ರಾಷ್ಟ್ರೀಯ ಸರ್ಕಾರದಲ್ಲೂ ಇಲ್ಲದಷ್ಟು ಬುದ್ಧಿವಂತರಾಗಿರುತ್ತಾರೆ. ಆದರೆ ಪ್ರಜೆಗಳ ವಿಶ್ವಾಸವು ಇವರನ್ನು ಆಶ್ರಯಿಸಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಭಾರತದ ಪ್ರಜೆಗಳು ಆತ್ಮಸ್ಫೂರ್ತಿ ಬಂದು ಯುದ್ಧದಲ್ಲಿ ಭಾಗವಹಿಸಿಲ್ಲ. ಆ ರೀತಿಯ ಅಭಿಮಾನವು ಈಗ ರೂಪುಗೊಂಡಿಲ್ಲ. ಇದಕ್ಕೆ ಭಾರತ ಸ್ವಾತಂತ್ರ್ಯ ಪಡೆಯದಿರುವುದೇ ಕಾರಣ.

ಆಡಳಿತದ ರೀತಿಯು ಎಷ್ಟು ಬುದ್ಧಿವಂತಿಕೆಯ ಪ್ರವೀಣತೆಯಿಂದ ಅನ್ವಯವಾಗಿದ್ದರೂ ಕೆಳಗಿನ ಅಧಿಕಾರಿಗಳು ಮತ್ತು ಇತರ ಭಾಗಗಳು ಅಬಲವಾಗಿದ್ದರೆ ಅದರಿಂದ ಯಾವ ಪ್ರಯೋಜನವೂ ಆಗದು. ಪ್ರಸ್ತುತ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪೈಲಿನಲ್ಲಿದೆ. ಮುಸ್ಲಿಂ ಲೀಗ್ ತನ್ನ ಪಟ್ಟಿನ ಸ್ನೇಹ ಮಾಡುತ್ತಿದೆ. ಈಗ ಬ್ರಿಟನ್ನಿನ ಮುಂದಿನ ಎಂದೇನು. ಮಾಗಿಲ್ಲದಿದ್ದ ಭದ್ರವಾದ ಮಂತ್ರಿಮಂಡಲಿಯು ವಿಸರ್ಜನೆ ಹೊಂದುತ್ತದೆ. ಪ್ರಗತಿಪರವಾದ ವಿಪತ್ತು ದೊಡ್ಡದಾಗುತ್ತಾ ಬರುತ್ತದೆ. ಆದ್ದರಿಂದ ಭಾರತ ಸ್ವಾತಂತ್ರ್ಯ ಘೋಷಿಸಬೇಕು. ಭಾರತದ ಕೂಡಲೇ ರಾಷ್ಟ್ರೀಯ ಸರ್ಕಾರ ನೇಮಕವಾಗಬೇಕು. ಜನತೆಯ ವಿಶ್ವಾಸಕ್ಕೆ ಪಾತ್ರರಾಗಿ ಬ್ರಿಟನ್ನು ಇಂತಹ ಪರಿಸ್ಥಿತಿಯಲ್ಲಿ ಕರ್ತವ್ಯವನ್ನು ಮಾಡಬೇಕು ಎಂದು ತಿಳಿಸುತ್ತಾರೆ.

ಜಿನ್ನಾ-ಮುಖರ್ಜಿ ಭೇಟಿ

ಮುಸ್ಲಿಂಲೀಗ್ ಅಧ್ಯಕ್ಷರಾದ ಮಿ|| ಜಿನ್ನಾರವರು ಮತ್ತು ಹಿಂದೂ ಮಹಾಸಭೆಯ ಅಧ್ಯಕ್ಷರಾದ ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರು ನಿನ್ನೆ ದಿನ ಸಂಜೆ ಜಿನ್ನಾರವರ ಮನೆಯಲ್ಲಿ ಸೇರಿ ಸಮಾಲೋಚನೆ ನಡೆಸಿದರು. ವಿವರಗಳು ಗೊತ್ತಾಗಿಲ್ಲ.

ಮೆರವಣಿಗೆ ನಡೆಸಿದ್ದಕ್ಕೆ ಶಿಕ್ಷೆ

ಪೂನಾದಲ್ಲಿ ಮೆರವಣಿಗೆ ನಡೆಸಿದ್ದಕ್ಕೆ ಮೂರು ಮಂದಿ ವಿದ್ಯಾರ್ಥಿಗಳಿಗೆ ತಲಾ ೬ ತಿಂಗಳು ಕಠಿಣ ಸಜಾ ಮತ್ತು ೧೦೦ ರೂ ಜುಲ್ಮಾನೆ ತಪ್ಪಿದ್ದಲ್ಲಿ ಇನ್ನೆರಡು ತಿಂಗಳು ಸಜಾ ಇನ್ನೂ ೨ ಮಂದಿ ವಿದ್ಯಾರ್ಥಿಗಳಿಗೆ ತಲಾ ೩ ತಿಂ ಳು ಕಠಿಣ ಸಜಾ ವಿಧಿಸಲ್ಪಟ್ಟಿದೆ.

ಕೋಟಿ ಭಾರತೀಯ ಮುಸ್ಲಿಮರು ಕಾಂಗ್ರೆಸ್ಸಿನ ಆವರಾ ವಿರೋಧಿಗಳು ಎಂದು ಮಿ|| ಚರ್ಚಿಲರು ಮಿಥ್ಯಾಪವಾದದ ಸೇವನ ಅಥ್ಯಂತ ಸಾಹಸವೇ ಸರಿ ಇಷ್ಟುಕೂಡ ಎಷ್ಟು ಜವಾಬ್ದಾರಿ ತಪ್ಪಿದ್ದು ಇದು ಎಂದು ಹೇಳಲು ಸಾಧ್ಯ ಹುಡಿಲ್ಲ

ಮಿ|| ಚರ್ಚಿಲರು ಹೀಗೆ ಹೇಳುವುದು ಮತ್ತೆ ಪಿ... ತಮ್ಮ ಹೇಳಿಕೆ ತೀರಾ ... ಎಂದು ತಪ್ಪು ... ಮಾಡಿ

ಗೌರೀ—ಗಣೇಶ ವ್ರತಗಳು

ಇಂಡಿಯಾ ದೇಶದ ಹಿಂದೂ ಜನರಿಗೆಲ್ಲಾ ಇಂದು, ನಾಳೆ, ಎರಡು ದಿವಸಗಳೂ ಬಹು ಸಂತೃಪ್ತಿಯ ದಿನಗಳು. ಗೌರೀ ಹಬ್ಬವೆಂದರೆ ನಮ್ಮ ಹೆಣ್ಣು ಮಕ್ಕಳಿಗೆಲ್ಲಾ ಬಲು ಸಂತೋಷದ ಹಬ್ಬವು. ಸಮೀಪಿಸಿದ ಜಾಗೆಲ್ಲಾ ಹೊಸದಾದ ಸೀರೆ, ಕುಪ್ಪಸಗಳು, ಜರತಾರಿಗಳನ್ನು ಉಟ್ಟು, ಪ್ರಾರ್ಥನೆಗಳನ್ನು ತೊಟ್ಟು ಭಕ್ತಿಯಿಂದ ಗೌರಮ್ಮನನ್ನು ಪೂಜಿಸಿ, ಇಷ್ಟಾರ್ಥಗಳನ್ನು ಬೇಡಿ, ಮರದ ಬಾಗಿನಗಳನ್ನು ಕೊಟ್ಟು, ಪಡೆದು ಸಂತೋಷದಿಂದ ನಲಿದಾಡುತ್ತಿರುವುದೆಂದು ನೋಡಲೇ ಆನಂದವನ್ನು ಉಂಟುಮಾಡುತ್ತದೆ. ಗೌರೀಪೂಜೆಯು ಸಾರ್ವಜನಿಕವಾಗಿ ನೇರವೇರಿತೆಂದರೆ ಮನೆಯಲ್ಲಿ ಹಿರಿಯರು ಹೊಂದುವ ಸಂತೋಷ. ಗೃಹಿಣಿಯ ಮನಸ್ಸಿಗೆ ಮನೆಯಲ್ಲಿ ಒಂದು ಅಶ್ವಮೇಧಯಾಗ ನಡೆದಷ್ಟು ಉಲ್ಲಾಸ!

ನಾಳೆಯ ದಿನ ಗೌರಮ್ಮನ ಮಗ ಗಣೇಶನ ಹಬ್ಬ. ಇವನು ವಿಘ್ನದ ನಿವಾರಕ. ಶಿವ ಪಾರ್ವತಿಯರ ಹಿರಿಯ ಮಗ. ಅಗ್ರಪೂಜೆಗೆ ಅರ್ಹನಾದವನು. ಇವನ ಪೂಜೆಯನ್ನು ಮಾಡಿ ಸರ್ವರೂ ಶುಭಕಾರ್ಯಗಳನ್ನು ಪ್ರಾರಂಭಿಸುವುದು ಪದ್ಧತಿ. ಪ್ರಥಮದಲ್ಲಿ ಅರ್ಚಿಸಬೇಕೆಂದು ಪ್ರಮಥಗಣಗಳಲ್ಲಿ ಉತ್ತಮನನ್ನಾಗಿ ಏರ್ಪಡಿಸಿದರು. ಸರ್ವಸಿದ್ಧಿ ಪ್ರದಾಯಕನು ವಿಶ್ವವಂದ್ಯನಲ್ಲವೆ ಮತ್ತೇನು? ವರ್ಣಾಶ್ರಮ ಭೇದಗಳಿಲ್ಲದೆ ಬಾಲವೃದ್ಧರಿಂದ ಏಕಮತ್ಯದಿಂದಲೂ ಸಂಭ್ರಮದಿಂದಲೂ ನಡೆಯುವ ಉತ್ಸವವೆಂದರೆ ಇದೇ.

ಈಗ ಎಲ್ಲೆಲ್ಲೂ ವ್ಯಾಪ್ತವಾಗಿರುವ ಯುದ್ಧವೆಂಬ ಉಪದ್ರವಗಳನ್ನು ತಪ್ಪಿಸುವುದಾಗಿ ಸಕಲವೂ ಪ್ರಾರಂಭದಂತೆ ಆಗಬೇಕೆಲ್ಲೆಂದವನ್ನೂ ದಕ್ಷಿಣ ದಿಗ್ವಿಜಯದ ಪ್ರಸಂಗ, ಜನಸಾಮಾನ್ಯರ ಹಿತವನ್ನು, ಗುಂಡಿನ ಪ್ರಸಂಗ, ಜನರ ವೇಷ ನೋಡಿ, ನಾಲ್ಕಕ್ಕೆ ಪ್ರವಾಹಗಳ ಕೊಡಿಕೆ, ಇವೇ ನೋವಿಲ್ಲದ ಮುಂಚು, ಗುಡುಗುಗಳ ಧನಿಯನ್ನು ಜಗನ್ಮಾತೆಯಾದ ಗೌರಿಯೂ, ಸರ್ವರಕ್ಷಕನಾದ ಗಣಾಧಿಪನೂ ಒಂದು ಸ್ವಲ್ಪಕ್ಕೆ ತಮ್ಮ ದೇಶದ ಅಶಾಂತಿಯನ್ನು ನಿರ್ಮೂಲಗೊಳಿಸಿ ಶಾಂತಿ ವಾತಾವರಣವನ್ನು ಕಲ್ಪಿಸುವುದರ ಮೂಲಕ ನಮ್ಮ ಸ್ವಾತಂತ್ರ್ಯಯಾಗಿ ಸರ್ವರಿಗೂ ಸುಖಶಾಂತಿ ಆರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ದಯಾಮಯನಾದ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕದ್ದಮೆಯು ವಾಪಸಾಯಿತು.

ಗಣಿಗಳಲ್ಲಿ ಪಾಲುದಾರ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದ ಅಪರಾಧಕ್ಕಾಗಿ ಕೇರಳ ಕಮ್ಯೂನಿಸ್ಟ್ ಮುಖಂಡರಾದ ಶ್ರೀ||ರಂಗರಾಜನ್ ನಂಬೂದ್ರಿಪಾದರವರ ಮೇಲೆ ಮೊಕದ್ದಮೆಯಾಗಿ ಕಲ್ಲಿಕೋಟೆ ನ್ಯಾಯಸ್ಥಾನದಲ್ಲಿ ಹಾಜರಾಗಿ ತಕ್ಕ ಕ್ಷಮಾಪಣೆ ಕೊಡಬೇಕೆಂದೂ, ಹಾಗೆ ಹಾಜರಾಗದಿದ್ದರೆ ಅವರ ಎಂಟು ಲಕ್ಷ ರೂ|| ಬೆಲೆಯುಳ್ಳ ಆಸ್ತಿಯನ್ನು ಅಟ್ಯಾಚ್ ಮಾಡಿಸಲಾಗುತ್ತೆಂದೂ ಆಜ್ಞೆಯಾಗಿದ್ದ ಮೊಕದ್ದಮೆಯನ್ನು ಮದ್ರಾಸ್ ಸರ್ಕಾರವು ಹಿಂದಕ್ಕೆ ತೆಗೆದುಕೊಂಡಿರುತ್ತೆ.

ಸರ್ ಎಂ. ಉಸ್ಮಾನರ ಅಭಿಪ್ರಾಯ

ವೈಸರಾಯ್ ಕೌನ್ಸಿಲ್ ಮೆಂಬರಾದ ಸರ್ ಎಂ. ಉಸ್ಮಾನರವರು ಮಿ|| ಚರ್ಚಿಲ್ಲರ ಹೇಳಿಕೆಯ ಸಂಬಂಧವಾಗಿ ಇಂಡಿಯಾ ಭಾರತದ ಸ್ವಾತಂತ್ರ್ಯದ ಪರಿಸ್ಥಿತಿಯ ಚಿತ್ರವನ್ನೇ ಅವರು ಕೊಟ್ಟಿರುತ್ತಾರೆ ಎಂದು ತಮ್ಮ ಅಭಿಪ್ರಾಯಪಟ್ಟಿರುವರು.

ಆಕಾಶವಾಣಿ

ಸೆಪ್ಟೆಂಬರ್ ೧೪ ನೇ ಸೋಮವಾರ

೬-೦೦ ಘಂಟೆಗಾದ ೬-೦೫ ದೇಶಭಕ್ತಿ; ಶಾಸ್ತ್ರೀಯ ಸಂಗೀತ ೬-೧೦ 'ಖಂಡೇಹಳ್ಳಿಯಲ್ಲಿ [illegible] ೬-೩೦ ವಾರ್ತೆ ೬-೪೫ [illegible] [illegible]

[illegible]

ಯುದ್ಧವಾರ್ತೆಗಳು

"ಸ್ಟಾಲಿನ್ ಗ್ರಾಡನ್ನು ಎಂದಿಗೂ ಬಿಡದೆ ಕಡೆಯ ರಕ್ತ ಬಿಂದು ಇರುವವರೆಗೆ ರಷ್ಯನರು ಶತ್ರುಗಳಿಗೆ ಬಿಟ್ಟು ಕೊಡಬಾರದು ಎಂದು ರೆಡ್ ಆರ್ಮಿಯು ತಿಳಿಸುತ್ತದೆ.

ಸ್ಟಾಲಿನ್ ಗ್ರಾಡ್ ಹತ್ತಿರದ ಒಂದು ಹಳ್ಳಿಯನ್ನು ಜರ್ಮನರು ವಶಪಡಿಸಿಕೊಂಡು, ನೊವರೊಸಿಸ್ಕ್ ಪಟ್ಟಣದ ಎಲ್ಲಾ ಬೀದಿಗಳಲ್ಲೂ ಭಾರಿ ಕದನ ನಡೆಸುತ್ತಿದ್ದಾರೆ. ಸ್ಟಾಲಿನ್‌ಗ್ರಾಡ್ ರಣಕ್ಷೇತ್ರದ ಹತ್ತಿರ, ರಷ್ಯನರಿಗೆ ಆಗಾಧ ನಷ್ಟವುಂಟಾಗಿ ವಾಪಸಾಗುತ್ತಿದ್ದಾರೆ. ರಷ್ಯನರು, ಶತ್ರುಗಳ 11 ಟ್ಯಾಂಕುಗಳನ್ನು ನಾಶಪಡಿಸಿ, 500 ಜರ್ಮನರನ್ನು ಕೊಂದಿದ್ದಾರೆ.

ನೊವರೊಸಿಸ್ಕ್ ಪಟ್ಟಣದಲ್ಲಿ ಜರ್ಮನರಿಗೆ ಭಾರಿ ನಷ್ಟವುಂಟಾದಾಗ್ಯೂ, ಬೀದಿಗಳಲ್ಲಿ ಕದನ ನಡೆಸುತ್ತಾ ಮುಂದುವರಿಯುತ್ತಲಿದ್ದಾರೆ. ಒಂದು ರೊಮೇನಿಯನ್ ಸೈನ್ಯವನ್ನು ಜರ್ಮನರು, ಹಿಂದೋಡಿಸಿದ್ದಾರೆ.

ಮದ್ರಾಸ್ ಪ್ರಾಂತ್ಯದ ಸುದ್ದಿಗಳು

ಕೊಯಮತ್ತೂರು ಡಿಸ್ಟ್ರಿಕ್ಟಿನ ಕಲಿಯಮ್ ಪಾಳ್ಯಂ ಎಂಬ ಊರಿನಲ್ಲಿ ಅಲ್ಲಿನ ಜನರು ಒಂದು ನೀರಿನ ಅಂಗಡಿಯನ್ನು ಸುಟ್ಟುಹಾಕಿದರೆಂದು ತಿಳಿಯಬರುತ್ತೆ.

ಮಾಂಗಲೂರಿನಲ್ಲಿ ೪ ೧೧ ರಲ್ಲಿ ಒಂದು ಗುಂಪು ಒಂದು ಸಭೆಯನ್ನು ಏರ್ಪಡಿಸಲು ಪ್ರಯತ್ನಿಸಿತು ಮತ್ತು ಪೋಲೀಸರ ಮೇಲೆ ಕಲ್ಲುಗಳನ್ನು ಎಸೆದರು. ಪೋಲೀಸರು ಲಾಠಿ ಪ್ರಹಾರ ನಡೆಸಿ ಗುಂಪನ್ನು ಚದುರಿಸಿದರು. ಒಂದು ಗುಂಪು ಅಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನ ಮುಂದೆ ಪಿಕೆಟ್ ಮಾಡಿದರು, ಆ ಗುಂಪನ್ನೂ ಸಹಾ ಚದುರಿಸಿದರು.

ಮದ್ರಾಸ್ ಸಿಟಿಯಲ್ಲಿ ಕಾಲೇಜು ಮತ್ತು ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಹಾಜರಿಯು ಸಾಮಾನ್ಯವಾಗಿದೆ.

ಮದ್ರಾಸ್ ಸರ್ಕಾರವು ಏಳಾವಿಪಟ್ಟಿಣ ಮತ್ತು ಕಡಪ ಜಿಲ್ಲಾ ಬೋರ್ಡುಗಳನ್ನು ಆರು ತಿಂಗಳ ಕಾಲ ರದ್ದುಪಡಿಸಿದೆ.

ಕರ್ನೂಲ್ ಕಲೆಕ್ಟರ್‌ರವರು ತಮ್ಮ ಜಿಲ್ಲೆಯಿಂದ ಈ ಬಾರಿ ಆಸ್ಪೆಲ್ಲರಿಗೆ ಸಕ್ಕರೆಯನ್ನು ಪ್ರಾಂತ್ಯದಿಂದ ಹೊರಕ್ಕೆ ಸಾಗಿಸಕೂಡದೆಂದು ಆಜ್ಞೆಮಾಡಿದ್ದಾರೆ.

ಸುಮಾರು ನಾಲ್ಕು ಸಾವಿರ ಅಮರಾವತಿ ಜನರು ರಾಷ್ಟ್ರೀಯ ಸರ್ಕಾರದ ರಚನೆ, ಕಾಂಗ್ರೆಸ್ ಮುಖಂಡರ ಬಿಡುಗಡೆ ಮುಂತಾದ ಕೆಲಸದ ಪ್ರಯತ್ನದಲ್ಲಿ ಕ್ರಮಗಿ ನೆರವಾಗಬೇಕೆಂದು ಮಿ|| ಎಂ. ಎಸ್. ಅಣೆಯವರನ್ನು ತಂತಿ ಮೂಲಕ ಪ್ರಾರ್ಥಿಸಿಕೊಂಡಿದ್ದಾರೆ.

ನೈಜಾಮ್ ಸರ್ಕಾರವು ಐವತ್ತು ಲಕ್ಷ ರೂ. ಗಳ ನೀರಿನ ಯೋಜನೆಯೊಂದನ್ನು ಮಂಜೂರು ಮಾಡಿದೆ. ಇದರಿಂದ ದಿನವೊಂದಕ್ಕೆ ಇಪ್ಪತ್ತೇಳು ಮಿಲಿಯನ್ ಗ್ಯಾಲನ್‌ಗಳ ನೀರನ್ನು ಒದಗಿಸಬಹುದಾಗಿದೆ.

ಕೊತ್ವಾಲಿಯಲ್ಲಿ ಎರಡು ಬಾಂಬುಗಳ ಸಿಡಿತ

ಕಾನ್ಪುರ

ಕೊತ್ವಾಲಿ ಪೋಲೀಸ್ ಸ್ಟೇಷನ್ನಿನಲ್ಲಿ ಮೊನ್ನೆ ರಾತ್ರಿ ಎರಡು ಸ್ಫೋಟಕ ಬಾಂಬುಗಳು ಪೋಲೀಸ್ ಸ್ಟೇಷನ್ನಿನ ಗೋಡೆಗಳ ಮೇಲೆ ಸಿಡಿಯಿತು. ಸಿಡಿತದಿಂದ ಯಾರಿಗೂ ಗಾಯವಾಗಲಿಲ್ಲ ಈ ಘಟನೆಯ ಬಗ್ಗೆ ತನಿಖೆ ಕ್ರಮ ನಡೆಯುತ್ತಿದೆ. ಈ ಬಗ್ಗೆ ಯಾರನ್ನೂ ವಶ್ಯಗಿರಿ ಮಾಡಲಿಲ್ಲ

ಭಾರಿ ವಿಮಾನ ನಿಲ್ದಾಣ

ಜಪಾನೀಯರು 11,000 ಯುದ್ಧ ಕೈದಿಗಳ ಸಹಾಯದಿಂದ ಒಂದು ಭಾರಿ ವಿಮಾನ ನಿಲ್ದಾಣವನ್ನು ಕಟ್ಟಲಿರುವರು. ಈ ನಿಲ್ದಾಣವು ಜಾಂಡಾ ರಾಗಿನ ಹತ್ತಿರ ಏರ್ಪಡಿಸಲಾಗುವುದು. ಪ್ರಪಂಚದಲ್ಲೆಲ್ಲಾ ಇದು ಒಂದು ದೊಡ್ಡ ನಿಲ್ದಾಣವೆಂದು ಜರ್ಮನ್ ರೇಡಿಯೋ ತಿಳಿಸುತ್ತದೆ.

ಭಾರತದ ಬಿಕ್ಕಟ್ಟಿನ ಪರಿಹಾರಕ್ಕೆ ಹಿಂದೂ ಮಹಾಸಭೆಯ ಪ್ರಯತ್ನ

ಹೊಸದಿಲ್ಲಿ ಸೆ. ೧೧

ಚರ್ಚಿಲರ ಹೇಳಿಕೆಗೆ ಹಿಂದೂ ಮಹಾಸಭೆಯವರು ಉತ್ತರಕೊಡುತ್ತಾ, ಕಾಂಗ್ರೆಸ್ ಮಾತ್ರವೇ ರಾಷ್ಟ್ರೀಯ ಸರ್ಕಾರವನ್ನು ಕೇಳಿಲ್ಲ, ಭಾರತದ ಎಲ್ಲ ಪಂಗಡಗಳೂ ಇದನ್ನು ಕೇಳಿವೆ ಎಂದು ತಿಳಿಸಿದರು.

ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿ ಅಧ್ಯಕ್ಷರಾದ ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರು ಮತ್ತು ಇತರ ಮೆಂಬರುಗಳು, ಭಾರತದ ಬಿಕ್ಕಟ್ಟಿನ ಪರಿಸ್ಥಿತಿಯ ಬಗ್ಗೆ ಸಂಶೀಲಿಸುತ್ತಾ ಸರ್ವಸಮ್ಮತವಾದ ಹೇಳಿಕೆಯನ್ನು ತಯಾರಿಸುತ್ತಲಿದ್ದಾರೆ ಈ ನಿರ್ಣಯವು ಭಾರತದ ಎಲ್ಲ ಪಂಗಡಗಳಿಗೆ ಒಪ್ಪಿಗೆಯಾಗಬೇಕು, ಮತ್ತು ಭಾರತದ ಭಾವಿ ರಾಜ್ಯಾಂಗ ರಚನೆ ಬಗ್ಗೆ ಸರ್ವಸಮ್ಮತವಾದ ಏರ್ಪಾಡು ನಡೆಯಬೇಕೆಂದು ತೀರ್ಮಾನಿಸುತ್ತಲಿರುವುದು.

ಈ ಉದ್ದೇಶವನ್ನೇ ಮುಖ್ಯವಾಗಿಟ್ಟುಕೊಂಡು ಹಿಂದೂ ಮಹಾಸಭೆಯ ಮುಖಂಡರುಗಳು ಯೂರೋಪಿಯನ್ ಕೇಂದ್ರ ಸರ್ಕಾರದೊಡನೆಯೂ ಮುಸ್ಲಿಂ ಲೀಗಿನೊಡನೆಯೂ ಮಾತು ಕಥೆ ನಡೆಸುತ್ತಲಿದ್ದಾರೆ.

ಮಿ|| ಜಿನ್ನಾರವರು, ಮತ್ತು ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಭಾರತದ ಪರಿಸ್ಥಿತಿಯ ಬಗ್ಗೆ ಮಾತುಕತೆ ನಡೆಸುವರು.

ಮಿ|| ಚರ್ಚಿಲ್ಲರ ಹೇಳಿಕೆಯ ಪರಿಶೀಲನೆ

ಮಿ|| ಚರ್ಚಿಲ್ಲರು ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಇಂಡಿಯ ಸಮಸ್ಯೆಯ ವಿಚಾರವಾಗಿ ಮಾಡಿದ ಭಾಷಣವನ್ನು ಕುರಿತು ಹಿಂದೂ ಮಹಾಸಭೆಯವರು ಪರಿಶೀಲಿಸಿದರು

"ಭಾರತದಲ್ಲಿ ಈ ಕೂಡಲೇ ರಾಷ್ಟ್ರೀಯ ಸರ್ಕಾರವು ಸ್ಥಾಪನೆಯಾಗಬೇಕು, ಭಾರತಕ್ಕೆ ರಾಜ್ಯಾಧಿಕಾರವನ್ನು ವರ್ಗಾಯಿಸಬೇಕೆಂದು ಕಾಂಗ್ರೆಸ್ ಮಾತ್ರವೇ ತೀರ್ಮಾನಿಸಿಲ್ಲ ಭಾರತದಲ್ಲಿರುವ ಎಲ್ಲ ರಾಜಕೀಯ ಪಂಗಡಗಳು ಇದಕ್ಕೆ ಬೆಂಬಲವಿತ್ತಿವೆ.

ಭಾರತದ ಈ ಕೇಳಿಕೆಗೆ ಬ್ರಿಟನ್ನು ಸಮ್ಮತಿಸಬೇಕು. ಈ ವಿಚಾರವಾಗಿ ಮಿ|| ಚರ್ಚಿಲ್ಲರು ಸುಮ್ಮನೆ ಇರುವುದು ಸರಿಯಲ್ಲ. ಇಂದಿನ ಅವಶ್ಯಕತೆಗೆ ಕೂಡಲೇ, ರಾಷ್ಟ್ರೀಯ ಸರ್ಕಾರದ ಬಗ್ಗೆ ತೀರ್ಮಾನಿಸಬೇಕು, ಯುದ್ಧಾನಂತರ, ಭಾರತಕ್ಕೆ ಭಾವೀ ರಾಜ್ಯಾಂಗ ರಚನೆಯನ್ನು ಏರ್ಪಡಿಸಬೇಕು" ಎಂದು ಹಿಂದೂ ಮಹಾಸಭೆಯ ಸಮಿತಿಯವರು ಚರ್ಚಿಲರಿಗೆ ಉತ್ತರಕೊಟ್ಟು ತೀರ್ಮಾನಿಸಿತು

ಸೂಚನೆ

ವಿನಾಯಕ ಚತುರ್ಥಿ ಪ್ರಯುಕ್ತ ನಾಳೆ ನಮ್ಮ ಆಫೀಸಿಗೆ ರಜಾ ಕೊಟ್ಟಿರುತ್ತಾದ್ದರಿಂದ ನಾಳೆದಿನ "ಸಾಧ್ವಿ" ಪತ್ರಿಕೆಯು ಪ್ರಕಟವಾಗುವುದಿಲ್ಲ. ಮ್ಯಾನೇಜರ್

ಮೈಸೂರು ನಾಟಕ ಸಂಘ

ನಾಟಕ ಕಲೆಯ ಶ್ರೇಷ್ಠತೆಯನ್ನು ಸ್ವಭಾವವಾದ ರೀತಿಯಲ್ಲಿ ಜನತೆಗೆ ತೋರಿಸಿಕೊಡಬೇಕೆಂಬ ಉದಾತ್ತ ಧ್ಯೇಯವನ್ನು ಹೊಂದಿರುವ ಮೇಲ್ಕಂಡ ಸಂಘವು ಮೊನ್ನೆ ಬುಧವಾರ ಸಂಜೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ತನ್ನ ಪ್ರಥಮ ನಾಟಕವಾದ "ಸಮಾಜ ಸಂಧ್ಯಾ ಚಿತ್ರ" ವನ್ನು ಪ್ರದರ್ಶಿಸಿತು ಅರಮನೆ ಇಲಾಖೆಯ ಉನ್ನತಾಧಿಕಾರಿಗಳೂ ಪಲವಾರು ಪುರಪ್ರಮುಖರೂ, ಇನ್ನೂ ಅನೇಕ ಕಲಾಭಿಮಾನಿಗಳೂ ಪ್ರೇಕ್ಷಕರಾಗಿದ್ದರು

ಈ ಸಂಘದ ನಟವರ್ಗದವರೆಲ್ಲರೂ ಅರಮನೆ ಉದ್ಯೋಗಸ್ಥರುಗಳೂ ವಿದ್ಯಾವಂತರುಗಳು. ನಟನೆಯಲ್ಲಿ ಎಲ್ಲರಿಗೂ ಪ್ರತಿಭೆಗಳಿರುವುದರಿಂದ ನವೀನರುಗಳಲ್ಲಿ ನಾಟಕ ಕಲೆಯ ಅರಿವುಕ್ಕೆ ಸ್ವಲ್ಪವೂ ಕುಂದಿಲ್ಲ ತಲಾರದೆಂದು. ನಂತರ ಅಲಂಗಗಳಿಗೆ ಪ್ರಸನ್ನ ನಾಟಕದ ಆರಂಭದಲ್ಲಿ ನೀರಸವಾಗಿದ್ದಂತೆ ಕಂಡುಬಂದಿತಾದರೂ ಕಡೆ ಕಡೆಯಲ್ಲಿ ಕಥಾವಸ್ತುವಿನ ಪಾತ್ರವರ್ಗವು ಪೂರ್ತಿ ಕಳೆಯಿಂದ ಮೆರೆಯಿತೆಂದು. ಸುಂದರ ಕಳೆಯನ್ನೇ ಕೊಟ್ಟಿತು. ಒಟ್ಟಿನ ಮೇಲೆ ಹೇಳಬೇಕೆಂದರೆ ಜನಜೀವನವು ನಿತ್ಯವೂ ಯಾಂತ್ರಿಕವಾಗಿ ಆಧುನಿಕ ಸಮಾಜದ ಸುಂಟರಗಾಳಿ ಯುಗಕ್ಕೆ ಸಿಕ್ಕ ಎಂತಹ ಎದುರಿಸೊದರುಗಳಿಂದ ಸುತ್ತಿಕೊಂಡು ಸಂಸಾರದ ಪ್ರತಿವ್ಯಕ್ತಿಗೂ ಆಗುವ ಹಾನಿ ಕಲಹಗಳನ್ನು ಬಿಡದ ಮಾಡುತ್ತಿರುವುದನ್ನು ಈ "ಸಮಾಜಸಂಧ್ಯಾ ಚಿತ್ರ" ನಾಟಕದಲ್ಲಿ ಚೆನ್ನಾಗಿ ಮನಗಾಣಿಸಲಾಗಿದೆ

ನಾಟಕಾಂತ್ಯದಲ್ಲಿ ಸಂಘದ ಕಾರ್ಯದರ್ಶಿಯವರೇ ನಿವೇದಿಸಿಕೊಂಡಿರುವಂತೆ, ಜೀವನೋಪಾಯಕ್ಕಾಗಿಯೇ ಇದನ್ನು ಅವಲಂಬಿಸಿಯನ್ನಾಗಿಟ್ಟುಕೊಳ್ಳದೆ ತಮ್ಮ ಬಿಡುವಿನ ಕಾಲವನ್ನು ಸಮಾಜ ಸೇವೆಗಾಗಿ ಧಾರೆಯೆರೆಯಬೇಕೆಂಬ ಉದಾತ್ತ ಧ್ಯೇಯವುಳ್ಳವರಾಗಿ ಈ ಸಂಘದ ನಾನಾ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಕಲಾಭಿಮಾನಿಗಳು ಇವರಿಗೆ ಹೊಸ ಹುರುಪನ್ನು ಕೊಟ್ಟಂತಾಗಿದೆ ಇತರ ಸಂಘಗಳಿಗಿಂತ ಈ ಸಂಘವು ಇದೊಂದು ನೂತನ ವೈಶಿಷ್ಟ್ಯವನ್ನು ಹೊಂದಿರುತ್ತದೆ

ಬರಲಿರುವ ಪ್ರದರ್ಶನಗಳ ವೇಳೆಗೆ ತಕ್ಕಷ್ಟು ಸಂಗೀತವನ್ನು ಸಂದರ್ಭವರಿತು ಸೇರಿಸಿ, ಮೂರು ಘಂಟೆಗಳಿಗಿಂತ ಹೆಚ್ಚಿನ ಕಾಲವನ್ನು ಹಿಡಿಯದಂತೆ ಮಾಡಿ ಇದಕ್ಕೆ ತಕ್ಕಂತೆ ಕಾರ್ಯೋಚಿತವಾದ ಬದಲಾವಣೆಗಳನ್ನು ಮಾಡಿಕೊಂಡು ಇನ್ನೂ ಜಯಪ್ರದ ಕಲೆಯಿಂದ ಹೊರಕೊಮ್ಮಲೆಂದು ಆಶಿಸುತ್ತೇವೆ.

ಶ್ರೀ ಸಿ. ಅಶ್ವತ್ಥನಾರಾಯಣರಾಯರ ಬಿಡುಗಡೆ

ಮೊನ್ನೆ ತಾ|| ೧೧ ರಂದು ಮಕ್ಕಳ ಪುಸ್ತಕ ಪ್ರಕಾಶಕರಾದ ಶ್ರೀ ಸಿ ಅಶ್ವತ್ಥನಾರಾಯಣರಾಯರನ್ನು ವಶ್ಯಗಿರಿಮಾಡಿದ್ದರಷ್ಟೆ. ಮತ್ತು ಅವರ ಪುಸ್ತಕಗಳನ್ನು 'ವಶಪಡಿಸಿಕೊಂಡಿದ್ದರು' ಸಂಜೆ ೭ ಘಂಟೆವರೆಗೆ ಜೈಲಿನಲ್ಲಿ ಬಂಧನದಲ್ಲಿಟ್ಟಿದ್ದರು ಡಿ ಎಸ್. ಪಿ ರವರು. ನಿಮ್ಮನ್ನು ಬಿಡುಗಡೆ ಮಾಡಿದ್ದೇವೆ, ಮತ್ತು ನಿಮ್ಮ ಪುಸ್ತಕಗಳನ್ನು ಹಿಂದಕ್ಕೆ ಕೊಡಲಾಗುವುದು ಎಂದು ತಿಳಿಸಿದರು.

ಮಹಾಬೀರ್ ಸರ್ವಿಸ್,

ಗಾಂಧಿ ಸ್ಕ್ವೇರ್, ಮೈಸೂರು.

ಮೈಸೂರಿನಿಂದ ಶ್ರೀರಂಗಪಟ್ಟಣ, ಮಂಡ್ಯ ಕೊಪ್ಪಲು, ಕೊಡಗಹಳ್ಳಿ, ಬನ್ನೂರು, ಮಳವಳ್ಳಿ ಮಾರ್ಗವಾಗಿ ಹಲಗೂರಿಗೂ, ಮೈಸೂರಿನಿಂದ ನಗರ, ಕೀಳನಪುರ, ಗರ್ಗೇಶ್ವರಿಮಾರ್ಗವಾಗಿ ಟಿ. ನರಸೀಪುರಕ್ಕೂ ಬಸ್ಸುಗಳು ಹೊರಡುತ್ತವೆ.

ಇವರಲ್ಲಿ ಬಿಲ್ಟಿಂಗ್ ಬೀಗಗಳು, ಕಾರ್ಬೈಡ್ಸ್ ಎಣ್ಣೆ, ಕೀಲೆ ಎಣ್ಣೆ, ಗ್ರೀಸ್, ಕಾಟನ್ ವೇಸ್ಟ್, ಡಿಸ್ಟಿಲ್ ವಾಟರ್, ಆಸಿಡ್, ಇಂಡಿಯಾ ರಬ್ಬರ್ ಮತ್ತು ಡನ್‌ಲಪ್ ಟೈರು ಮತ್ತು ಟ್ಯೂಬುಗಳು, ಡೀಸಲ್ ವರ್ಕಿಂಗ್ ಟೈರ್ ರಿಪೇರಿಂಗ್ ಗಳು ಮೋಟಾರು ಸ್ಪೇರ್ ಸಾಮಾನುಗಳು ಬಹಳ ಕಡಿಮೆ ದರದಲ್ಲಿ ನೇರವಾಗಿ ದೊರೆಯುತ್ತವೆ, ದಯವಿಟ್ಟು ಇವರಲ್ಲಿ ವ್ಯಾಪಾರ ಮಾಡಿ ಪರೀಕ್ಷಿಸಿ ನೋಡಬಹುದು.

Edited printed and published by N Subbanarayanaiah, Sadhvi Press, D Subbiah Road, Mysore

Regd. M 4342.

ಬಿಡಿ ಪ್ರತಿ 3 ಕಾಸು

ಚಂದಾದರ
ಮೈಸೂರು, ಬೆಂಗಳೂರಿಗೆ
ತಿಂಗಳಿಗೆ ಎಂಟಾಣೆ.
ಪರಸ್ಥಳಗಳಿಗೆ
ತಿಂಗಳಿಗೆ ಹತ್ತಾಣೆ
ಪೋಸ್ಟ್ ಮೂಲಕ
ತಿಂಗಳಿಗೆ ಒಂದು ರೂ.

ಸಾಧ್ವಿ

ಸಂಸ್ಥಾನದ
ಎಲ್ಲಾ ಕಡೆಗಳಲ್ಲಿಯೂ
ಪ್ರಚುರವಾಗಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನಪಡೆಯಿರಿ
ದರಗಳಿಗೆ ಬರೆಯಿರಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

SADHWI: LEADING NATIONALIST DAILY OF MYSORE.

ಸಂಪುಟ ೧] MYSORE: MONDAY 14-9-1942 ಮೈಸೂರು: ಸೋಮವಾರ ೧೪—೯—೪೨ [ಸಂಚಿಕೆ ೫೭

ನಿಜವಾದ ಚೀನಿ ಭವಿಷ್ಯ

ನಮುನೂರು ವರ್ಷಗಳ ಬರೆಯಲಾಗಿದ್ದ ಒಂದು ಚೀನಿ ಭವಿಷ್ಯ ಪುಸ್ತಕದಲ್ಲಿ ಉಲ್ಲೇಖವಾದ ಅನೇಕ ಸಂಗತಿಗಳು ಇದುವರೆವಿಗೂ ನಿಜವಾಗುತ್ತಿ ಬಂದಿವೆ "ಚೀನಾದೇಶಕ್ಕೆ ಪಾಶ್ಚಾತ್ಯ ದೇಶದಿಂದ ಸಹಾಯ ದೊರೆತು ಅದು ಜಪಾನನ್ನು ಸೋಲಿಸುವುದು ಎಂಬುದಾಗಿ ಆ ಭವಿಷ್ಯದ ಗ್ರಂಥದಲ್ಲಿ ಹೇಳಿದೆ.

ಜಪಾನ್ ಆಕ್ರಮಿತ ರಾಷ್ಟ್ರಗಳಲ್ಲಿ ಈ ಪುಸ್ತಕದ ಪ್ರಭಾವವು ಹೆಚ್ಚಾಗುವುದನ್ನು ಕಂಡು ಜಪಾನಿಯರು ಅದನ್ನು ಪ್ರತಿಬಂಧಿಸಿದ್ದಾರೆ.

ಈ ಗ್ರಂಥದಲ್ಲಿ ಹೇಳಲ್ಪಟ್ಟಿದ್ದ ಮಿಂಗ್ ಸಂತತಿಯ ಪತನ, ಮಾಂಚು ಸಂತತಿಯ ಉತ್ಕರ್ಷ ಮತ್ತು ಅಲ್ಪಕಾಲವಾಗಿ ಅವರ ಅಧಿಕಾರ ಚ್ಯುತಿ, ಬಾಕ್ಸರ್ ದಂಗೆಗಳು, ಪ್ರಜಾಪ್ರಭುತ್ವ ಸ್ಥಾಪನೆ ಮೊದಲಾದ ವಿಷಯಗಳು ಈಗ ನಿಜವಾಗಿದೆ

"ಪಶ್ಚಿಮ ದೇಶಗಳಿಂದ ಸಹಾಯ ದೊರೆತು ಒಂದು ಹಡಗುಗಳು ದೊರಕಿ ಚೀನೀಯರು ಜಪಾನೀಯರನ್ನು ಸೋಲಿಸುವರು. ಜಪಾನಿನ ಕ್ರಿಯೆ ಕುಗ್ಗಿ ಅದು ಬಹಳ ಹೀನಸ್ಥಿತಿಗೆ ಬರುವುದು" ಈ ಭವಿಷ್ಯವು ಸಹಾ ಆ ಉದ್ಗ್ರಂಥದಲ್ಲಿ ಹೇಳಿದೆ

ಹಣಕಾಸಿನ ಸ್ಥಿತಿ

ಮದರಾಸ್ ಸೆ ೧೨

ಬ್ಯಾಂಕುಗಳು ಲಾಭದಾಯಕವಾದ ಭದ್ರವಾದ ಬಂಡವಾಳದ ವೆಚ್ಚದ ಮಾರ್ಗವನ್ನು ಹುಡುಕುತ್ತಿವೆ. ಹಲವು ಬ್ಯಾಂಕುಗಳು ಠೇವಣಿಗಳ ಬಡ್ಡಿ ದರವನ್ನು ಇಳಿಸಿವೆ ರಿಸರ್ವ್ ಬ್ಯಾಂಕಿನ ಪ್ರಕಟನೆಯ ಪ್ರಕಾರ ಬ್ರಿಟಿಷ್ ಸರ್ಕಾರದಿಂದ ... ಕೋಟಿ ರೂಪಾಯಿಗಳವರೆಗೆ ಬಂದಿದೆ.

ಸ್ಟರ್ಲಿಂಗ್ ಸೆಕ್ಯೂರಿಟಿಗಳಲ್ಲಿ ೫೦ ಕೋಟಿ ರೂಪಾಯಿಗಳು ನಗದಿಯಲ್ಲಿ ೫ ಕೋಟಿ ರೂಪಾಯಿಗಳೂ ಹೆಚ್ಚಿವೆ ಈ ನೋಟುಗಳಿಂದ ... ಬ್ಯಾಂಕಿಗೆ ೮ ಕೋಟಿ ರೂಪಾಯಿಗಳ ... ಬಡವಾಣೆಯಲ್ಲಿ ೮ ಕೋಟಿ ರೂಪಾಯಿಗಳ ನೋಟುಗಳೂ ಹೆಚ್ಚಿವೆ ಸ್ಟರ್ಲಿಂಗ್ ಭದ್ರತೆಗಳಲ್ಲಿ ಬರಿಯ ಒಡಂಬಡಿಕೆ ನೋಟುಗಳೇನೂ ಇಲ್ಲ

ಇಂಡಿಯಾದ ಪಟ್ಟಣಗಳಿಗೆ "ಬೆಲೂನ್ ಬ್ಯಾರಾಜ್"

ಇಂಡಿಯಾ ತೀರಪಟ್ಟಣಗಳಲ್ಲಿ ಈಗಲೇ "ಬೆಲೂನ್ ಬ್ಯಾರಾಜ್" ವ್ಯವಸ್ಥೆ ಏರ್ಪಡಿಸಲಾಗಿದೆ ... ಇದರಿಂದ ಶತ್ರು ವಿಮಾನಗಳು ... ಗಗನದ ಮೇಲೆ ಧಾಳಿ ಮಾಡಲು ಸಾಧ್ಯವಾಗುವುದಿಲ್ಲ

ವರ್ಧಕನಿಗೆ ಜುಲ್ಮಾನೆ

ನಿಗದಿಯಾದ ಬೆಲೆಗಿಂತ ಹೆಚ್ಚಿನ ಧಾರಣೆಯನ್ನು ... ಪಡೆದನೆಂಬ ಅಪಾದನೆ ... ಬೆಳಗಿನ ಡಿವಿಜನಲ್ ಮ್ಯಾಜಿಸ್ಟ್ರೇಟರವರು ... ಒಬ್ಬ ವರ್ತಕನಿಗೆ ... ಜುಲ್ಮಾನೆ ... ವಿಧಿಸಿ ... ಕೊಟ್ಟರು.

ಮೈಸರಾಯರಿಗೆ ಮೆಮೋರಿಯಲ್

ಪೇಪರ್‌ದಾರರಿಗೂ ತುಟ್ಟಿಭತ್ಯ

ಮೈಸೂರ್ ಸರ್ಕಾರದ ಪೇಪರ್‌ದಾರರುಗಳ ಸಂಘವು ಮೈಸರಾಯರವರಿಗೂ ಮತ್ತು ಮಹಾರಾಜ್ ಗೌರ್ನರ್‌ರವರಿಗೂ ಬಿನ್ನವತ್ತಳೆಯೊಂದನ್ನು ಕಳುಹಿಸಿದೆ ಇದಕ್ಕೆ ೫೫ ಮಂದಿ ಸದಸ್ಯರ ರುಜು ಆಗಿದೆ ಕಳೆದ ಮಹಾಯುದ್ಧದಲ್ಲಿ ಕೊಟ್ಟಂತೆಯೇ ಈ ಕ್ಷಾಮಕಾಲದಲ್ಲೂ ಸಹ ಪೇಪರ್‌ದಾರರುಗಳಿಗೆಲ್ಲಾ ತುಟ್ಟಿ ಭತ್ಯವನ್ನು ಕೊಡಿಸಿಕೊಡಬೇಕೆಂಬುದೇ ಬಿನ್ನವತ್ತಳೆಯ ತಾತ್ಪರ್ಯ

ಮಿಲಿಟರಿಯವರ ದೌರ್ಜನ್ಯ

ಹಿಂದಿನ ಪತ್ರಿಕೆಯಲ್ಲಿ ಒಬ್ಬರು ಈ ರೀತಿ ಬರೆದಿರುತ್ತಾರೆ— ಟೋಂಬುಯಲ್ಲಿ ಮಿಲಿಟರಿಯವರು ಜನಗಳ ಮೇಲೆ ಮತ್ತು ಹೆಂಗಸರ ಮೇಲೆ ... ದಾಳಿ ನಡೆಸುತ್ತಾರೆ! ಎಂದು ಬಾಂಬೆ ಕ್ರಾನಿಕಲ್ ಪತ್ರಿಕೆಯು ತಿಳಿಸುತ್ತದೆ ಜನಗಳು ಹೇಳಿದ ಕೆಲಸಗಳನ್ನು ಮಾಡದಿದ್ದರೆ, ಮಿಲಿಟರಿಯವರು ಬಂದೂಕಿನಿಂದ ಹೊಡೆಯುತ್ತಾರೆ ಆದುದರಿಂದ ಜನರು ಅವರಿಗೆ ತಲೆಬಾಗಿಸಬೇಕು. ಇದು ಇಂಥವರ ದೌರ್ಜನ್ಯ ಮತ್ತು ದುಷ್ಟತನ ... ಕ್ರಮವನ್ನು ನಾಶಪಡಿಸಬೇಕು ಎಂದು ತಿಳಿಸಿದ್ದಾರೆ.

ಲೆನಿನ್ ಗ್ರಾಡ್ ಕದನ

ರಷ್ಯಾದ ಸೇನಾನಾಯಕರು ... ಸೈನ್ಯವನ್ನು ಹಿಂದುಮುಖಿಸುತ್ತಾ, ಸೆಟೆ 15 ಮೈಲಿ ದೂರದಲ್ಲಿ ಶತ್ರುಗಳೊಂದಿಗೆ ಕದನ ನಡೆಸುತ್ತಿದ್ದಾರೆ ಸೆಟೆ ... ಹಿಂಭಾಗದ ನೀವಾ ನದಿಯ ಹತ್ತಿರ ಭಾರಿ ಕದನವು ಜರುಗುತ್ತಿದೆ. ರಷ್ಯನರು ತಮ್ಮ ಕಾರ್‍ಯ ಚರಣೆಯನ್ನು ... ಶತ್ರುಗಳ ವ್ಯೂಹಗಳನ್ನು ಮತ್ತೂ ಕೋಟೆಗಳನ್ನು ಭೇದಿಸುತ್ತಲಿದ್ದಾರೆ

ರಷ್ಯನರು ಶತ್ರುಗಳ ಸೈನ್ಯಕ್ಕೆ ಭಾರಿ ... ಗಳನ್ನು ಪ್ರಯೋಗಿಸುತ್ತಾ, ಶತ್ರುಗಳು ... ಮಾಡಿದ್ದಾರೆ.

ಈ ಕದನದಲ್ಲಿ ಜರ್ಮನರಿಗೆ ಬಹಳ ನಷ್ಟವಾಗುತ್ತಿದೆ.

ಎಲ್ಲಾ ಮುಸ್ಲಿಮರಿಗೂ ಪಾಕಿಸ್ಥಾನ್ ಬೇಕಿಲ್ಲ!

ಅಜಾದ್ ಮುಸ್ಲಿಂ ಸಮ್ಮೇಳನದ ಅಧ್ಯಕ್ಷರೂ ಮತ್ತು ಸಿಂಧ್‌ನ ಮುಖ್ಯ ಮಂತ್ರಿಯೂ ಆದ ಅಲ್ಲಾ ಭಕ್ಷ್‌ರವರು, ಸಿಂಧ್ ಪ್ರಾಂತ್ಯ ಸರಹದ್ದು ಪ್ರಾಂತ್ಯ ಮತ್ತು ಬಂಗಾಳದ ಮುಸಲ್ಮಾನರು ... ಪಾಕಿಸ್ಥಾನ್ ಬೇಕಿಲ್ಲವೆಂದೂ, ಸ್ವಾತಂತ್ರ್ಯ ವಿಚಾರದಲ್ಲಿ ... ವೆಂದೂ ತಿಳಿಸಿದರು ... ಪಂಜಾಬ್ ವಿಚಾರದಲ್ಲಿ ... ಹೇಳಲಾಗುವುದಿಲ್ಲವೆಂದರು.

ಬಹುಮಾನಗಳನ್ನು ಅಂಗೀಕರಿಸಿದ ಕೋಪವು

ಸಾರ್ವಜನಿಕರಿಗೆ ... ಕೆಲವು ... ಗಳನ್ನು ... ಕೆಲವು ...

ಕಾಕಸಸ್ ಹೋದರೆ

ಜರ್ಮನಿಯು ಕಾಕಸಸ್ಸನ್ನಾಗಲೀ, ಪ್ರಿಟಿನ್ಸನ್ನಾಗಲೀ, ಮಧ್ಯಪ್ರಾಚ್ಯವನ್ನಾಗಲೀ, ಒಡಯಿಸಿದರೆ, ಅನೇಕ ನಾಜಿಗಳನ್ನು ಸೋಲಿಸುವುದು ಸಾಧ್ಯವಿಲ್ಲ ... ಮಿತ್ರರಂತಲಿಯು ಸೋಲಿಸಿದಂತೆ ಆರ್ಥವಾಗಬಹುದು ... ಮಾನ ಇಂಡಿಯಾವನ್ನು ಹವಾಯಿ ವಿಭಾಗಗಳನ್ನು ಆಕ್ರಮಿಸಿಕೊಂಡರೆ ನಂತರ ಜಪಾನನ್ನು ಸೋಲಿಸುವುದೂ ಆಗುವುದಿಲ್ಲ ರಷ್ಯಾ ಚೀನಾ ಸೇನೆಗಳು ರಂಗದಿಂದ ನಿಷ್ಕ್ರಮಿಸುವವರೇ ಜಾಗಿದ್ದ ಯುದ್ಧವು ಮುಗಿಯಿತೆಂದು ಖಂಡಿತವಾಗಿ ಭಾವಿಸಬಹುದು ಆದುದರಿಂದ ನಾವು ಚೀನಾ ರಷ್ಯಾ ಸೇನೆಗಳಿಗೆ ಪೂರ್ಣವಾಗಿ ಸನ್ನಾಹಗಳನ್ನು ಕಳುಹಿಸುತ್ತಾ ಇರಬೇಕು ... ಗಳನ್ನು ಭದ್ರವಾಗಿ ಕಾಪಾಡಿಕೊಳ್ಳಬೇಕು. ಇದು ಬಹಳ ಕಷ್ಟವಾದ ಕೆಲಸವಾಗಿ ಕಂಡುಬರುತ್ತದೆ ... ಅಲ್ಲ

... ಕದನಗಳಲ್ಲಿ ... ಗಳನ್ನು ... ಸೇನೆಯೂ ಸಹ ...

ಬ್ರಿಟಿಷ್ ದ್ವೀಪಗಳ ಪ್ರಾಮುಖ್ಯತೆ

ವಿಮಾನ ... ಬ್ರಿಟಿಷ್ ದ್ವೀಪಗಳು ... ಈಗ ಯೂರೋಪಿನ ಧಾಳಿಗಳನ್ನು ನಡೆಸಬಹುದು. ... ವಿಮಾನ ಧಾಳಿಗಳನ್ನು ನಡೆಸಬೇಕು. ... ವಿಮಾನ ... ರಷ್ಯಕ್ಕೆ ಸ್ವಲ್ಪ ಸಹಾಯ ಮಾಡಬಹುದು.

ಯೂರೋಪು ಪಶ್ಚಿಮ, ತೀರವನ್ನು ಸೇನೆಗಳನ್ನು ಇಳಿಸುವ ಸಹ ... ಬ್ರಿಟಿಷ್ ದ್ವೀಪದಿಂದಾಗಲಿ, ಐಸ್‌ಲೆಂಡಿನಿಂದಾಗಲಿ, ಉತ್ತರ ಆಫ್ರಿಕದ ಕಡೆಯಿಂದಾಗಲಿ ... ನಡೆಸಬಹುದು.

ದಸರಾ ಮಹೋತ್ಸವದ "ಟೋರ್ನಮೆಂಟ್"

ಬ್ಯಾಡ್‌ಮಿಂಟನ್ ಪಂದ್ಯಗಳು

"ದಸರಾ ... ಟೋರ್ನಮೆಂಟ್" ... ಪಂದ್ಯಗಳು ... ಶ್ರೀನಿವಾಸಯ್ಯಂಗಾರ್ (ಸೆಕ್ರೆಟರಿ) ... ಶ್ರೀನಿವಾಸಯ್ಯಂಗಾರ್ ...

ಸ್ಟಾಲಿನ್‌ಗ್ರಾಡ್

ಕಳೆದವಾರ ಸ್ಟಾಲಿನ್‌ಗ್ರಾಡ್‌ನಲ್ಲಿ ನಡೆದ ಕದನದ ಬಿರುಸನ್ನು ನೋಡಿದರೆ ನಾಜಿಗಳು ನಿಧಾನವಾಗಿ ತಮ್ಮ ಒತ್ತಡವನ್ನು ಘನೀಭೂತಮಾಡುತ್ತಿದ್ದಾರೆಂಬುದು ವ್ಯಕ್ತವಾಗಿದೆ

ಇನ್ನು ರಷ್ಯ ರಣರಂಗದಲ್ಲಿ ಸೋವಿಯಟ್ ಸೇನೆಗಳು ಅನುಕೂಲವಾದ ... ಎಲ್ಲಿಂದರೆ ಡಾನ್ ನದೀ ತೀರದ ಉತ್ತರದಿಕ್ಕಿನಲ್ಲಿರುವ ಕ್ಲೆಟ್ಸ್ಕಾಯಾ ಬಳಿ ಮಾತ್ರವೇ ರಷ್ಯ ಸೇನೆಗಳು ಅಲ್ಲಿನ ಬೆಟ್ಟಸಾಲುಗಳಲ್ಲಿ ಶತ್ರುಗಳನ್ನು ಅಟಕಾಯಿಸಿಕೊಂಡು ನಿಂತಿವೆ.

ಆದ್ದರಿಂದ ರಷ್ಯನರು ಕ್ಲೆಟ್ಸ್ಕಾಯಾ ರಣರಂಗದಲ್ಲಿ ಶತ್ರುಗಳನ್ನು ... ಅಲ್ಲಿಂದ ಸ್ಟಾಲಿನ್‌ಗ್ರಾಡ್ ಮೇಲೆ ಧಾಳಿ ನಡೆಸುತ್ತಿರುವ ಜರ್ಮನ್ ಸೇನೆಯ ಮೇಲೆ ... ಕಳುಹಿಸಲು ಸಾಧ್ಯವಾಗಬಹುದು ... ಭಾವಿಸಲ್ಪಟ್ಟಿದ್ದಿತು ... ಈಗ ... ಸಾಧ್ಯವೆಂದು ತೋರುತ್ತದೆ.

ಈಗ ಪ್ರಸಕ್ತ ... ಜರ್ಮನರು ... ಆಕ್ರಮಣವನ್ನು ಮಾಡುತ್ತಲೇ ... ಶತ್ರುಗಳ ... ಸೇನೆಗಳನ್ನು ... ಬೇಕಾಗಿದೆ

... ಸೇನೆಗಳು ... ಸ್ಟಾಲಿನ್‌ಗ್ರಾಡ್ ... ಶತ್ರುಸೇನೆಗಳು ... ನಡೆಯುತ್ತಿವೆ ... ಶತ್ರುಸೇನಾ ಪ್ರವಾಹವನ್ನು ... ಶತ್ರುಸೇನೆಗಳು ಮಾತ್ರ ರಷ್ಯ ... ಸ್ಟಾಲಿನ್‌ಗ್ರಾಡ್ ಸಮೀಪಕ್ಕೆ ಬಂದಿದ್ದಾರೆ.

ಸೋವಿಯಟ್ ಶತ್ರುಗಳು ಮಾಸ್ಕೋ ನಗರವನ್ನು ... ಪ್ರತ್ಯಾಗ ಮಾಸ್ಕೋ ರಕ್ಷಕರಿಗೆ ಒಂದು ಅನುಕೂಲವಿದ್ದಿತು ... ಮಾಸ್ಕೋ ... ಅಷ್ಟೇ ... ಬೆಟ್ಟಗಳು ... ಬಿಟ್ಟುಹೋದವು

ಪ್ರಜಾಮತ

ಪೆಟ್ರೋಲ್ ಬಳ್ಳೆಯನ ಇಪ್ಪತ್ತು ಪವನ್ ಜುಲ್ಮಾನೆ

... ಜುಲ್ಮಾನೆ ...

ಲೀಗಿನ ಕರ್ತವ್ಯ

ಮಿ॥ ಎಂ. ಎ. ಇಸ್ಪಹಾನಿಯವರು ಮುಸ್ಲಿಂ ಲೀಗಿನ ರಾಜ್ಯದ ವರ್ಕಿಂಗ್ ಕಮಿಟಿಯ ಕಾರ್ಯದರ್ಶಿಗಳು. ಅವರು ಲೀಗಿನ ಸಭ್ಯಸತ್ವಕ್ಕೆ ರಾಜೀನಾಮೆ ಕೊಟ್ಟಿರುವರು. ಮಿ॥ ಜಿನ್ನಾರವರಿಗೆ ಬರೆದ ಆ ಪತ್ರದಲ್ಲಿ ಅವರು ಹೀಗೆ ಹೇಳುತ್ತಾರೆ.

"ಅಲ್ಲೋಲ ಕಲ್ಲೋಲವಾಗುತ್ತಿರುವ ರಾಜಕೀಯ ಸಮುದ್ರದಲ್ಲಿ ಮುಸ್ಲಿಂ ಲೀಗು ಗೊತ್ತುಗುರಿಯಿಲ್ಲದೆ ಹಿಡಿಯಲು ಯತ್ನಿಸುತ್ತಿದೆ. ಇದು ಇಸ್ಲಾಂ ಧರ್ಮಕ್ಕೆ ವಿರುದ್ಧವಾದದ್ದು. ಮುಸ್ಲಿಮರು ಮತ ರಾಜನೀತಿ ಎರಡರಲ್ಲಿಯೂ ಸ್ವಪೂರ್ಣವುಳ್ಳವರಾಗಬೇಕು.

ಮಿ॥ ಜಿನ್ನಾ ಅವರು ಬೊಂಬಾಯಿನ ಮಲಬಾರ್ ಹಿಲ್ಲಿನ ಅರಮನೆಯ ಮೇಲೆ ಕುಳಿತು ಮಾಡುವ ರಾಜನೀತಿಯು ಇಸ್ಲಾಂ ಧರ್ಮಕ್ಕೆ ತೀರಾ ವಿರುದ್ಧವಾಗಿದೆ. ಜಾತಿ ಕುಲಗಳ ಭೇದವಿಲ್ಲದೆ ದೇವ ಪ್ರವಾದಿಯ ಮಹಮದ್ ಅವರ ದಿನದಲ್ಲಿ ಮಾಡಿದಂತೆ ಎಲ್ಲರನ್ನೂ ರಕ್ಷಿಸುತ್ತಿದ್ದ ಎಲ್ಲರಿಗೂ ಸಾಮಾನ್ಯವಾದ ವಿಷಯವನ್ನು ಒದಗಿಸುವಾಗ, ಮುಸ್ಲಿಂ ಲೀಗು ತನಗೇ ಗೊತ್ತಿಲ್ಲದ ಇಂಡಿಯಾ ದೇಶವನ್ನು ಎರಡು ಭಾಗ ಮಾಡುವ ಹಟವನ್ನು ಹೂಡಿದೆ.

ಇನ್ನು ಜಿನ್ನಾರವರಲ್ಲಿ ಹೀಗೆ ಕೇಳುವರು "ಕಾಂಗ್ರೆಸ್ಸಿನ ಕೋರಿಕೆಯನ್ನು ಸ್ವೀಕರಿಸಿ ಅಖಿಲ ಭಾರತದ ಅಧಿಕಾರ ಸೂತ್ರವನ್ನು ವಹಿಸಿಕೊಳ್ಳಿರಿ. ಪ್ರತ್ಯೇಕತೆಗೆ ಇದೀಗ ಸಮಯ. ಲೀಗು ಈಗ ತನ್ನ ಹಿಡಿದ ಹಟವನ್ನು ಬಿಟ್ಟರೆ ರಾಜ್ಯದ ಅಭಿಲಾಷೆಯೇ ಕೆಡುವುದು."

ಮುಕ್ತಾಯದಲ್ಲಿ- ನಿಮ್ಮ ಮುಂದಾಳುಗಳನ್ನು ವಿಧೇಯತೆಯಿಂದ ಹಿಂಬಾಲಿಸಿರಿ, ದೇವರನ್ನೂ ದೇವಪ್ರವಾದಿಯನ್ನೂ ಮನ್ನಿಸುವಂತೆ ಪ್ರತಿಯೊಬ್ಬರೂ ಅವರ ಆಜ್ಞೆಯನ್ನು ಪಾಲಿಸಿ. ದೇವರನ್ನೂ ದೇವಪ್ರವಾದಿಯನ್ನೂ ಮುಂದಾಳುಗಳು ಮನ್ನಿಸದೆ ಹೋದರೆ ಅವರ ಆಜ್ಞೆಯನ್ನು ತಿರಸ್ಕರಿಸಿ. ಮಿ॥ ಜಿನ್ನಾರವರ ಕೈಯಲ್ಲಿ ಇಸ್ಲಾಂ ಧರ್ಮವು ಅಪಾಯದಲ್ಲಿರುವಾಗ ಅವರ ಆಜ್ಞೆಯನ್ನು ಮನ್ನಿಸಬೇಕಾದುದಿಲ್ಲ ಎಂದು ಬರೆದಿರುವರು.

ವಿಚಿತ್ರ ವಾದ

ಡಾ॥ ಜಿ. ವಿ. ದೇಶಮುಖ್ ಎಂಬ ಕೇಂದ್ರ ಅಸೆಂಬ್ಲಿಯ ಸದಸ್ಯರು ತಾವು ಈ ಸಭೆಗೆ ಬರಲಾಗುವುದಿಲ್ಲವೆಂದು ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದಿರುವರು. ಆ ಪತ್ರದಲ್ಲಿನ ಕಾರಣಗಳು ಹೀಗಿವೆ:—

ಇಂದು ದೇಶದ ಮುಂದೆ ಇರುವುದು ಎರಡೇ ಸಮಸ್ಯೆಗಳು. ಒಂದು ರಕ್ಷಣೆ, ಮತ್ತೊಂದು ರಸದ ರಕ್ಷಣೆ. ನಮ್ಮ ಕುರಿತು ದೇಶೀಯ ಸೈನ್ಯಗಳು, ಸಾಮಗ್ರಿಗಳು ಅನಾವಶ್ಯಕವೆಂದು ಎಂದೂ ಹೇಳಲ್ಲ. ಎಲ್ಲಾ ಸೈನಿಕರೂ, ಆಹಾರ ಸಾಮಗ್ರಿಗಳೂ ದೇಶದವಾಗಿರಬೇಕಾಗಿದೆ. ಈಗ ಬೇಕಾದಷ್ಟು ಮಂದಿ ಬಿಳಿಯ ಸಿಪಾಯಿಗಳು ಇದ್ದೇ ಇದ್ದಾರೆ. ಆದುದರಿಂದ ಈ ಸಮಸ್ಯೆಯು ತಾನಾಗಿಯೇ ಬಗೆಹರಿಯುತ್ತದೆ.

ಇನ್ನು ರಚನೆಯ ಸಮಸ್ಯೆ. ಯುದ್ಧಕಾಲದಲ್ಲಿ ಮುಸ್ಲಿಮರು, ಹಿಂದೂಗಳು, ರಾಜರುಗಳು, ಎಲ್ಲರೂ ಸೇರಿ ಮಾಡಬೇಕಾದ ಎರಡು ಭಾಗ ಸರ್ಕಾರದ ರಕ್ಷಣೆಗೆ ಒಳಪಟ್ಟಿದ್ದಾರೆ. ಯುದ್ಧವಾದ ಮೇಲೆ ಇನ್ನೊಂದ ಮೂರನೇ ಒಂದು ಭಾಗದ ಸಂರಕ್ಷಣೆಗಾಗಿ ಸರ್ಕಾರವು ಮನಸ್ಸು ಮಾಡುತ್ತದೆ. ಆದುದರಿಂದ ಆ ಸಮಸ್ಯೆಯನ್ನು ಈಗ ಸಭೆಯ ಮುಂದಿಟ್ಟು ಈ ಕಾರಣಗಳಿಗಾಗಿ ನಾನು ಬರುವುದಿಲ್ಲ ಕ್ಷಮಿಸಬೇಕು.

ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿ ಮೀಟಿಂಗ್

ಅಖಿಲ ಭಾರತ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಶ್ರೀ ವಿ. ಡಿ. ಸಾವರ್ಕರ್‌ರವರು ಈ ದಿನ [illegible] ವರ್ಕಿಂಗ್ ಕಮಿಟಿ ಮೀಟಿಂಗ್ [illegible] ಮತ್ತು [illegible] ರಲ್ಲಿ [illegible]

ಜಿಲ್ಲಾ ಬೋರ್ಡಿನ ನಿರ್ಣಯ ಕಾಂಗ್ರೆಸ್-ಮುಸ್ಲಿಂ ಲೀಗ್ ಧ್ವಜಗಳನ್ನು ಹಾರಿಸಲಾಗುವುದು

ಕೈರಾ- ಜಿಲ್ಲಾ ಬೋರ್ಡಿನ ಮೀಟಿಂಗ್ ನಡೆದು, ಜಿಲ್ಲಾ ಕೋರ್ಟಿನ ಕಟ್ಟಡದ ಮೇಲೆ ಕಾಂಗ್ರೆಸ್ ಧ್ವಜವನ್ನು ಹಾರಿಸಬೇಕೆಂದು ನಿರ್ಣಯ ಮಾಡಲಾಯಿತು. ಜಿಲ್ಲಾ ಮುಸ್ಲಿಂ ಲೀಗ್ ಪಾರ್ಟಿ ಮುಖಂಡರು, ಕಾಂಗ್ರೆಸ್ ಧ್ವಜದೊಡನೆ ಮುಸ್ಲಿಂ ಲೀಗ್ ಧ್ವಜವನ್ನು ಹಾರಿಸಬೇಕೆಂದು ತೀರ್ಮಾನ ಮಾಡಿದರು. ಕಾಂಗ್ರೆಸ್ ಪಾರ್ಟಿಯು ಒಪ್ಪಿಕೊಂಡಿತು. ಎರಡು ಧ್ವಜಗಳು ಹಾರಿಸಲ್ಪಡುವುವು.

ಹೊಸದಿಲ್ಲಿ ಸೆ ೧೪

ದಿವಂಗತ ಸರ್ ಹೆನ್ರಿಗಿಡ್ನಿಯವರ ಸ್ಥಾನದಲ್ಲಿ ಕೇಂದ್ರ ಅಸೆಂಬ್ಲಿ ಸ್ವತಂತ್ರ ಪಕ್ಷದ ಮುಖಂಡರಾಗಿ, ಬೊಂಬಾಯಿಯ ಶ್ರೀ ಸುರೇಂದ್ರನಾಥ ಬಾಲಜಿಯವರನ್ನು ನಾಯಕರಾಗಿ ಚುನಾಯಿಸಲಾಯಿತು.

ಕಲೆಕ್ಟರರ ಕಚೇರಿಯಲ್ಲಿ ಬೆಂಕಿ

ಕಾನ್ಪುರದ ಕಲೆಕ್ಟರ ಕಚೇರಿಯ ರೆಕಾರ್ಡುಗಳ ಆಫೀಸಿನಲ್ಲಿ ಮೊನ್ನೆ ಸಾಯಂಕಾಲ ಬೆಂಕಿ ಹತ್ತಿಕೊಂಡು ಉರಿಯುತ್ತಿತ್ತು. ರೆಕಾರ್ಡು ರೂಮಿನಲ್ಲಿ ಬಾಂಬು ಬಿದ್ದು ಉಳಿಯುವುದು ತಿಳಿದು ಬಂದಿತು. ಕೂಡಲೇ ಅಲ್ಲಿನ ಜವಾನರು ಬೆಂಕಿಯನ್ನು ಆರಿಸಿದರು. ತನಿಖೆ ಕ್ರಮ ಜರುಗುತ್ತಲಿದೆ.

ಬರ್ಮಾದ ಕತೆ

ಕಳೆದುಹೋದ ಕತೆಯಲ್ಲಿ ರಂಗೂನಿನ ಮೇಲೆ ಎರಡು ವಿಮಾನ ಧಾಳಿಗಳಾದವು. ೧೧೦೦ ಜನರು ಸತ್ತರು. ೧೬೫೦ ಜನರು ಗಾಯಗೊಂಡರು. ಪ್ರೋಮ್‌ನಲ್ಲಿ ೩೮ ಜನರು ಸತ್ತರು. ೮೦ ಮಂದಿ ಗಾಯಗೊಂಡರು. ಇವರಲ್ಲಿ ಇಂಡಿಯಾ ದೇಶದವರೇ ಹೆಚ್ಚು.

ಹಿಂದಿರುಗಿಬಂದವರು—ಸಮುದ್ರದ ಮಾರ್ಗವಾಗಿ ಸುಮಾರು ೮೦ ಸಾವಿರ ಮಂದಿ, ೪೦೦೦ ಮಂದಿ ವಿಮಾನಗಳ ಮೂಲಕ ಬಂದಿದ್ದಾರೆ, ಭೂಮಾರ್ಗವಾಗಿ ಸುಮಾರು ನಾಲ್ಕು ಲಕ್ಷ ಮಂದಿ ಬಂದಿದ್ದಾರೆಂದು ವರದಿಯಾಗಿದೆ. ಯುದ್ಧದಲ್ಲಿ ಸತ್ತ ಇಂಡಿಯಾ ಸೈನ್ಯದ ಸಂಖ್ಯೆಯಾಗಲಿ, ಉಳಿದುಳಿದ ಬರ್ಮಾ ಭಾರತೀಯರ ಪರಿಸ್ಥಿತಿಯಾಗಲಿ ಗೊತ್ತಿಲ್ಲ. ಇದು ಕೇಂದ್ರ ಸರ್ಕಾರದ ಮಹಾ ಸಭೆಯಲ್ಲಿ ಗೊತ್ತಾದ ಸಂಗತಿ.

ನಾಗಮಂಗಲದಲ್ಲಿ ದಸ್ತಗಿರಿ

ನ್ಯಾಯವಿಧಾಯಕ ಸಭೆಯ ಸದಸ್ಯರೂ ಮಂಡ್ಯ ಜಿಲ್ಲಾ ಬೋರ್ಡಿನ ಸದಸ್ಯರೂ ಆದ ಶ್ರೀ ಕೆ. ಯಂ. ಕೃಷ್ಣಪ್ಪಗೌಡರನ್ನೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯ ಆದ ಶ್ರೀ ಗೋವಿಂದ ಗೌಡರನ್ನೂ ನಾಗಮಂಗಲದ ಪೋಲೀಸರು ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಪ್ರಕಾರ ದಸ್ತಗಿರಿ ಮಾಡಿ, ಮೈಸೂರು ಸಬ್ ಜೈಲಿಗೆ ಕರೆದುಕೊಂಡು ಬಂದಿದ್ದಾರೆಂದು ಗೊತ್ತಾಗಿದೆ.

ಗುಂಡೇಟಿನಿಂದ ಮೂವರ ಮರಣ

ಬಂಗಾಳ ಪ್ರಾಂತ್ಯದ, ಮಿಡ್ನಾಪುರದಲ್ಲಿ ಸುಮಾರು ೫ ಸಾವಿರ ಜನರು ಗುಂಪುಕೂಡಿ ಅಲ್ಲಿಯ ಅಕ್ಕಿ ಗಿರಣಿಯನ್ನು ಲೂಟಿಮಾಡಲು ಪ್ರಯತ್ನಿಸಿದರು. ಪೋಲೀಸರು ೨೫ ಬಾರಿ ಗುಂಡುಹಾರಿಸಿ ಲೂಟಿಗಾರರನ್ನು ಓಡಿಸಿದರು. ಗುಂಡುಹಾರಿಸಿದುದರ ಪರಿಣಾಮವಾಗಿ ಮೂವರು ಸತ್ತರು.

ಆ ಕಾ ಶ ವಾ ಣಿ

ಸೆಪ್ಟೆಂಬರ್ ೧೭ ನೇ ಗುರುವಾರ

೬-೦೦ ಚಿತ್ರಗಾನ ೬-೫೦ ಸೇತುಭಾರತ, ಕಾರ್ಯಕ್ರಮ ೭-೩೦ ವೇಣುವಾದ್ಯಗಾನ. ಆಕಾಶವಾಣಿ ಗಾನಸಭಾಮಂಡಲಿ ೭-೦೦ ವೃತ್ತಾಂತ, ವ್ಯಾಖ್ಯಾನ ೭-೧೫ ಖಬರೆ ೭-೫೦ ಮಕ್ಕಳಿಗಾಗಿ ಮಕ್ಕಳಿಂದ ೭-೪೫ ಪಾರುಪತ್ಯ ವಿದ್ವಾನ್ ಟಿ. ಪಟ್ಟಸ್ವಾಮಯ್ಯ ೯-೧೫ ವೃತ್ತಾಂತ ೯-೩೦ [illegible] ೯-೫೦ ರಾಷ್ಟ್ರಗೀತೆ

ಮದರಾಸು ಪ್ರಾಂತದ ಪರಿಸ್ಥಿತಿ

ಮೆಟ್ಟುಪಾಳ್ಯದ ಬಳಿ ಮಸಕಲ ಹಳ್ಳಿಯಲ್ಲಿ ಒಂದು ಗುಂಪು ಪೋಲೀಸರನ್ನು ಮುತ್ತಿ ಅವರು ದಸ್ತಗಿರಿ ಮಾಡಿದ್ದವರನ್ನು ಬಿಡಿಸಿಕೊಂಡು ಓಡಿದರು.

ಎರಡು ಅರಣ್ಯ ಇಲಾಖೆಯ ವಿಶ್ರಾಂತಿ ಗೃಹಗಳು ಉತ್ತರ ಆರ್ಕಾಟು ಜಿಲ್ಲೆಯಲ್ಲಿ ಸುಡಲ್ಪಟ್ಟವು.

ಹೊಸಪೇಟೆಯಲ್ಲಿ ಹೈಸ್ಕೂಲಿನ ಒಂದು ಭಾಗವು ಸುಡಲ್ಪಟ್ಟಿತು.

ಕಡಪಾ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಟಪಾಲಿನವನನ್ನು ಮುತ್ತಿ ಅವನ ಚೀಲವನ್ನು ಸುಟ್ಟರು.

ಕಾಸರಗೋಡಿನಲ್ಲಿ ಕೋರ್ಟಿನಲ್ಲಿ ಪಿಕೆಟ್ ಮಾಡಿದ ಆರು ಜನರನ್ನು ಬಂಧಿಸಲಾಗಿದೆ.

ಚಿರಾಲ ಪೇರಾಲ ಮುಂತಾದ ಐದು ಗ್ರಾಮಗಳ ಮೇಲೆ ೭೫,೦೦೦ ರೂಪಾಯಿಗಳ ದಂಡವನ್ನು ವಿಧಿಸಿರುವರು.

ಶ್ರೀ ವಿದ್ಯಾಗಣಪತಿ ಸಭಾ ಸಂಸ್ಕೃತ ಮಹಾಪಾಠಶಾಲಾ ಮೈಸೂರು

16-9-42 ಬುಧವಾರ ಉಪನ್ಯಾಸ ಬ್ರ॥ ಶ್ರೀ॥ ವಿದ್ವಾನ್ ಜಗ್ಗು ವೆಂಕಟಾಚಾರ್ಯರು, ವಿದ್ಯಾಗುರುಕುಲವಾಸ.

17-9-42 ಗುರುವಾರ ಉಪನ್ಯಾಸ ಬ್ರ॥ ಶ್ರೀ॥ ಪೌರಾಣಿಕ ರತ್ನಂ ಧರ್ಮಾಧಿಕಾರಿ ಹೊಳವನಹಳ್ಳಿ ಶೇಷಾಚಾರ್ಯರು ಜ್ಞಾನಯೋಗ.

18-9-42 ಶುಕ್ರವಾರ ಗೋಟುವಾದ್ಯ ಮ॥ ರಾ॥ ಆಸ್ಥಾನ ಗೋಟುವಾದ್ಯ ವಿದ್ವಾನ್ ಎಸ್. ನಾರಾಯಣಯ್ಯಂಗಾರ್ಯರು ಗೋಟುವಾದ್ಯ

ಮ॥ ರಾ॥ ಆಸ್ಥಾನ ವಿದ್ವಾನ್ ವೆಂಕಟೇಶದೇವರ್‌ರವರು ಮೃದಂಗ.

19-9-42 ಶನಿವಾರ ಉಪನ್ಯಾಸ ಬ್ರ॥ ಶ್ರೀ॥ ವಿದ್ವಾನ್ ಪಾಟಣಕರ ಚಂದ್ರಶೇಖರಭಟ್ಟರು ವೇದವೇದಾಂಗಗಳು

ಜರ್ಮನ್ ನಾವಿಕರ ದಂಗೆ

ಜರ್ಮನ್ ನಾವಿಕರು ಈಗ ನಡೆಯುತ್ತಿರುವ ಯುದ್ಧದ ಬಗ್ಗೆ ಬೇಸರಗೊಂಡು ಉತ್ತರ ಸಮುದ್ರದಲ್ಲೂ ಮತ್ತು ಬಾಲ್ಟಿಕ್ ಸಮುದ್ರದಲ್ಲೂ ಅಧಿಕಾರಿಗಳ ಮೇಲೆ ದಂಗೆಯೆದ್ದಿರುವರೆಂದು ತಿಳಿದು ಬರುತ್ತದೆ. ಆ ದಂಗೆಕೋರರನೇಕರನ್ನು ಜರ್ಮನ್ ಅಧಿಕಾರಿಗಳು ಗುಂಡಿನಿಂದ ಹೊಡೆದು ಕೊಲ್ಲುತ್ತಿದ್ದಾರೆಂಬ ಸುದ್ದಿ ಬಂದಿದೆ.

ಜಾಮೀನು ಅರ್ಜಿಯ ನಿರಾಕರಣೆ

ಬೆಂಗಳೂರು ವೃತ್ತಪತ್ರಿಕಾ ಸಂಪಾದಕರುಗಳನ್ನು ಜಾಮೀನಿನ ಮೇಲೆ ಬಿಡಬೇಕೆಂದು ಅಪೀಲು ಹಾಕಿಕೊಂಡಿದ್ದ ಅರ್ಜಿಯನ್ನು ನೆನ್ನೆ ಸಂಜೆ ಬೆಂಗಳೂರು ಸೆಷನ್ಸ್ ನ್ಯಾಯಾಧೀಶರು ನಿರಾಕರಿಸುತ್ತಾರೆ.

ಡಾ॥ ಎಸ್. ಸಿ. ಬ್ಯಾನರ್ಜಿಯವರ ದಸ್ತಗಿರಿ

ಕಲ್ಕತ್ತಾ

ಲೆಜಿಸ್ಲೆಟಿವ್ ಅಸೆಂಬ್ಲಿಯ ಸದಸ್ಯರಾದ ಡಾ॥ ಸುರೇಶಚಂದ್ರಬ್ಯಾನರ್ಜಿಯವರನ್ನು ಫರೀದಪುರ ಜಿಲ್ಲೆಯಲ್ಲಿ ೯ ತಾ॥ ದಸ್ತಗಿರಿ ಮಾಡಿದಾರೆಂದು ತಿಳಿದುಬಂದಿದೆ.

ಉಪಾಧ್ಯಾಯರುಗಳ ಸಮ್ಮೇಳನ

ಈಗ್ಗೆ ಕೆಲವು ದಿನಗಳ ಹಿಂದೆ ಕಲ್ಕತ್ತೆಯ ನ್ಯಾಷನಲ್ ಸ್ಕೂಲುಗಳ ಉಪಾಧ್ಯಾಯರುಗಳು ಸಭೆ ಸೇರಿ ಪೂಜಾ ಹಾಲಿಡೇ ವರೆಗೆ ಸ್ಕೂಲುಗಳಿಗೆ ರಜಾ ಕೊಟ್ಟಿದೆಯೆಂದು ತಿಳಿಸಿದರು. ಮೊನ್ನೆ ಮತ್ತೆ ಅಲ್ಲಿನ ಎಲ್ಲಾ ಸ್ಕೂಲುಗಳ ಉಪಾಧ್ಯಾಯರುಗಳು ಸಭೆ ಸೇರಿ ಎಂದಿನಂತೆ ಸ್ಕೂಲುಗಳು ಕೆಲಸ ಮಾಡಿದರೆ ಯುಕ್ತವಾಗಿರುವುದಾದ್ದರಿಂದ ವಿದ್ಯಾರ್ಥಿಗಳು ಆಯಾ ಸ್ಕೂಲುಗಳಿಗೆ ಹಾಜರಾಗಬೇಕೆಂದು ತೀರ್ಮಾನಿಸಿದ್ದಾರೆ.

ಮೈಸೂರು ಸರ್ಕಾರದ ಅರಗು ಮತ್ತು ಬಣ್ಣದ ಕಾರ್ಖಾನೆ

ಮೈಸೂರು

ಎಲ್ಲಾ ಕೆಲಸಗಳಿಗೂ ಉಪಯೋಗವಾದ ಉತ್ತಮ ತರಗತಿಯ ಮೊಹರು ಮಾಡುವ ಅರಗುಗಳು ತಯಾರಿಸಲ್ಪಡುತ್ತವೆ.

೧. (ಮೊಹರಿನ ಅರಗು) ಉತ್ತಮ ತರಗತಿ—ಬ್ಯಾಂಕುಗಳ ಉಪಯೋಗಕ್ಕೆ

೨. ,, ಒಂದನೇ ರಕಂ } ಆಫೀಸುಗಳ ಉಪಯೋಗಕ್ಕೆ

೩. ,, ಎರಡನೇ ರಕಂ }

೪. ,, ಮೂರನೇ ರಕಂ (ಎ) } ವ್ಯಾಪಾರೋದ್ಯಮಕ್ಕೆ

೫. ,, ,, (ಬಿ) }

೬. ರೈಲ್ವೆ ಮೊಹರಿನ ಅರಗು—ರೈಲ್ವೆ ವಾಗನ್ನುಗಳ ಬಾಗಿಲುಗಳನ್ನು ಮೊಹರು ಮಾಡುವುದಕ್ಕಾಗಿ.

ವಿವರಗಳಿಗೆ ಈ ಕೆಳಗೆ ಕಂಡವರಲ್ಲಿ ವಿಚಾರಿಸಿ :—

೧. ಮೆಸರ್ಸ್ ಸ್ಟಾಂಡರ್ಡ್ ಪೇಂಟ್ ಸಪ್ಲೈಸ್,
ಶ್ರೀ ಕೃಷ್ಣಾ ಬಿಲ್ಡಿಂಗ್ಸ್, ಅವೆನ್ಯೂ ರಸ್ತೆ,
ಬೆಂಗಳೂರು ಸಿಟಿ.

೨. ಮಿ॥ ಕೆ. ಎಂ. ಇಬ್ರಾಹಿಂ ಷರೀಫ್,
ನಂ. ೩೫, ಅವೆನ್ಯೂ ರಸ್ತೆ ಚೌಕ, ಬೆಂಗಳೂರು ಸಿಟಿ.
(ಮೈಸೂರು ದೇಶಕ್ಕೆ ಸೋಲ್ ಏಜೆಂಟರು.)

ಟೋಬ್ರುಕ್ ಮೇಲೆ ಮಿತ್ರ ವಿಮಾನ ಧಾಳಿ

ಕೋವೆಲ್ಲುರಿಗೆ ಸೇರಿದ, ಸಾಮಾನು ಸರಬರಾಜು ಪ್ರದೇಶವಾದ ಟೋಬ್ರುಕ್ ಮೇಲೆ ಮಿತ್ರ ಪಕ್ಷದ ವಿಮಾನಗಳು ಧಾಳಿ ನಡೆಸಿ, ಬಾಂಬುಗಳನ್ನು ಎಸೆದರು. ಇದರ ಪರಿಣಾಮವಾಗಿ, ಟೋಬ್ರುಕ್ ಪಟ್ಟಣದಲ್ಲಿ ಅಗ್ನಿ ಜ್ವಾಲೆಗಳುಂಟಾದವು. ಕೋವೆಲ್ಲುರು ವಶಪಡಿಸಿಕೊಂಡಿರುವ ಮಾರ್ಸ್ ಇಟ್ರಿ ಮೇಲೆ, ಮಿತ್ರರು ಬಾಂಬು ಹಾಕಿದರು. ಬಾಂಬುಗಳು ಭಾರಿ ಕಟ್ಟಡಗಳ ಮೇಲೆ ಸಿಡಿದು ಶಬ್ದವುಂಟಾಗಿ, ಜ್ವಾಲೆ ಪ್ರಾರಂಭಿಸಿತು. ಶತ್ರುಗಳಿಗೆ ಭಾರಿ ನಷ್ಟವುಂಟಾಗಿವೆ. ಅಮೆರಿಕಾ ಬಾಂಬರುಗಳು ಕೂಡಾ ಕೊಲ್ಲಿಯ ಕ್ರೀಟಿನಲ್ಲಿ ಬಾಂಬು ಹಾಕಿದವು. ಅವರ ಪರಿಣಾಮವು ಇನ್ನೂ ತಿಳಿದಿಲ್ಲ.

ಕಲೋನಿಯಲ್ ಭತ್ಯ !

ಬ್ರಿಟಿಷರ ದರಗಳಂತೆಯೇ ಭಾರತದಲ್ಲಿ ಸಂಬಳ ಪಡೆಯುತ್ತಿರುವ ಯೂರೋಪಿಯನ್ ಅಧಿಕಾರಿಗಳಿಗೆಲ್ಲಾ ದಿನ ಒಂದಕ್ಕೆ ೫ ಷಿಲಿಂಗುಗಳಂತೆ ಕಲೋನಿಯಲ್ ಭತ್ಯವನ್ನು ಕೊಡಬೇಕೆಂದು ನಿರ್ಧರಿಸಲಾಗಿದೆ ಎಂದು ಸಮರ ಮಂಡಲದ ಸದಸ್ಯರುಗಳಾದ ಸರ್ ಜೇಮ್ಸ್ ಗ್ರಿಗ್‌ರವರು ತಿಳಿಸಿದರು.

ತಿರುವಾಂಕೂರು ತ್ರಯ !

ತಿರುವಾಂಕೂರ ಮಹಾರಾಜರು ಅಣ್ಣಾಮಲೈ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣವನ್ನೂ, ತಿರುವಾಂಕೂರು ಮಹಾರಾಣಿ ಸೇತು ಪಾರ್ವತಿಬಾಯಿಯವರು ಆಂಧ್ರ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣವನ್ನೂ, ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿಅಯ್ಯರ್‌ರವರು ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣವನ್ನೂ ಈ ಸಾರಿ ಮಾಡುತ್ತಾರೆ. (ವಿಶ್ವಕರ್ಣಾಟಕದಿಂದ)

ದುರಂತ ಪ್ರಕರಣ

ಮೊನ್ನೆ ಕರಾಚಿಯಲ್ಲಿ ಒಂದು ಉದ್ರೇಕಗೊಂಡ ಗುಂಪು, ಅಲ್ಲಿನ ಸರ್ಕಾರಿ ಹೈಸ್ಕೂಲಿಗೆ ಬೆಂಕಿ ಹಚ್ಚಿತು ಮತ್ತು ಹೈಸ್ಕೂಲಿನ ಮಹಡಿ ಕೆಲವು ಭಾಗವು ಸುಟ್ಟುಹೋಯಿತು ! ಕೂಡಲೇ ಅಲ್ಲಿನ ಜವಾನರು ಬೆಂಕಿಯನ್ನು ಆರಿಸಿದರು.

ಅಲ್ಲಿನ ರೈಲ್ವೆ ಪೋಲೀಸ್ ಸ್ಟೇಷನ್ನಿಗೆ ಬೆಂಕಿ ಹಾಕಲು ಒಂದು ಗುಂಪು ಪ್ರಯತ್ನಿಸಿತು. ಪೋಲೀಸಿನವರು, ಬೆಂಕಿಯನ್ನು ಆರಿಸಿದರು.

ಅಲ್ಲಿಯ ವಿದ್ಯಾರ್ಥಿಗಳು ಬೀದಿಗಳಲ್ಲಿ ಪ್ರಭಾತ್ ಫೇರಿ ನಡೆಸಿದಾಗ ೩೭ ಜನ ವಿದ್ಯಾರ್ಥಿಗಳು ಮತ್ತು ಇತರರನ್ನು ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಪ್ರಕಾರ ದಸ್ತಗಿರಿ ಮಾಡಿದ್ದಾರೆ.

ಕಳಿಂಗ ಪಟ್ಟಣದ ಅಂಚೆ ಕಚೇರಿ ಲೂಟಿ

೨೦ ನೇ ತಾ॥ ಕಳಿಂಗ ಪಟ್ಟಣದ ಅಂಚೆ ಕಚೇರಿಯನ್ನು ಅಲ್ಲಿನ ಜನರು ಲೂಟಿಮಾಡಿ, ರಿಕಾರ್ಡುಗಳನ್ನೆಲ್ಲಾ ಸುಟ್ಟುಹಾಕಿದರು.

ಮೀಜೂರ್ ಎಂಬ ಊರಿನಲ್ಲಿ ಅಲ್ಲಿನ ಕೆಲವು ಜನರು, ಕೆಲವು ಗುಡಿಸಲುಗಳನ್ನು ಸುಟ್ಟುಹಾಕಿ, ಪದಾರ್ಥಗಳನ್ನು ದೋಚಿದ್ದಾರೆ. ಒಟ್ಟು ನಷ್ಟ ೫೦೦೦ ರೂ ಗಳವರೆಗೆ ಆಗಿದೆ.

ಅನಂತಪುರದ ಕಾಲೇಜ್ ಲಾಬೊರೆಟರಿಗೆ ಬೆಂಕಿ ಹಾಕಿದುದರ ಪ್ರಯುಕ್ತ ರಸಾಯನ ಶಾಸ್ತ್ರ ಸಂಬಂಧಪಟ್ಟ ಸಾಮಾನುಗಳು ಸುಟ್ಟುಹೋಗಿವೆ. ಬೆಂಕಿಹಾಕಿದ್ದಕ್ಕೆ ಕಾರಣ ತಿಳಿದಿಲ್ಲ. ಮತ್ತು ಪದಾರ್ಥಗಳ ನಷ್ಟವೆಷ್ಟು ಎಂಬುದು ಅಂದಾಜಾಗಿಲ್ಲ. ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕಾಲೇಜಿಗೆ ಹೋಗಿ, ನೋಡಿದರು. ಪೋಲೀಸಿನವರು ತನಿಖೆ ಕ್ರಮ ನಡೆಸುತ್ತಿದ್ದಾರೆ.

ಹಳ್ಳಿಯವರ ಮೇಲೆ ಜುಲ್ಮಾನೆ

ಬಂಗಾಳ ಸರ್ಕಾರದವರು ಕಾಳಕತ್ತೆ ... ಆಹಮದ್‌ಪುರ್ ಎಂಬ ಗ್ರಾಮಗಳ ಮೇಲೆ ೧೦,೦೦೦ ರೂ ಜುಲ್ಮಾನೆ ವಿಧಿಸಿದ್ದಾರೆ.

ಸಾಮೂಹಿಕ ದಂಡವನ್ನು ಅವಿಭಕ್ತ ಕುಟುಂಬದ ಮೇಲೂ ಹೊರಿಸಬಹುದು

ಸಾಮೂಹಿಕ ದಂಡವನ್ನು ಹೇರುವಾಗ ಅವಿಭಕ್ತ ಹಿಂದೂ ಕುಟುಂಬದ ಮೇಲೆಯೂ ಸಹ ಒಂದು ಭಾಗವನ್ನು ಹೊರಿಸಬಹುದೆಂದೂ ಈ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೇ ವಹಿಸಬಹುದೆಂಬ ಬಗ್ಗೆ "ಸಾಮೂಹಿಕ ದಂಡ" ದ ಕಾನೂನಿಗೆ ತಿದ್ದುಪಡಿಯೊಂದನ್ನು ಸೇರಿಸಿದೆ ಎಂದು ನ್ಯೂಡೆಲ್ಲಿಯಿಂದ ಆಜ್ಞೆ ಹೊರಟಿದೆ.

ರಾಮನಾಡು ಜಿಲ್ಲಾ ರಾಜಪಾಳ್ಯಂ ಟೌನಿನಲ್ಲಿ ಮೊನ್ನೆ ೬ ನೇ ತಾ॥ ಹರತಾಳವು ನಡೆಯಿತು. ಆಗ ಪೋಲೀಸಿನವರು ಎಚ್ಚರಿಕೆ ಕೊಟ್ಟರೂ ಕೂಡ ಅಂಗಡಿಗಳನ್ನು ತೆರೆಯದಿದ್ದುದರಿಂದ ೩೫ ಜನ ವರ್ತಕರ ಮೇಲೆ ಮೊಕದ್ದಮೆಯು ಡಿಫೆನ್ಸ್ ಕಾನೂನಿನಂತೆ ದಾಖಲಾಗಿದೆ.

ಕೊಚ್ಚಿನ್ ಸರ್ಕಾರವು ಸಂಸ್ಥಾನದಲ್ಲಿ ಶಾಂತ ಪರಿಸ್ಥಿತಿಯುಂಟಾಗುವವರೆಗೂ ಹಾಲಿ ಸಭೆ ವಗೈರೆಗಳಿಗೆ ಹಾಕಿರತಕ್ಕ ನಿರ್ಬಂಧಾಜ್ಞೆಯನ್ನು ತೆಗೆಯುವುದಿಲ್ಲವೆಂದು ವಿಶೇಷ ಗೆಜೆಟ್ ಹೊರಡಿಸಿದ್ದೆ.

ತ್ರಿಚನಾಪಳ್ಳಿ ಪೌರಸಭೆಯ ಹತ್ತು ಮಂದಿ ಸದಸ್ಯರು ಸರ್ಕಾರದ ತತ್ವವನ್ನು ವಿರೋಧಿಸುವುದಕ್ಕಾಗಿ ರಾಜೀನಾಮೆ ಇತ್ತಿರುವರು.

ಪುತ್ತೂರು ತಾ॥ ಉಪ್ಪಿನಂಗಡಿ ಪಂಚಾಯಿತಿ ಬೋರ್ಡಿನ ಅಧ್ಯಕ್ಷರೂ ಮತ್ತು ಎಲ್ಲಾ ಸದಸ್ಯರುಗಳೂ ಸರ್ಕಾರದ ದಬ್ಬಾಳಿಕೆಯ ನೀತಿಗಾಗಿ ರಾಜೀನಾಮೆ ಕೊಟ್ಟಿರುವರು.

ಕಾನ್ಪುರಕ್ಕೆ ಸೇರಿದ ಕಲೆಕ್ಟರ್ ಗಂಜ್ ಪೋಲೀಸ್ ಠಾಣೆಯ ಆವರಣದೊಳಗೆ ಪಕ್ಕದ ಹಿತ್ತಲಿನಿಂದ ಬಾಂಬೊಂದು ಸಿಡಿಯಿತು. ಜನಕ್ಕಾಗಲಿ, ಆಸ್ತಿಪಾಸ್ತಿಗಾಗಲಿ ನಷ್ಟವೇನೂ ಆಗಲಿಲ್ಲ. ಸ್ವಲ್ಪ ಕಾಲಾನಂತರ ಯಾವನೋ ಒಬ್ಬ ದಸ್ತಗಿರಿಯಾದಾಗ ಅವನಲ್ಲಿದ್ದ ಅದೇ ತರಹದ ಮತ್ತೆರಡು ಬಾಂಬುಗಳು ದೊರೆತವು.

ಕಟಕ್‌ನಲ್ಲಿರುವ "ಸಮಾಜ" ಎಂಬ ಒರಿಯ ದಿನಪತ್ರಿಕೆಯು ತಾನಾಗಿಯೇ ಅನಿರ್ದಿಷ್ಟ ಕಾಲದವರೆಗೆ ನಿಲ್ಲಿಸಲ್ಪಟ್ಟಿರುತ್ತದೆ.

ಈ ತಿಂಗಳು ೨೭ ನೇ ತಾ॥ ಕ್ಯಾಲಿಕಟ್‌ನಲ್ಲಿ ನಡೆಯಲಿರುವ ಕೇರಳ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಬೊಂಬಾಯಿ ಕಮ್ಯೂನಿಸ್ಟ್ ಲೀಡರಾದ ಎಸ್. ಎ. ಡಾಂಗೆಯವರು ವಹಿಸುವರು.

ಹೈದರಾಬಾದ್ ಸರ್ಕಾರವು ಐದು ಟನ್ನುಗಳಿಗೆ ಮೇಲ್ಪಟ್ಟು ಕಬ್ಬಿಣ, ಉಕ್ಕನ್ನು ಸ್ಟಾಕಿಟ್ಟಿರುವವರೆಲ್ಲರೂ ಸರಿಯಾದ ಲೆಕ್ಕಗಳನ್ನಿಟ್ಟು ಸರ್ಕಾರದಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಬೇಕೆಂದು ಆಜ್ಞಾಪಿಸಿರುತ್ತೆ.

ಸಿಲಿಗುರಿಯಲ್ಲಿ ಗುಂಡು

ಬಂಗಾಳ ಪ್ರಾಂತ್ಯದ ಸಿಲಿಗುರಿಯಲ್ಲಿ ಮೆರವಣಿಗೆ ನಡೆಸುತ್ತಿದ್ದ ಒಂದು ಗುಂಪಿನ ಮೇಲೆ ಗುಂಡುಹಾರಿಸಲಾಯಿತು. ಇದರ ಫಲವಾಗಿ ಮೂವರು ಸತ್ತರು ೧೫ ಮಂದಿಗೆ ಗಾಯಗಳಾದವು.

ಬಿಕರಿಗೆ ಸಿದ್ಧವಾಗಿದೆ

ಒಂದು ರೂಲಿಂಗ್ ಮೆಷನ್ನು ಬಿಕರಿಗೆ ಇದೆ. ತೆಗೆದುಕೊಳ್ಳಲು ಇಷ್ಟವುಳ್ಳವರು ಈ ಕೆಳಗಿನ ಅಡ್ರೆಸ್ಸಿಗೆ ಬೆಳಿಗ್ಗೆ 10-2 ರವರೆಗೂ ಮಧ್ಯಾಹ್ನ 5-9 ರವರೆಗೂ ಬಂದು ಅರ್ಜಿಮಾಡಬಹುದು,

ಎಂ. ವೀರಣ್ಣ ಶೆಟ್ಟಿ
ಸ್ಟೀಲ್ ವಾಸ
ಬ್ಯಾಂಕ್ ರೋ ಬಜಾರ್, ಮೈಸೂರು.

ಚೀನಾದ ರಾಜಧಾನಿಯಾದ ನಾನ್‌ಕಿಂಗ್ ಅನ್ನು ಜಪಾನೀಯರು ೧೯೩೭ ನೇ ಡಿಸೆಂಬರ್‌ನಲ್ಲಿ ಆಕ್ರಮಿಸಿಕೊಂಡಾಗ—

"ಜಪಾನೀ ಸೇನೆಗಳು ಕೇವಲ ಮೂರು ವರ್ಷದ ವಯಸ್ಸಿನ ಮಕ್ಕಳನ್ನು ಬಾಕುಗಳಿಂದ ತಿವಿಯುತ್ತಿದ್ದನ್ನು ನಾನು ಕಣ್ಣಾರೆ ಕಂಡೆನು"

ಚೀನಾದೊಡನೆ ಜಪಾನು ಯುದ್ಧ ಆರಂಭವಾಗುವುದಕ್ಕೆ ಮುಂಚಿನ ‘ರೀಡರ್ಸ್ ಡೈಜೆಸ್ಟ್’ ಎಂಬ ಅಮೇರಿಕಾ ಪತ್ರಿಕೆಯ ೧೯೩೮ ನೇ ಜುಲೈ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಲೇಖನ.



—ತನ್ನ ಚೀನವಾಗಿ ವರ್ತಿಸುತ್ತಾರೆ—ಜಪಾನೀಯರ ... ಬಂದರೆ

ನಾವು ಎಲ್ಲರೂ

ನಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು

ಒಟ್ಟುಗೂಡಿ ಕೆಲಸಮಾಡಬೇಕು

ದೇಶೀಯ ಯುದ್ಧರಂಗದ ಮುಂಚೂಣಿ

ಯನ್ನು ಸೇರಿ

ಜಪಾನೀಯರನ್ನು ದೂರಕ್ಕಟ್ಟಿಸುವುದಕ್ಕಾಗಿ

CPU AAT

ಮಹಾಬೀರ್ ಸರ್ವಿಸ್,

ಗಾಂಧಿ ಸ್ಕ್ವೇರ್, ಮೈಸೂರು.

ಮೈಸೂರಿನಿಂದ ಶ್ರೀರಂಗಪಟ್ಟಣ, ಪಾಂಡವಪುರ, ಕೆ. ಆರ್. ಪೇಟೆ, ಕೊಪ್ಪಲು, ಕೊಡಗಹಳ್ಳಿ,
ಬನ್ನೂರು, ಮಳವಳ್ಳಿ ಮಾರ್ಗವಾಗಿ ಹಲಗೂರು, ಮೈಸೂರಿನಿಂದ ... ಕೇರಳಪುರ, ... ಮಾರ್ಗವಾಗಿ ... ಹೋಗುತ್ತೆ.
... ಬಸ್ಸುಗಳು ಸರ್ವೀಸ್ ಮಾಡುತ್ತಿವೆ ...
ರೇಡಿಯೋ ವ್ಯಾಪಾರ ಮತ್ತು ರಿಪೇರಿ ...

ಸುಹ್ರಾವರ್ದಿಯೊಡನೆ ಭೇಟಿಯೆ?

ದ|| ಶಿವಪ್ರಸಾದ್ ಮುಖರ್ಜಿಯವರು, ಹಿಂದೂ ಮಹಾಸಭೆ ಕಾರ್ಯಕಾರಿ ಸಮಿತಿಯ ಪರವಾಗಿ ಮಹಾತ್ಮಾ ಗಾಂಧೀಜಿಯವರನ್ನು ಭೇಟಿ ಮಾಡಲು ಅವಕಾಶ ಕೊಡಬೇಕೆಂದು ವೈಸರಾಯರಿಗೆ ಪತ್ರ ಬರೆದಿರುವರೆಂದು ಯುನೈಟೆಡ್ ಪ್ರೆಸ್ ವಾರ್ತಾ ಸಂಸ್ಥೆಯು ತಿಳಿಸುತ್ತವೆ

ಉಪವಾಸ ಮುಕ್ತಾಯ

ಲೇಡಿ ನಾರ್ತ್‌ಕೋಟ್ ಅನಾಥಾಲಯದ ಒಂದು ನೂರು ಇಪ್ಪತ್ತೊಂಭತ್ತು ಅನಾಥ ವಿದ್ಯಾರ್ಥಿನಿಯರುಗಳು, ತಮ್ಮ ಆಲಯದ ಸೂಪರಿಂಟೆಂಡೆಂಟರು ಸರಿಯಾದ ರೀತಿ ತಮ್ಮ ವಿಷಯದಲ್ಲಿ ನಡೆದುಕೊಳ್ಳಲಿಲ್ಲವೆಂದು ಉಪವಾಸ ಮುಷ್ಕರ ಹೂಡಿದ್ದಾರೆಂದು ಬೊಂಬಾಯಿ ವಾರ್ತೆಯೊಂದು ತಿಳಿಸುತ್ತದೆ

ನಾಜಿಗಳ ದೌರ್ಜನ್ಯ

ಗುಪ್ತವಾದ ರೀತಿಯಲ್ಲಿ ಹಸ್ತಪತ್ರಿಕೆಗಳನ್ನು ತಯಾರಿಸಿ ಹಂಚುತ್ತಿದ್ದ ಒಂಬತ್ತು ನೇರವೇರಿಂಟ... ಈ ಅಪರಾಧಕ್ಕಾಗಿ ನಾಲ್ಕು ಜನರನ್ನು ಮರಣದಂಡನೆಗೆ ಗುರಿಮಾಡಿ ಉಳಿದ ಮೂವರಿಗೆ ಎಂಟರಿಂದ ೧೫ ವರ್ಷಗಳವರೆಗೂ ಸಜಾ ಶಿಕ್ಷೆಯನ್ನು ಜರ್ಮನ್ ನ್ಯಾಯಸ್ಥಾನವು ವಿಧಿಸಿತು. ಶಿಕ್ಷೆ ಹೊಂದಿದವರೆಲ್ಲರೂ ಜೆಕ್ ಪ್ರಜೆಗಳು ಎಂದು ಗೊತ್ತಾಗಿದೆ

"ಅಪ್ಸರ ಘರ"

ಇಂದು ಕಣ್ಣಿಗೆ ಕಟ್ಟಿದಂತೆ ನಿಂತಿರುವ ಚಿತ್ರವೊಂದರ ರೀಜೆಂಟ್ ಟಾಕೀಸಿನಲ್ಲಿ ನಡೆಯುತ್ತಿರುವ 'ಪ್ರೀತಿವಲ ನಮ್ಮ ವನ' ಎಂದು ಕರೆಯಿಸುವ ಚಿತ್ರ ತರಂಗವೆಂದರೆ ಅತಿಶಯೋಕ್ತಿಯಲ್ಲ! ಇದು ಇಬ್ಬರು ಪ್ರೇಮಿಗಳ ಅಂತರಾಳವನ್ನು ಅರಿತಿರುವ ಆಧುನಿಕ ಚಿತ್ರ! ನವೀನ ಸಮಯದ ಸಾಧನೆಯ ಚಿತ್ರ! ಪ್ರತಿಯೊಬ್ಬ ಪ್ರೇಕ್ಷಕನ ಪುಟ್ಟ ಹೃದಯವನ್ನು ಉಬ್ಬಿ ತಗ್ಗಿಸುವ ಚಿತ್ರ!

ಆ ಕಾ ಶ ವಾ ಣಿ

ಸೆಪ್ಟೆಂಬರ್ ೧೬ ನೇ ಬುಧವಾರ

೬. ೦೦ ಸಮೂಹ ವಾದ್ಯಗಾನ ೬-೧೫ ಕರ್ನಾಟಕ ಹಾಡುಗಾರಿಕೆ ೬-೩೦ ವಾರ್ತೆಗಳು, ಕಾರ್ಯಕ್ರಮ ೬-೩೫ 'ಅಂತೆ': ಒಂದು ಕಿರುನಾಟಕ ೭-೪೫ 'ಬಲಿದಾನ': ಒಂದು ಸಣ್ಣ ಕಥೆ ಜನಾಬ್ 'ನೂರ್' ೭-೨೦ ವೃತ್ತಾಂತ, ವ್ಯಾಖ್ಯಾನ ೭-೧೫ ಖಬರೆ ೭-೩೦ ಚಲನ ಚಿತ್ರಗೀತೆಗಳು ೭-೪೦ ರೇಡಿಯೋ ವಿನ ಗುಟ್ಟು, ಉಲಿಗಳು ಭಾಷಣ · ಎಂ ಆರ್ ಆರ್ ೭-೪೫ ಹಾಡುಗಾರಿಕೆ, ವಿದ್ವಾನ್ ಕೆ. ವಿ. ಅಚ್ಯುತರಾವ್ ೯-೧೫ ವೃತ್ತಾಂತ ೯-೨೦ 'ರಸೂಲ್' ೯-೩೦ ರಾಷ್ಟ್ರಗೀತೆ

ಕುಡಿಯುವ ನೀರಿನ ಭಾವಿಗಳಿಗಾಗಿ ೩ ಲಕ್ಷ ರೂ.

ಮೈಸೂರು ಸರ್ಕಾರದವರು ಸಂಸ್ಥಾನದಲ್ಲಿ ಕುಡಿಯುವ ನೀರಿನ ಭಾವಿಗಳನ್ನು ತೆಗೆಯಲು ೩ ಲಕ್ಷ ರೂ ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ ಮೈಸೂರು ಡಿಸ್ಟ್ರಿಕ್ಟಿಗೆ ೩೦೦೦೦ ಗಳನ್ನು ಕೊಡಲಾಗಿದ

ಚೈನಾ ಇನ್ನೂ ಐದು ವರ್ಷ ಯುದ್ಧ ಮಾಡಬಲ್ಲದು

ಚೈನಾ ದೇಶವು ಇನ್ನೂ ೫ ವರ್ಷಗಳ ಕಾಲ ಯುದ್ಧ ಮಾಡಬಲ್ಲದು ಎಂಬುದಾಗಿ ಅಲ್ಲಿನ ಯುದ್ಧ ಮಂತ್ರಿಗಳ ಅಭಿಪ್ರಾಯ. ಜನ ಸಂಖ್ಯೆ ಅಪರಿಮಿತವಾಗಿದೆ. ಈಗ ೧೦ ಮಿಲಿಯನ್ ಜನರು ಸೈನ್ಯ ಸೇವೆಗೆ ಸಿದ್ಧರಾಗಿದ್ದಾರೆ

ಅಲಹಾಬಾದಿನಲ್ಲಿ ದಸ್ತಗಿರಿ

ಅಲಹಾಬಾದ್ ನಗರದಲ್ಲಿ ಪೋಸ್ಟ್ ಆಫೀಸ್ ಕಟ್ಟಡಗಳನ್ನು ಸುಡಲು ಪ್ರಯತ್ನಿಸಿದರೆಂದು ಸುಮಾರು ಮೂವತ್ತು ದಸ್ತಗಿರಿಗಳಾಗಿವೆಯೆಂದು ತಿಳಿದುಬಂದಿದೆ

Edited printed and published by N. Subrahmanyaiah, Sadhvi Press, D. Subbaiah Road, Mysore

ಮತ್ತೆರಡು ಜಿಲ್ಲಾ ಬೋರ್ಡುಗಳ ರದ್ದು

ಚಂಗಲ್‌ಪೆಟ್—ಚಿತ್ತೂರು

ಕೆಳಗಿನ ಕಾರಣಗಳಿಗಾಗಿ ಚಿತ್ತೂರು ಜಿಲ್ಲಾ ಬೋರ್ಡ್ ಆರು ತಿಂಗಳ ಕಾಲ ರದ್ದುಪಡಿಸಲ್ಪಟ್ಟಿರುತ್ತೆ ೧ ಜಿಲ್ಲಾ ಬೋರ್ಡು ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯವನ್ನು ಸ್ವಾಗತಿಸಿದ್ದು ೨. ಕಾಂಗ್ರೆಸ್ ಮುಖಂಡರನ್ನು ದಸ್ತಗಿರಿ ಮಾಡಿದ್ದಕ್ಕೆ ಸರ್ಕಾರದವರು ಖಂಡನೆ ಮಾಡಿದ್ದು ೩. ತನ್ನ ಕೈಕೆಳಗಿದ್ದ ಸೆಕೆಂಡ್ರಿ ಶಾಲೆಗಳನ್ನು ಮುಚ್ಚಿಸಿದ್ದು.

ಇದೇ ರೀತಿ ನಡೆವಳಿಕೆಗಾಗಿ ಚಂಗಲ್‌ಪೆಟ್ ಬೋರ್ಡ್ ರದ್ದುಪಡಿಸಲ್ಪಟ್ಟಿತು ಎಂದು ಸರ್ಕಾರೀ ಪ್ರಕಟಣೆಯು ತಿಳಿಸುತ್ತದೆ.

ಮದರಾಸಿನಲ್ಲಿ ೩೭ ಮಂದಿಗೆ ಅಪಾಯ

ಸೆಪ್ಟೆಂಬರ್ ೧೧ ಕ್ಕೆ ಅಂತ್ಯವಾದ ವಾರ ಮದರಾಸಿನಲ್ಲಿ ಅಪಾಯಕ್ಕೆ ಈಡಾಗಿ ಇಬ್ಬರು ಕೊಲ್ಲಲ್ಪಟ್ಟು ೩೭ ಜನರು ಗಾಯಹೊಂದಿದರು ೧೦ ಮಂದಿಗೆ ಅಪಾಯವು ರಾತ್ರಿಯಲ್ಲೂ ಉಳಿದವರಿಗೆ ಹಗಲಿನಲ್ಲೂ ಸಂಭವಿಸಿದುವು ಅಪಾಯಕ್ಕೆ ತುತ್ತಾದ ವಿವರಗಳವು ಇಬ್ಬರು ಪಾದಚಾರಿಗಳು, ಒಂದು ಪಶು, ನೋಟಾರುಕಾರುಗಳು, ೧೦ ಮೋಟಾರು ಸೈಕಲ್ ೩ ಟ್ರಾನ್ಸ್‌ಪೋರ್ಟ್ ವೆಹಿಕಲ್ಸ್ ೧೧ ಬಸ್ಸುಗಳು ೫ ಟ್ಯಾಕ್ಸಿ ೧ ಕುದುರೆಯಿಂದ ಎಳೆಯಲ್ಪಡುವ ಗಾಡಿ, ೩ ಕೈಗಾಡಿಗಳು ೩ ಎತ್ತಿನ ಬಂಡಿಗಳು ೬ ರಿಕ್ಷಾ ೧ ಬೈಸಿಕಲ್ ೮ ಟ್ರಾಮ್ ಕಾರ್‌ಗಳು ಮತ್ತು ಎ. ಆರ್. ಪಿ ವಾಹನ ಒಂದು.

ಇಂಡಿಯಾ ಪರಿಸ್ಥಿತಿಯ ಬಗ್ಗೆ ಅಮೆರಿಕಾ ಅಧ್ಯಕ್ಷರ ಮಧ್ಯಸ್ಥಿಕೆ

ಇಂಡಿಯಾದಲ್ಲಿ ಈಗಿನ ಪರಿಸ್ಥಿತಿಯ ವಿಚಾರದಲ್ಲಿ ಅಧ್ಯಕ್ಷ ರೂಸ್‌ವೆಲ್ಟರು ಮಧ್ಯಸ್ಥಿಕೆ ವಹಿಸಿ ಎರಡು ರಾಷ್ಟ್ರಗಳಿಗೂ ಸರ್ವ ಸಮ್ಮತವಾದ ಸ್ಥಿತಿಯನ್ನು ಕೊಡಬೇಕೆಂದು ಲಾರ್ಡ್ ಸ್ಟ್ಯಾಬೋಲ್ಗಿಯವರು ಕಾಮನ್ಸ್ ಸಭೆಯಲ್ಲಿ ಹೇಳಿದ್ದಾರೆ.

ಪೆಸಿಫಿಕ್ ತೀರದಲ್ಲಿ ಜಪಾನರಿಗೆ ಸೇರಿದ ಜಲ್ಲಾದ ವಿಮಾನ ನಿಲ್ದಾಣದ ಮೇಲೆ ಮಿತ್ರವಿಮಾನಗಳು ಹಾರಾಡಿ ಭಾರಿ ಬಾಂಬುಗಳನ್ನು ಎಸೆದವು ಹತ್ತು ಧಾಳಿ ನಡೆಸಿ 17 ಶತ್ರುವಿಮಾನಗಳನ್ನು ನಾಶಪಡಿಸಲಾಯಿತು.



ಸಂವತ್ಸರದ ಚಕ್ರವನ್ನು ತಿರುಗಿಸುತ್ತಾ, ನವ ಬೆಳಗಳನ್ನು ತರುವ ಸೂರ್ಯದೇವನ ಕೃಪಾದೃಷ್ಟಿಗೋಸ್ಕರವಾಗಿ, ನಮ್ಮ ನಾಡಿನಲ್ಲಿ ದಿನವೊಂದು ಸಾಗುತ್ತಿದೆ. ಹುಡುಗನೊಬ್ಬನು ತನ್ನ ಹೋತ್ರವನ್ನು ಗಾಳಿಗೆ ಹಿಡಿದು ಆರಿಸುತ್ತಿದ್ದಾನೆ. ಪಶ್ಚಿಮ ಕ್ಷೇತ್ರಗಳ ಮೇಲೆ ಪ್ರಕಾಶವು ಕಟ್ಟಿದೆ, ವೃಕ್ಷಗಳ ನೆರಳು ಎದ್ದಿವೆ. ರೈತನು ತನ್ನ ಹೊಲದಲ್ಲಿ ಕೆಲಸಮಾಡುತ್ತಿದ್ದಾನೆ; ದನಗಳು ನದೀತೀರದಲ್ಲಿ ಮೇಯುತ್ತಿವೆ. ಪಟ್ಟಣದಲ್ಲಿ ಇರುವ ನಗರಗಳ ಅವ್ಯಕ್ತ ನಿನಾದ ಬಹುದೂರದವರಿಗೆ ಕೇಳುತ್ತಿದೆ. ಇಂಡಿಯಾದ ಮೇಲೆ ಅಭಿಮಾನವುಳ್ಳವರಿಗೆ ಎಂತಹ ಸೌಂದರ್ಯ ಇದು.

ಈ ರಾಷ್ಟ್ರದ ವಿಶಾಲ ಗ್ರಾಮ ಪ್ರದೇಶದ ಶಾಂತಿ, ಶತಶತ ಮಾನಗಳಿಂದ ಆಧ್ಯಾತ್ಮಿಕ ಜೀವನವನ್ನು ಪ್ರೇರೇಪಿಸಿದೆ. ಕಾರ್ಯಧಾನ್ಯ ನಗರಗಳಲ್ಲಿ ಬಾಳ್ವೆಯ ನಾಗರಿಕರ ಈ ಮಹಾಶಾಂತಿಯ ಸರೋವರದಿಂದ ಶಾಂತಿಯನ್ನು ಪಡೆಯುತ್ತಿದ್ದಾರೆ. ಸಂಸಾರ ಮತ್ತು ಸ್ನೇಹದ ಆಸ್ತಿವಾರದ ಮೇಲೆ ನಿಂತಿರುವ ನಾಲ್ಕುಕೋಟಿ ಜನರ ಜೀವನವನ್ನು ನಮ್ಮ ಸೇನೆಗಳು ಕಾಪಾಡುತ್ತಿವೆ.

ನೀವೇ ಯೋಚನೆಮಾಡಿ ನೋಡಿರಿ
ಒಂದು ಗೂಡಿ ಹೋರಾಡಿರಿ
ಅದೇ ದೇಶೀಯ ಯುದ್ಧ ಪ್ರಯತ್ನ

G. A. S. A. I. R.

Regd. M 4343

ಬಿಡಿ ಪತ್ರಿಕೆ 3 ಕಾಸು

ಚಂದಾ ದರ

ಮೈಸೂರು, ಬೆಂಗಳೂರಿಗೆ
ತಿಂಗಳಿಗೆ ಎಂಟಾಣೆ.

ಪರಸ್ಥಳಗಳಿಗೆ
ತಿಂಗಳಿಗೆ ಹತ್ತಾಣೆ.

ಪೋಸ್ಟ್ ಮೂಲಕ
ತಿಂಗಳಿಗೆ ಒಂದು ರೂ.

ಸಾಧ್ವಿ

ಸಂಸ್ಥಾನದ
ಎಲ್ಲಾ ಕಡೆಗಳಲ್ಲಿಯೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನಪಡೆಯಿರಿ
ದರಗಳಿಗೆ ಬರೆಯಿರಿ.

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

SADHWI: LEADING NATIONALIST DAILY OF MYSORE.

ಸಂಪುಟ ೧] MYSORE: TUESDAY 15 9-1942 ಮೈಸೂರು: ಮಂಗಳವಾರ ೧೫—೯—೪೨ [ಸಂಚಿಕೆ ೫೭

ನಿಜವಾದ ಚೀನಿ ಭವಿಷ್ಯ

ಐನೂರು ವರ್ಷಗಳ ಬರೆಯಲಾಗಿದ್ದ ಒಂದು ಚೀನಿ ಭವಿಷ್ಯ ಪುಸ್ತಕದಲ್ಲಿ ಉಲ್ಲೇಖವಾದ ಅನೇಕ ಸಂಗತಿಗಳು ಇದುವರೆವಿಗೂ ನಿಜವಾಗುತ್ತ ಬಂದಿವೆ "ಚೀನಾದೇಶಕ್ಕೆ ಪಾಶ್ಚಿಮಾತ್ಯ ದೇಶಗಳಿಂದ ಸಹಾಯ ದೊರೆತು ಅದು ಜಪಾನನ್ನು ಸೋಲಿಸುವುದು ಎಂಬುದಾಗಿ ಆ ಭವಿಷ್ಯ ಗ್ರಂಥದಲ್ಲಿ ಹೇಳಿದೆ.

ಜಪಾನ್ ಆಕ್ರಮಿತ ರಾಷ್ಟ್ರಗಳಲ್ಲಿ ಈ ಪುಸ್ತಕದ ಪ್ರಭಾವವು ಹೆಚ್ಚುತ್ತಿರುವುದನ್ನು ಕಂಡು ಜಪಾನೀಯರು ಅದನ್ನು ಪ್ರತಿಬಂಧಿಸಿದ್ದಾರೆ.

ಈ ಗ್ರಂಥದಲ್ಲಿ ಹೇಳಲ್ಪಟ್ಟಿದ್ದ ಮಿಂಗ್ ಸಂತತಿಯ ಪತನ, ಮಾಂಚು, ಸಂತತಿಯ ಉತ್ಕರ್ಷ ಮತ್ತು ಕಾಲಕ್ರಮವಾಗಿ ಅವರ ಅಧಿಕಾರ ಚ್ಯುತಿ, ಬಾಕ್ಸರ್ ದಂಗೆಗಳು, ಪ್ರಜಾಪ್ರಭುತ್ವ ಸ್ಥಾಪನೆ ಮುಂತಾದ ವಿಷಯಗಳು ಈಗ ನಿಜವಾಗಿದೆ

"ಪಶ್ಚಿಮ ದೇಶಗಳಿಂದ ಸಹಾಯ ದೊರೆತು ಚೀನೀಯರು [illegible] ಜಪಾನಿಯರನ್ನು ಸೋಲಿಸುವರು ಜಪಾನಿನ ಕೀರ್ತಿಯು ಕುಗ್ಗಿ ಅದು ಬಹಳ ಹೀನಸ್ಥಿತಿಗೆ ಬರುವುದು" ಈ ಭವಿಷ್ಯವು ಸಹಾ ಆ ಗ್ರಂಥದಲ್ಲಿ ಇದೆ

ಹಣಕಾಸಿನ ಸ್ಥಿತಿ

ಮದರಾಸ್ ಸೆ [illegible]

ಬ್ಯಾಂಕುಗಳು ಲಾಭದಾಯಕವಾದ ಭದ್ರವಾದ [illegible] ಮಾರ್ಗವನ್ನು ಹುಡುಕಿ ಹಲವು ಬ್ಯಾಂಕುಗಳು [illegible] ರಿಸರ್ವ್ ಬ್ಯಾಂಕಿನ ಪ್ರಕಟಣೆಯು ತಿಳಿಸುವಂತೆ ಬ್ರಿಟಿಷ್ ಸರ್ಕಾರದಿಂದ [illegible] ಕೋಟಿ ರೂಪಾಯಿಗಳವರೆಗೆ [illegible] ಸ್ಟರ್ಲಿಂಗ್ ಸಕ್ಯೂರಿಟಿಗಳಲ್ಲಿ [illegible] ಕೋಟಿ ರೂಪಾಯಿಗಳು [illegible] ಕೋಟಿ ರೂಪಾಯಿಗಳು [illegible] ಬ್ಯಾಂಕಿಗೆ 5 ಕೋಟಿ ರೂಪಾಯಿಗಳು [illegible] 5 ಕೋಟಿ ರೂಪಾಯಿಗಳು [illegible] ಸ್ಟರ್ಲಿಂಗ್ ಭದ್ರತೆಯಲ್ಲಿ [illegible]

ಇಂಡಿಯಾದ ಪಟ್ಟಣಗಳಿಗೆ "ಬಿಲೂನ್ ಬ್ಯಾರಾಜ್"

[illegible]

ನರ್ತಕನಿಗೆ ಜುಲ್ಮಾನೆ

[illegible]

ಮೈಸರಾಯರಿಗೆ ಮೆಮೋರಿಯಲ್

ಪೇಪರ್‌ದಾರರಿಗೂ ತುಟ್ಟಿಭತ್ಯ

ಮದ್ರಾಸ್ ಸರ್ಕಾರದ ಪೇಪರ್‌ದಾರರುಗಳ ಸಂಘವು ವೈಸರಾಯರವರಿಗೂ ಮತ್ತು ಮದ್ರಾಸ್ ಗೌರ್ನರ್‌ರವರಿಗೂ ಬಿನ್ನವತ್ತಳೆಯೊಂದನ್ನು ಕಳುಹಿಸಿದೆ [illegible] ಈ ಕ್ಷಾಮ ಕಾಲದಲ್ಲಿ ಸಹ ಪೇಪರ್‌ದಾರರುಗಳಿಗೆಲ್ಲಾ ತುಟ್ಟಿ ಭತ್ಯವನ್ನು ಕೊಡಿಸಿಕೊಡಬೇಕೆಂಬುದೇ ಬಿನ್ನವತ್ತಳೆಯ ತಾತ್ಪರ್ಯ.

ಮಿಲಿಟರಿಯವರ ಸೌಜನ್ಯ

ಹರಿಜನ ಪತ್ರಿಕೆಯಲ್ಲಿ ಒಬ್ಬರು ಈ ರೀತಿ ಬರೆದಿರುತ್ತಾರೆ— ಬೊಂಬಾಯಿಯಲ್ಲಿ ಮಿಲಿಟರಿಯವರು ಜನಗಳ ಮೇಲೆ ಮತ್ತು ಹೆಂಗಸರ ಮೇಲೆ [illegible] ನಡೆಸುತ್ತಾರೆ ! ಎಂದು ಬಾಂಬೇ ಕ್ರಾನಿಕಲ್ ಪತ್ರಿಕೆಯು ತಿಳಿಸುತ್ತದೆ. ಜನಗಳು [illegible] ಮಿಲಿಟರಿಯವರು, [illegible] ಜನರು ಅವರಿಗೆ ತಲೆಬಾಗಬೇಕೆ [illegible] ಸೌಜನ್ಯ, ಮತ್ತು [illegible] ಕ್ರಮವನ್ನು [illegible] ಎಂದು ತಿಳಿಸುತ್ತಾರೆ.

ರೆಸಿಡ್ ಗಾರ್ಡ್ ಕದನ

[illegible]

ಎಲ್ಲಾ ಮುಸ್ಲಿಮರಿಗೂ ಪಾಕಿಸ್ತಾನ್ ಬೇಕಿಲ್ಲ !

[illegible]

ಬಿರುದುಗಳನ್ನು ಅಂಗೀಕರಿಸದಿರುವುದು

[illegible]

ಕಾಕೆಸಸ್ ಹೋದರೆ

[illegible]

ಬ್ರಿಟಿಷ್ ದ್ವೀಪಗಳ ಪ್ರಾಮುಖ್ಯತೆ

[illegible]

ದಸರಾ ಮಹೋತ್ಸವದ ಟೋರ್ನಮೆಂಟ್

ಬ್ಯಾಡ್‌ಮಿಂಟನ್ ಪಂದ್ಯಗಳು

[illegible]

ಸ್ಟಾಲಿನ್‌ಗ್ರಾಡ್

[illegible]

ಪ್ರಸಾದ

ಹಿಟ್ಲರ್ ಬಳ್ಳಿಯಿಂದ ಇಪ್ಪತ್ತು ಪವನ್ ಜುಲ್ಮಾನೆ

[illegible]

ಮಹಾತ್ಮರೊಡನೆ ಭೇಟಿಯೇ ?

ಡಾ॥ ರಾಜೇಂದ್ರಪ್ರಸಾದ್ ಮೊದಲಾದವರು, ಒಂದೆರಡು ದಿನಗಳಲ್ಲಿ ಕಲ್ಕತ್ತೆಗೆ ಹೋಗಿ ಮಹಾತ್ಮಾ ಗಾಂಧಿಯವರನ್ನು ಭೇಟಿ ಮಾಡಲು ಅವಕಾಶ ಮಾಡಬೇಕೆಂದು ಸೈನ್ಯಕ್ಕೆ ಪತ್ರ ಬರೆದಿದ್ದಾರೆಂದು ಯುನೈಟೆಡ್ ಪ್ರೆಸ್ ವಾರ್ತಾ ಸಂಸ್ಥೆಯು ತಿಳಿಸುತ್ತದೆ.

ಉಪವಾಸ ಮುಕ್ತಾಯ

ದೇಶಿ ನಾರ್ತ್‌ಕೋಟ್ ಅನಾಥಾಲಯದ ಒಂದುನೂರು ಇಪ್ಪತ್ತೊಂಭತ್ತು ಅನಾಥ ವಿದ್ಯಾರ್ಥಿನಿಯರುಗಳು, ತಮ್ಮ ಆಲಯದ ಸೂಪರಿಂಟೆಂಡೆಂಟರು ಸರಿಯಾದ ರೀತಿ ತಮ್ಮನ್ನು ನಿಸುತ್ತಿಲ್ಲ ನಡೆಸಿಕೊಳ್ಳುತ್ತಿಲ್ಲವೆಂದು ಉಪವಾಸ ಮುಷ್ಕರ ಹಿಡಿದಿದ್ದಾರೆಂದು ಬೊಂಬಾಯಿ ವಾರ್ತೆಯೊಂದು ತಿಳಿಸುತ್ತದೆ.

ನಾಜಿಗಳ ದೌರ್ಜನ್ಯ

ಗುಪ್ತವಾದ ರೀತಿಯಲ್ಲಿ ಹಸ್ತಪತ್ರಿಕೆಗಳನ್ನು ತಯಾರಿಸಿ ಹಂಚುತ್ತಿದ್ದ ಬಾಲಿಗೆ ಸೇರಿದ್ದರೆಂಬ ಈ ಅಪರಾಧಕ್ಕಾಗಿ ನಾಲ್ಕು ಜನರನ್ನು ಮರಣ ದಂಡನೆಗೆ ಗುರಿಮಾಡಿ ಉಳಿದ ಮೂವರಿಗೆ ಎಂಟರಿಂದ ೧೫ ವರ್ಷಗಳವರೆಗೂ ಸಜಾ ಶಿಕ್ಷೆಯನ್ನು ಜರ್ಮನ್ ನ್ಯಾಯಸ್ಥಾನವು ವಿಧಿಸಿತು. ಶಿಕ್ಷೆ ಹೊಂದಿದವರಲ್ಲಿಯೂ ಫ್ರೆಂಚ್ ಪ್ರಜೆಗಳು ಎಂದು ಗೊತ್ತಾಗಿದೆ.

" ಅನ್ನ ಸೌರಾ "

ಒಂದು ಕಣ್ಣಿಗೆ ಕಟ್ಟಿದಂತೆ ಕಂಡುಬರುವ ಚಿತ್ರವೆಂದರೆ ರಂಜಿತ್ ಟಾಕೀಸಿನಲ್ಲಿ ನಡೆಯುತ್ತಿರುವ "ಪೇಪರ್ ನಮ್ಮ ಮನೆ" ಎಂದು ಹೇಳಬಹುದು. ಚಿತ್ರ ಕಥೆಯೆಂದರೆ ಅತಿಶಯೋಕ್ತಿಯಲ್ಲ! ಇದು ನಿಜವಾದ ಪ್ರೇಮಿಗಳ ಅಂತರಾಳವನ್ನು ಬಿಚ್ಚಿ ತೋರಿಸುವ ಆಧುನಿಕ ಚಿತ್ರ! ನವೀನ ಸಮಯದ ಮಾದರಿ ಚಿತ್ರ! ಪ್ರತಿಯೊಬ್ಬ ಪ್ರೇಕ್ಷಕನ ಹೃದಯವನ್ನು ತಬ್ಬಿ ತಗ್ಗಿಸುವ ಚಿತ್ರ!

ಆ ಕಾ ಶ ವಾ ಣಿ

ಸೆಪ್ಟೆಂಬರ್ ೧೭ ನೇ ಬುಧವಾರ

೬-೦೦ ಸಮೂಹವಾದ್ಯಗಾನ ೬-೧೫ ಕರ್ನಾಟಕ ಹಾಡುಗಾರಿಕೆ ೬-೩೦ ವೇಟಿಫಾರ್ಮ್, ಕಾರ್ಯಕ್ರಮ ೬-೩೫ 'ಅಂತೆ' ಒಂದು ಕಿರುನಾಟಕ ೭-೪೫ 'ಒಲಿದಾಗ'; ಒಂದು ಸಣ್ಣ ಕಥೆ ಜನಾಬ್ 'ನೂರ್' ೭-೫೦ ವೃತ್ತಾಂತ, ವ್ಯಾಖ್ಯಾನ ೭-೧೫ ಬಿಬಿಸಿ ೭-೩೦ ಚಲನ ಚಿತ್ರಗೀತೆಗಳು, ಪಕ್ಷಿಗಳ ರೇಡಿಯೋವಿನ ಗುಟ್ಟು, ಕಲೆಗಳು ಭಾಷಣ: ಎಂ. ಆರ್. ಆರ್. ೭-೪೫ ಹಾಡುಗಾರಿಕೆ : ವಿದ್ವಾನ್ ಕೆ. ವಿ. ಅಚ್ಯುತರಾವ್ ೯-೧೫ ವೃತ್ತಾಂತ ೯-೩೦ 'ರಸೂಲ್' ೯-೫೦ ವಾಸ್ತಗೀತೆ.

ಬಾಡಿಯುವ ನೀರಿನ ಭಾವಿಗಳಿಗಾಗಿ ೩ ಲಕ್ಷ ರೂ.

ಮೈಸೂರು ಸರ್ಕಾರದವರು ಸಂಸ್ಥಾನದಲ್ಲಿ ಕುಡಿಯುವ ನೀರಿನ ಭಾವಿಗಳನ್ನು ತೆಗೆಯಲು ೩ ಲಕ್ಷ ರೂ. ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಮೈಸೂರು ಡಿಸ್ಟ್ರಿಕ್ಟಿಗೆ ೩೦೦೦೦ ಗಳನ್ನು ಕೊಡಲಾಗಿದೆ.

ಚೈನಾ ಇನ್ನೂ ಐದುವರ್ಷ ಯುದ್ಧ ಮಾಡಬಲ್ಲದು

ಚೈನಾ ದೇಶವು ಇನ್ನೂ ೫ ವರ್ಷಗಳ ಕಾಲ ಯುದ್ಧ ಮಾಡಬಹುದು ಎಂಬುದಾಗಿ ಅಲ್ಲಿನ ಯುದ್ಧ ಮಂತ್ರಿಗಳ ಆಫೀಸಿನ ವಕ್ತಾರ ಜನರಲ್ ತನ್ನ ಅಭಿಪ್ರಾಯವಾಗಿದೆ. ಈಗ ೧೫ ಲಕ್ಷ ಜನರು ಸೈನ್ಯ ಸೇವೆಗೆ ಸಿದ್ಧರಾಗಿದ್ದಾರೆ.

ಅಲಹಾಬಾದಿನಲ್ಲಿ ದಸ್ತಗಿರಿ

ಅಲಹಾಬಾದ್ ನಗರದಲ್ಲಿ ಮೊನ್ನೆ ೧೭ ಜನ ಸಿಕ್ಖರನ್ನು ನಡೆಸಲು ಪ್ರಯತ್ನಿಸಿದರೆಂದು ಮಾರಕ ಮದ್ದನ್ನು ಇಟ್ಟುಕೊಂಡಿದ್ದರೆಂದು ದಸ್ತಗಿರಿ ಮಾಡಲಾಗಿದೆ.

ಮತ್ತೆರಡು ಜಿಲ್ಲಾ ಬೋರ್ಡುಗಳ ರದ್ದು

ಚಂಗಲ್‌ಪೆಟ್—ಚಿತ್ತೂರು

ಕೆಳಗಿನ ಕಾರಣಗಳಿಗಾಗಿ ಚಿತ್ತೂರು ಜಿಲ್ಲಾ ಬೋರ್ಡ್ ಆರು ತಿಂಗಳ ಕಾಲ ರದ್ದುಪಡಿಸಲ್ಪಟ್ಟಿದೆ. ೧ ಜಿಲ್ಲಾ ಬೋರ್ಡು ಅಖಿಲ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯವನ್ನು ಉಲ್ಲಂಘಿಸಿದ್ದು. ೨ ಕಾಂಗ್ರೆಸ್ ಮುಖಂಡರನ್ನು ಬಹಿಷ್ಕಾರ ಮಾಡಿದ್ದಕ್ಕೆ ಸರ್ಕಾರದವರು ಖಂಡನೆ ಮಾಡಿದ್ದು. ೩. ಪತ್ರಿಕೆಗಳಿಗೆ ಸರ್ಕಾರಿ ಶಾಲೆಗಳನ್ನು ಮುಚ್ಚಿಸಿದ್ದು.

ಇದೇ ರೀತಿ ನಡೆದುದಕ್ಕಾಗಿ, ಚಂಗಲ್‌ಪೆಟ್ ಬೋರ್ಡ್ ರದ್ದುಪಡಿಸಲ್ಪಟ್ಟಿತು. ಎಂದು ಸರ್ಕಾರೀ ಪ್ರಕಟಣೆಯು ತಿಳಿಸುತ್ತದೆ.

ಬನುಮಯ್ಯನವರ ಹೈಸ್ಕೂಲಿನ ವಿದ್ಯಾರ್ಥಿಗಳಾದ ಶ್ರೀ॥ ಅಕ್ಕಿಗೌಡ, ವೆಂಕಟೇಗೌಡ, ರಾಮು, ಮತ್ತು ಸಂಜೀವ, ಎಂಬ ನಾಲ್ವರು ವಿದ್ಯಾರ್ಥಿಗಳನ್ನು ಈ ದಿನ ಬೆಳಗ್ಗೆ ದಸ್ತಗಿರಿ ಮಾಡಿ ಡಿಫೆನ್ಸ್‌ಗೆ ಕರೆದೊಯ್ಯಲಾಯಿತು.

೦ ೦ ೦ ೦

ಇದಲ್ಲದೆ ರಾಜಧಾನಿಯಲ್ಲಿ "ಸಾಧ್ವಿ" ಪತ್ರಿಕೆಯ ರಿಪೋರ್ಟರ್ ವಾತ್ತಾ೯ಹರಾಗಿದ್ದ ಶ್ರೀ॥ ಬಿ. ವಿ. ಸತ್ಯನಾರಾಯಣ ಎಂಬುವರನ್ನು ಈ ದಿನ ಬೆಳಗ್ಗೆ ದಸ್ತಗಿರಿ ಮಾಡಿ ಡಿಫೆನ್ಸ್‌ಗೆ ಕರೆದೊಯ್ಯಲಾಯಿತು.

ಶಾಲಾ ಮತ್ತು ಕಾಲೇಜುಗಳ ಪರಿಸ್ಥಿತಿ

ಈ ದಿನ ಮಹಾರಾಜಾ ಕಾಲೇಜಿನಲ್ಲಿ ಹಾಜರಾತಿಯ ಮೊದಲನೆ ಗಂಟೆಯಲ್ಲಿ ಬಿ. ಟಿ. ಯವರೂ ಸೇರಿ ೧೩ ಜನರಿದ್ದರು. ಎರಡನೇ ಗಂಟೆಯಲ್ಲಿ ೩೧ ಮಂದಿ ವಿದ್ಯಾರ್ಥಿಗಳು ಮಾತ್ರ ಇದ್ದರು. ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಒಟ್ಟು ೨೦ ಮಂದಿ ವಿದ್ಯಾರ್ಥಿಗಳು ಮಾತ್ರ ಹಾಜರಾಗಿದ್ದರು.

ಇತರ ಸ್ಕೂಲುಗಳಲ್ಲಿಯೂ ಹುಡುಗರ ಹಾಜರಾತಿಯು ಅಷ್ಟು ತೃಪ್ತಿಕರವಾಗಿರಲಿಲ್ಲವೆಂದು ತಿಳಿದುಬಂದಿದೆ.

೦ ೦ ೦ ೦

ನ್ಯಾಯಪರಿಷನರಾದ ಶ್ರೀ॥ ಎ. ವಿ. ರಾಮನಾಥರವರೂ ಮತ್ತು ಡೆಪ್ಯುಟಿಕಮಿಷನರವರೂ ಸಹ ಪರಿಶೀಲನಾರ್ಥವಾಗಿ ಈ ದಿನ ಬೆಳಗ್ಗೆ ಕಾಲೇಜಿಗೆ ಭೇಟಿಯಿತ್ತರು.

೦ ೦ ೦ ೦

ರಾಜಧಾನಿಯ ಎಲ್ಲಾ ಸ್ಕೂಲು ಮತ್ತು ಕಾಲೇಜುಗಳ ಬಳಿಯಲ್ಲಿಯೂ ಬಲವಾದ ಪೋಲೀಸ್ ಕಾವಲಿತ್ತು.

೦ ೦ ೦ ೦

ಈ ದಿನ ಬೆಳಗ್ಗೆ ಮಧ್ವರಾಯನ ಕೆರೆಯಲ್ಲಿ ಕೆಲವು ಬಾಲಕರು ಸೇರಿ ರಾಷ್ಟ್ರೀಯ ಧ್ವಜಾರೋಹಣ ಮತ್ತು ವಂದನೆಯನ್ನು ನಡೆಸಿದರು.

ಪೋಲೀಸರ ಸಹಾಯಕ್ಕೆ ಸ್ತ್ರೀಯರು

ರಾಜಧಾನಿಯ ಮಹಾರಾಣಿ ಕಾಲೇಜಿನ ಬಳಿ ಈ ದಿನ ಪೋಲೀಸರ ಸಹಾಯಕ್ಕಾಗಿ ನೇಮಿಸಲ್ಪಟ್ಟಿದ್ದ ನಾಲ್ಕು ಸ್ತ್ರೀಯರು ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು.

ಆಕ್ಸಿಸ್‌ನಲ್ಲಿ ಜಪಾನಿ ಜನರಲ್ಲರ ಮರಣ

ಜಪಾನಿ ರೇಡಿಯೋವು ಈ ಸೆ 21 ರಂದು ಪ್ರಕಟಿಸಿದ ಪ್ರಕಾರ [illegible] ಜನರಲ್ [illegible] ಕಾರ್ಯಾಚರಣೆಯಲ್ಲಿ ಮರಣಹೊಂದಿದರು.

ಬೆಂಗಳೂರು ಮಿಲ್ಲುಗಳಲ್ಲಿ ಲಾಕ್ ಔಟ್ ಪ್ರಕಟಣೆ

ಮಹಾರಾಜ, ಮಿನರ್ವ ಮತ್ತು ಬಿನ್ನಿ ಮಿಲ್ಲುಗಳಲ್ಲಿ ಕೆಲಸಗಾರರ ಮುಷ್ಕರವು ಶಾಂತರೀತಿಯಿಂದ ಮುಂದುವರಿಯುತ್ತಿದೆ. ಮೊನ್ನೆ ಕೆಲವು ಮಂದಿ ಕೆಲಸಗಾರರು ಕೆಲಸಕ್ಕೆ ಹೋಗಿ ಕೆಲಸಮಾಡಿ ಬಂದರೆಂದೂ ಹೇಳಲಾಗಿದೆ. ನಿನ್ನೆ ಕೆಲಸಗಾರರು ಯಾರೂ ಕೆಲಸಕ್ಕೆ ಹೋಗಲಿಲ್ಲ. ಮಿಲ್ಲುಗಳ ಮ್ಯಾನೇಜ್‌ಮೆಂಟಿನವರು ಮಿಲ್ಲನ್ನು ಲಾಕ್ ಔಟ್ ಮಾಡಿದ್ದಾರೆ.

ಮಿಲ್ಲುಗಳ ಬಾಗಿಲುಗಳಲ್ಲಿಯೂ ಮತ್ತು ಸುತ್ತಮುತ್ತಲೂ ಪೋಲೀಸರ ಬಂದೋಬಸ್ತು ಬಲವಾಗಿದ್ದು ಅವರು ಪರಿಸ್ಥಿತಿಯನ್ನು ಕಾಯುತ್ತಿರುವರು.

ಪೋಲೀಸ್ ಆಫೀಸರ ಮೇಲೆ ಕಲ್ಲು

ಮೊನ್ನೆ ದಿನ ದೊಡ್ಡಬಳ್ಳಾಪುರ ತಿಮ್ಮಾಜಪೇಟೆಯ ಹತ್ತಿರ ಜನಗಳು ಒಂದು ಸಭೆಯನ್ನು ನಡೆಸಬೇಕೆಂದಿದ್ದಾಗ ಪೋಲೀಸರು, ಗುಂಪನ್ನು ಚದುರಿಸುವುದಕ್ಕಾಗಿ ಲಾಠಿ ಪ್ರಹಾರ ನಡೆಸಿದರು, ಜನಗಳು ಪೋಲೀಸರ ಮೇಲೆ ಕಲ್ಲುಗಳನ್ನು ಎಸೆದರು, 4 ಜನ ಪೋಲೀಸ್ ಆಫೀಸರಿಗೂ ಮತ್ತು 6 ಜನ ಕಾನ್‌ಸ್ಟೇಬಲ್‌ಗಳಿಗೆ ಗಾಯವಾಗಿದೆ. ಲಾಠಿ ಪ್ರಹಾರ ನಡೆಸಿದ್ದರಿಂದ ಒಬ್ಬನಿಗೆ ಗಾಯವಾಗಿದೆ. ಕೆಲವರನ್ನು ದಸ್ತಗಿರಿ ಮಾಡಿದ್ದಾರೆ.

ಸಂಯುಕ್ತ ಪ್ರಾಂತದಲ್ಲಿ ದಂಡು ಗಂಡಾಂತರ ದಂಡ

ಅಲಹಾಬಾದ್, ಫೈಜಾಬಾದ್, ಬನಾರಸ್ ಮತ್ತು ಜಾನ್‌ಪುರ್ ಜಿಲ್ಲೆಗಳಲ್ಲಿ ಕೆಲವು ಪ್ರದೇಶಗಳಲ್ಲಿ ಜನರಿಗೆ [illegible] ರೂ ಗಳ ದಂಡವನ್ನು ವಿಧಿಸುವುದನ್ನು ಸಂಯುಕ್ತ ಪ್ರಾಂತದ ಗವರ್ನರು ವಿಧಿಸಿದ್ದಾರೆ.

ರೇಡಿಯೋ ಲೈಸೆನ್ಸ್ ರದ್ದು

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಮುಖ್ಯಾಧಿಕಾರಿಗಳು ಕಾಂಗ್ರೆಸ್ ನಾಯಕರಾದ ಟಿ. ಪ್ರಕಾಶಂ ಅವರಿಗೆ ಪತ್ರ ಬರೆದು, ಮೈಸೂರು ಸ್ಟೇಟಿನ ರೇಡಿಯೋ ಲೈಸೆನ್ಸನ್ನು [illegible] ರದ್ದುಪಡಿಸಲಾಗಿದೆ ಎಂದು ತಿಳಿಸಿದರು.

ಕೋಲಾರ್ ಪೇಟೆಯಲ್ಲಿ ಗಲಭೆ

ಕೋಲಾರ ಜಿಲ್ಲೆಯ [illegible] ಎಂಬ ಊರಿನಲ್ಲಿ ಮೊನ್ನೆ ದಿನ [illegible] ಜನರು ಮೆರವಣಿಗೆ ಹೊರಟರು, ಪೋಲೀಸರು ಅವರ ಮೇಲೆ ಲಾಠಿ, ಪ್ರಹಾರ ನಡೆಸಿ, ನಾಲ್ವರನ್ನು ದಸ್ತಗಿರಿ ಮಾಡಿದ್ದಾರೆ.

ರಷ್ಯನರು ಡಾನ್ ನದಿಯನ್ನು ದಾಟಿದರು

ಸೋವಿಯಟ್ ಸೈನ್ಯಗಳ ಡಾನ್ ನದಿಯನ್ನು ಇನ್ನೊಂದು ಕಡೆ ದಾಟಿದರೆಂಬುದಾಗಿ ಮಾಸ್ಕೋ ರೇಡಿಯೋ ಪ್ರಕಟಿಸಿ ಡಾನ್ ಪಶ್ಚಿಮ ತೀರದಲ್ಲಿ ರಷ್ಯ ಸೈನ್ಯಗಳು ಬಲವಾಗಿ ಬೇರೂರಿ ಮುನ್ನುಗ್ಗುತ್ತಿವೆ ಎಂಬುದಾಗಿಯೂ ಸಹ ಪ್ರಕಟನ ಆಗಿದೆ

ರುಮೇನಿಯಾದಿಂದ ಹೆಚ್ಚು ಸೈನ್ಯ

ಜರ್ಮನ್ ಒತ್ತಾಯಕ್ಕೆ ಒಪ್ಪಿ ಜನರಲ್ ಆಂಟೆನೆಸ್ಕೋರವರು ರೋಮೇನಿಯಾದಲ್ಲಿದ್ದ ೫ ಡಿವಿಜನ್ ಸೈನ್ಯಗಳನ್ನು ಅಲ್ಲದೆ ಬಾಕಿ ಎಲ್ಲಾ ಸೈನ್ಯಗಳನ್ನೂ ರಷ್ಯ ರಣರಂಗಕ್ಕೆ ಕಳುಹಿಸಲು ಒಪ್ಪಿದ್ದಾರೆ

ಉತ್ತರ ರಷ್ಯಾದಲ್ಲಿ ಹಿಮ

ಉತ್ತರ ರಷ್ಯಾದಲ್ಲಿ ಈಗಾಗಲೇ ಹಿಮ ಬೀಳಲು ಪ್ರಾರಂಭವಾಗಿದೆ. ಜರ್ಮನರು ಚಳಿಗಾಲದಲ್ಲಿ ರಕ್ಷಣೆಗಾಗಿ ಹೊಸ ರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸುತ್ತಿದ್ದಾರೆ

ಬರ್ಮಾದಲ್ಲಿ ಜಪಾನರ ಬಲದ ಚಲನೆಗಳು

ಬರ್ಮಾದಲ್ಲಿ ಜಪಾನರ ಸೈನ್ಯ ಚಲನವಲನಗಳ ವಿಚಾರದಲ್ಲಿ ಹೊಸ ಬದಲಾವಣೆಗಳೇನೂ ಕಂಡುಬಂದಿಲ್ಲ. ೧೫ ದಿವಸಗಳ ಹಿಂದೆ ಪಶ್ಚಿಮ ಯೂನಾನ್ ಮತ್ತು ಉತ್ತರ ಬರ್ಮಾ ಪ್ರದೇಶಗಳಲ್ಲಿ ಒಂದು ಡಿವಿಜನ್ ಸೈನ್ಯವನ್ನು ಜಪಾನರು ಸೇರಿಸಿದರು. ಸಾಲ್ವೀನ್ ನದಿಯ ಮೇಲ್ಭಾಗದ ಕಡೆಗೆ ಒಂದು ಸಣ್ಣ ಸೈನ್ಯ ದಳವು ಮುಂದುವರಿಯಿತು. ಇದಲ್ಲದೆ ಅಲ್ಲಿಂದ ಮುಂದೆ ಆ ಸೈನ್ಯವು ಹೋಗುವ ಸೂಚನೆಗಳು ಕಂಡುಬಂದಿಲ್ಲ

ನ್ಯೂಗಿನಿ ರಣರಂಗ

ನ್ಯೂಗಿನಿಯಲ್ಲಿ ಯಾವ ವಿಶೇಷ ಬದಲಾವಣೆಯೂ ಇಲ್ಲವೆಂಬುದಾಗಿ ವರದಿಯಾಗಿದೆ. ಜಪಾನರು ತಮ್ಮ ಸರಕನ್ನು ಸಾಗಿಸಲು ಜೀಪ್ ಕಾರ್ ಇತರ ಸಾಧನಗಳನ್ನು ಉಪಯೋಗಿಸುತ್ತಿದ್ದಾರೆಂದು ತಿಳಿಯಬರುತ್ತದೆ.

ಸ್ಟಾಲಿನ್‌ಗ್ರಾಡಿನಲ್ಲಿ ರಷ್ಯನರ ಪ್ರತಿಧಾಳಿ

ಸ್ಟಾಲಿನ್‌ಗ್ರಾಡ್ ರಣಕ್ಷೇತ್ರದಲ್ಲಿ ಮಾ|| ಟಿಮೊಷೆಂಕೋರವರ ಸೈನ್ಯವು ಜರ್ಮನರ ಸಾಲೊಂದು ಕಡೆದಿರುವುದೇ ಅಲ್ಲದೆ ಅನೇಕ ಪ್ರದೇಶಗಳಲ್ಲಿ ಅವರನ್ನು ಹಿಂದಕ್ಕೋಡಿಸುತ್ತಿವೆ ಒಂದು ದೊಡ್ಡ ಸೋವಿಯಟ್ ಸೈನ್ಯದಳವು ಶತ್ರುವನ್ನು ಒಂದೊಂದೆ ಸ್ಥಳದಿಂದ ಹಿಂದಕ್ಕಟ್ಟಿ ಈಗ ಜರ್ಮನರ ಮೇಲೆ ಬೀಳುತ್ತಿವೆ.

ಆಕಾಶವಾಣಿ

ಸಪ್ಟೆಂಬರ್ ೨೬ ನೇ ಶನಿವಾರ

೬-೦೦ ಸಂಜೆಯ ಗೀತೆಗಳು ೬-೧೫ ವಾದ್ಯ ಸಂಗೀತ ೬-೩೦ ವಾರ್ತೆಗಳು, ಕಾರ್ಯಕ್ರಮ ೬-೩೫ 'ಸ್ನೇಹಿತನ ಮಗು': ಒಂದು ನಾಟಕ ಚಿತ್ರ ೭-೪೫ ನಾದಸ್ವರವಾದ್ಯಗಾನ. ಆಕಾಶವಾಣಿ ಗಾನಕಲಾಮಂಡಲಿ ೭-೦೦ ವೃತ್ತಾಂತ, ವ್ಯಾಖ್ಯಾನ ೭-೧೫ ವೀಣೆ ೭-೩೦ ತಾಳವಾದ್ಯ ೭.೩೦ 'ಸಾಗರ ಸಮೀಪ' ಶ್ರೀ ಕೃಷ್ಣ ಶ್ರೀನಿವಾಸ್, ಬಿ.ಎ. ಸಂಗಡಿಗರು, ಮೈಸೂರು ೭ ೪೫ ಕಾಲಕ್ಷೇಪ 'ಭಕ್ತ ಅಂಬರೀಷ' ಬ್ರಹ್ಮಶ್ರೀ ವಿ.ಆರ್ ಶ್ರೀನಿವಾಸಯ್ಯಂಗಾರ್ ವೃತ್ತಾಂತ 'ಇಲ್ಲ' ೯.೩೦ ರಾಷ್ಟ್ರ ಗೀತೆ

ಬಿಕ್ಕಟ್ಟಿನ ಪರಿಹಾರಕ್ಕೆ ಡಾ|| ಲತೀಫರ ಸೂಚನೆ

ಹೈದರಾಬಾದಿನಲ್ಲಿ ಹೈದರಾಬಾದಿನ ಡಾ|| ಲತೀಫರವರು ಕೆಲವು ದಿನಗಳಿಂದಲೂ ಕೇಂದ್ರ ಶಾಸನ ಸಭಾ ಸದಸ್ಯರುಗಳೊಡನೆ ನಡೆಸುತ್ತಿದ್ದ ರಾಜಕೀಯ ಮಾತುಕತೆಗಳ ಫಲವಾಗಿ ಈಗ ಕೇಂದ್ರದಲ್ಲಿಯೂ ಪ್ರಾಂತಗಳಲ್ಲಿಯೂ ಜನಾನುರಾಗಿಯಾದಂತಹ ಸಂಗಾತಿ ಸರ್ಕಾರಗಳನ್ನೇರ್ಪಡಿಸಲು ಒಂದು ಸಂಚಿಕೆಯು ಒಪ್ಪಲ್ಪಟ್ಟಿದೆ

ಆ ಸೂಚನೆಗಳ ವಿವರ

೧ ವೈಸರಾಯ್ ಕೌನ್ಸಿಲು ವಿವಿಧ ಪಕ್ಷಗಳ ಸದಸ್ಯರನ್ನು ಸೇರಿಸಿಕೊಂಡಿರಬೇಕು ಆ ಕೌನ್ಸಿಲು ಬ್ರಿಟಿಷ್ ರಾಜರಿಗೆ ಜವಾಬ್ದಾರಿಯಾಗಿರುವುದಾಗಲಿ ಶಾಸನ ಸಭೆಗಳಿಗೆ ಉತ್ತರ ಕೊಡುವಂತಹದೂ ಆಗಿರಬೇಕು ಮತ್ತು ಅದು ಮಂತ್ರಿಮಂಡಲದ ರೂಪದಲ್ಲಿರಬೇಕು.

೨ ಅದರ ಸದಸ್ಯರೆಲ್ಲರೂ ಭಾರತೀಯರೇ ಆಗಿರಬೇಕು. ಆದರೆ ಕಮ್ಯಾಂಡರ್-ಇನ್-ಚೀಫ್ ಒಬ್ಬರು ಮಾತ್ರ ಭಾರತೀಯರಲ್ಲದಿರಬಹುದು. ಅವರು ವಿಶೇಷ ಸದಸ್ಯರಾಗಿ ಇಲ್ಲಬೇಕು.

೩ ಕಮ್ಯಾಂಡರ್ ಇನ್ ಚೀಫರು ಯುದ್ಧ ಕಾರ್ಯಾಚರಣೆಗಳಿಗೆ ಅಡಚಣೆಯಾದಂತಹ ರೀತಿಯಲ್ಲಿ ಭಾರತೀಯ ರಕ್ಷಣಾ ಮಂತ್ರಿಯು ವರ್ತಿಸಬೇಕು. ಆದರೆ ಉಳಿದ ಹಾಗೆಲ್ಲಾ ಈ ಮಂತ್ರಿಯು ಕೆನಡಾ ಆಸ್ಟ್ರೇಲಿಯಾಗಳ ರಕ್ಷಣಾ ಮಂತ್ರಿಗಳಂತೆ ಅಧಿಕಾರ ಹೊಂದಿರಬೇಕು

೪ ಯಾವ ಯಾವ ಪಾರ್ಟಿಗಳು ಈ ಹಂಗಾಮಿ ಸರ್ಕಾರದ ರಚನೆಯಲ್ಲಿ ಸೇರಲು ಇಷ್ಟಪಡುವುವೋ ಆ ಪಾರ್ಟಿಗಳು ತಮ್ಮ ನಾಯಕರನ್ನು ಆರಿಸಬೇಕು ವೈಸರಾಯರು ಆ ನಾಯಕರುಗಳನ್ನು ಕರೆಸಿ ಅವರವರ ಪಾರ್ಟಿಯಲ್ಲಿ ಯಾರು ಯಾರನ್ನು ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳಬೇಕೆಂಬುದನ್ನು ನೀವೇ ನಿರ್ಧರಿಸಿಕೊಳ್ಳಿ ಎಂದು ನಾಯಕರುಗಳಿಗೆ ತಿಳಿಸಬೇಕು.

೫ ಹಾಗೆ ರಚಿತವಾದ ಸರ್ಕಾರಕ್ಕೂ ವೈಸರಾಯರಿಗೂ ಏನಾದರೂ ಬಲವಾದ ಭಿನ್ನಾಭಿಪ್ರಾಯವುಂಟಾಗುವುದಾದರೆ ಆಗ್ಗೆ ಆ ಸರ್ಕಾರದ ಮಂತ್ರಿಗಳೆಲ್ಲರೂ ಒಟ್ಟಾಗಿ ರಾಜೀನಾಮೆ ಕೊಡಲು ಸಿದ್ಧರಿರಬೇಕು

ಇದೇ ರೀತಿಯಲ್ಲಿಯೇ ಪ್ರಾಂತ್ಯಗಳಲ್ಲಿಯೂ ಸರ್ಕಾರಗಳ ರಚನೆಯಾಗಬೇಕು

ರೈಲ್ವೆ ಕೆಲಸಗಾರರಿಗೆ ಡಿಯರ್‌ನೆಸ್ ಅಲೋಯನ್ಸ್

ಮೈಸೂರು ಸ್ಟೇಟ್ ರೈಲ್ವೆಯ ಕೆಲಸಗಾರರಿಗೆ ಕೊಡಲಾಗುತ್ತಿದ್ದ ಡಿಯರ್‌ನೆಸ್ ಅಲೋಯನ್ಸನ್ನು ಸೆಪ್ಟಂಬರ್ ೧ರಿಂದ ಈ ಕೆಳಕಂಡಂತೆ ಸರ್ಕಾರದವರು ಹೆಚ್ಚಿಸಿರುವರು.

ಬೆಂಗಳೂರು ಸಿಟಿ ಮಲ್ಲೇಶ್ವರಂ ಮತ್ತು ಯಶವಂತಪುರದ ಕಡೆ ರೂ ೧೫೦ ಸಂಬಳ ಮತ್ತು ಅದಕ್ಕೆ ಕಡಿಮೆ ಸಂಬಳ ಪಡೆಯುವವರಿಗೆಲ್ಲಾ ತಿಂಗಳಿಗೆ ರೂ ೬-೮-೦ ಮೈಸೂರು ಸಿಟಿ ಚಾಮರಾಜಪುರಂ ಮೈಸೂರು ನಾರ್ತ್ ಮತ್ತು ವರ್ಕ್‌ಷಾಪ್‌ಗಳಲ್ಲಿ ಕೆಲಸಮಾಡಿ ೧೫೦ ರೂ ಮತ್ತು ಅದಕ್ಕಿಂತ ಕಡಿಮೆ ಸಂಬಳ ಪಡೆಯುವವರಿಗೆ ತಿಂಗಳಿಗೆ ೬-೮-೦ ಇತರ ಪ್ರದೇಶಗಳಲ್ಲಿ ಕೆಲಸಮಾಡಿ ೧೦೦ ರೂ ಮತ್ತು ಅದಕ್ಕೆ ಕಡಿಮೆ ಸಂಬಳ ಪಡೆಯುವವರಿಗೆ ರೂ ೫

ಇದು ಜೂನ್ ೧೯೪೨ ರವರೆವಿಗೂ ಜಾರಿಯಲ್ಲಿರುತ್ತದೆ. ಇದರ ಖರ್ಚು ಸುಮಾರು ೨.೭ ಲಕ್ಷ ಆಗುವುದು.

ಗುಮಾಸ್ತೆಗಳಿಗೆ ಮಾತ್ರ ಯಾವ ರೀತಿ ಅಲೋಯನ್ಸ್ ಕೊಡಬೇಕೆಂಬುದು ಮುಂದೆ ತಿಳಿಸಲಾಗುವುದು

ಸರಕಾರಿ ಪ್ರಕಟಣೆ

ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸಿನವರು ಈ ರೀತಿ ಒಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ:—

ಸಂಸ್ಥಾನದಲ್ಲಿ ಕೆಲವು ಬೇಜವಾಬ್ದಾರಿ ಜನರು ದೌರ್ಜನ್ಯ ಕೃತ್ಯ ನಡೆಸುವುದರ ಮೂಲಕ ಸಾರ್ವಜನಿಕ ಸ್ವತ್ತುಗಳಿಗೆ ನಷ್ಟವುಂಟುಮಾಡುತ್ತಿರುವ ಕಾರ್ಯಕ್ರಮಗಳನು ನೋಡಿ ಸಂಸ್ಥಾನದ ಜವಾಬ್ದಾರಿಯುಳ ಜನರು ಬಹಳ ಕಳವಳಗೊಂಡಿದ್ದಾರೆ. ಈ ಕಾರ್ಯಕಲಾಪಗಳನ್ನು ದಮನಮಾಡುವ ಕೆಲಸದಲ್ಲಿ ಅನೇಕರು ಸರ್ಕಾರಕ್ಕೆ ಸಹಾಯಮಾಡಲು ಆಸಕ್ತರಾಗಿದ್ದಾರೆ ಈ ಆಸ್ತಿಪಾಸ್ತಿಗಳಿಗೆ ಬೇಕೆಂದೇ ನಷ್ಟಪಡಿಸುವಂತಹ ಕೃತ್ಯಗಳನ್ನು ನಿಲ್ಲಿಸುವುದಕ್ಕೆ ಯಾರ್ಯಾರು ಸಹಾಯ ಮಾಡುವವರೋ ಅವರಿಗೆಲ್ಲಾ ಬಹುಮಾನ ಕೊಡಲು ಅವಕಾಶವಾಗುವಂತೆ ಸಾರ್ವಜನಿಕ ನಿಧಿಯನ್ನು ಎತ್ತಬೇಕೆಂದು ಒಬ್ಬ ಮಹಾಶಯರು ರಚನಾತ್ಮಕ ಸಲಹೆ ಕೊಟ್ಟಿದ್ದಾರೆ. ಈ ಸಲಹೆಯ ಜೊತೆಗೆ ಅವರು ಈ ನಿಧಿಗೆ ತಮ್ಮ ವಿಪುಲ ಸಹಾಯವನ್ನು ಮಾಡಿದ್ದಾರೆ.

ಸೀಮೆಎಣ್ಣೆ ವ್ಯಾಪಾರದ ಮೇಲೆ ಹತೋಟಿ

ಸೀಮೆಎಣ್ಣೆಯ ಸರಬರಾಜು ವರ್ತಕರಿಗೆ ಮಾಮೂಲಿಗಿಂತ ಕಡಿಮೆಯಾಗಿರುವುದರಿಂದ ತಮ್ಮಲ್ಲಿ ಈಗ ಇರುವ ಸೀಮೆಎಣ್ಣೆಯನ್ನು ಮಾರಾಟಕ್ಕೆ ಇಡದೆ ಹೆಚ್ಚಿಗೆ ಲಾಭ ಸಂಪಾದಿಸುವ ಉದ್ದೇಶದಿಂದ ತಡೆದುಬಿಟ್ಟಿರುವುದರಿಂದಲೂ ಮದರಾಸ್ ಸರ್ಕಾರದವರು ಸೀಮೆಎಣ್ಣೆಯ ವ್ಯಾಪಾರವನ್ನು ಹತೋಟಿಯಲ್ಲಿಡಲು ಈ ಕೆಳಕಂಡಂತೆ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ.—

ಬರುವ ಅಕ್ಟೋಬರ್ ೧೦ ನೇ ತಾರೀಖಿನಿಂದ ಪ್ರತಿಯೊಬ್ಬ ಹೋಲ್ ಸೇಲ್ ಸೀಮೆಎಣ್ಣೆಯ ವರ್ತಕರೂ ಸಹ ಕಲೆಕ್ಟರವರಿಂದ ಲೈಸೆನ್ಸ್ ಪಡೆಯದೆ ತಮ್ಮ ವ್ಯಾಪಾರ ಮಾಡಕೂಡದು ಪ್ರತಿಯೊಬ್ಬ ಚಿಲ್ಲರೆ ವ್ಯಾಪಾರಿಯೂ ತನ್ನ ಚಿಲ್ಲರೆ ವ್ಯಾಪಾರದ ಬಗ್ಗೆ ರಿಜಿಸ್ಟರ್ ಮಾಡಿಸಿಕೊಳ್ಳಬೇಕು

ಚಿಲ್ಲರೆ ವ್ಯಾಪಾರಗಾರರಿಗೆ ಸೀಮೆ ಎಣ್ಣೆಯನ್ನು ತಮ್ಮ ಹಿಂದಿನ ವ್ಯಾಪಾರಗಳನ್ನು ನೋಡಿ ಅದಕ್ಕೆ ತಕ್ಕಂತೆ ಸಪ್ಲೈ ಮಾಡಲಾಗುತ್ತೆ. ಕೋ ಆಪರೇಟಿವ್ ಸೊಸೈಟಿ ಮುಂತಾದ ಸಂಸ್ಥೆಗಳಿಗೆ ಇನ್ನೂ ಧಾರಾಳವಾಗಿ ಕೊಡಲಾಗುತ್ತೆ.

ಸಾರ್ವಜನಿಕರಿಗೆ ಒಂದು ಬಾರಿಗೆ ಒಬ್ಬರಿಗೆ ಒಂದು ಸೀಸೆಯಂತೆ ನಿಗದಿಮಾಡಿಯೂ; ಆಸ್ಪತ್ರೆ, ಶಾಲೆಗಳು ಮುಂತಾದುವುಗಳಿಗೆ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕೊಡುವರೆಂದು ತಿಳಿದು ಬಂದಿದೆ

ಶಿವಮೊಗ್ಗ ಸುದ್ದಿಗಳು

(ಸ್ವಂತ ವರ್ತಮಾನಗಾರರಿಂದ)

ಶಿವಮೊಗ್ಗ ೩.

ರವಿನ್ಯೂ ಸಚಿವರೂ ಶಬ್ಬಿರ ಮತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷರೂ ಆದ ರಾಜಮಂತ್ರಪ್ರವೀಣ ಶ್ರೀ ಕೆ ವಿ. ಅನಂತರಾಮನ್‌ರವರು ನಿನ್ನೆಯ ದಿನ ಭದ್ರಾವತಿಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗಿತ್ತ ಭೇಟಿಯಲ್ಲಿ ಕೂಲಿಗಾರರ ಹಿತದೃಷ್ಟಿಯಿಂದ ಅವರುಗಳಿಗೆ ಸಾಧ್ಯವಾದ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸುವುದರಲ್ಲಿ ಸಿದ್ಧರಿರುವುದಾಗಿ ತಿಳಿಸಿದರು. ಕಳೆದ ತಿಂಗಳು ತಾವು ಭದ್ರಾವತಿಗೆ ಬಂದಾಗ ಈ ವಿಷಯವನ್ನು ಪರಿಶೀಲಿಸಿರುವುದಾಗಿಯೂ ಆದರೆ ೮ ದಿನವೇ ಕೂಲಿಗಳು ಮುಷ್ಕರ ಹೂಡಿದ್ದರಿಂದ ಸಾಧ್ಯವಾಗಲಿಲ್ಲವೆಂದೂ ತಿಳಿಸಿದರು. ಪುನಃ ಈ ಪ್ರಶ್ನೆಯು ಪರಿಶೀಲಿಸಲಾಗುವುದೇ ಎಂಬ ಪ್ರಶ್ನೆಗೆ ಸಾಧ್ಯವಾದ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಲಾಗುವುದೆಂದೂ ತಿಳಿಸಿದರು.

೦ ೦ ೦ ೦ ೦

ರವಿನ್ಯೂ ಸಚಿವರು ನಿನ್ನೆಯ ದಿನ ಶಿವಮೊಗ್ಗೆಗೆ ಆಗಮಿಸಿ ಇಲ್ಲಿಯ ಮ್ಯಾಚ್ ಫ್ಯಾಕ್ಟರಿಗೆ ಭೇಟಿಯಿತ್ತು ಭದ್ರಾವತಿಗೆ ಹಿಂತಿರುಗಿ ರಾತ್ರಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು

೦ ೦ ೦ ೦ ೦

ಶಿವಮೊಗ್ಗದ ಪೋಲೀಸರು ಶಿರಾಳಕೊಪ್ಪ ಪೋಲೀಸ್ ಸಬ್ ಇನ್ಸ್‌ಪೆಕ್ಟರರನ್ನು ಮತ್ತು ಪೋಲೀಸರನ್ನೂ ಯಾರೋ ಕೆಲವರು ಹೊಡೆದರೆಂದೂ ಈಗ ಪರಿಸ್ಥಿತಿ ಶಾಂತವಾಗಿದೆಯೆಂದೂ ವರ್ತಮಾನ ಬಂದಿದೆ ಅಲ್ಲಿಗೆ ವಿಶೇಷ ಸಿಬ್ಬಂದಿಯನ್ನು ಕಳುಹಿಸಲಾಗಿದೆಯೆಂದೂ ತಿಳಿದುಬಂದಿದೆ

ಸುಬ್ಬಕೃಷ್ಣಯ್ಯ ಟ್ರೋಫಿ "ಬಿ" ಡಿವಿಜನ್ ಪಂದ್ಯಗಳ ಆರಂಭ

ಈ ದಿನದಿಂದ ಸುಬ್ಬಕೃಷ್ಣಯ್ಯ ಸ್ಮಾರಕ ಫುಟ್‌ಬಾಲ್ ಪಂದ್ಯದ "ಬಿ" ಡಿವಿಜನ್ ಪಂದ್ಯಗಳು ಆರಂಭವಾಗುತ್ತವೆ. ಸುಮಾರು ಹನ್ನೊಂದು ಟೀಮುಗಳು. ಈ ಪಂದ್ಯದಲ್ಲಿ ಭಾಗವಹಿಸುತ್ತವೆ. 'ಎ' ಡಿವಿಜನ್ ಪಂದ್ಯವು ೨೭ ನೇ ತಾ|| ಭಾನುವಾರ ಗ್ಲಾಸ್ "ಎ" ಮತ್ತು ಮೈಸೂರು ಮುಸ್ಲಿಂ 'ಎ' ಟೀಮುಗಳ ಫೈನಲ್ಸ್ ಪಂದ್ಯದೊಂದಿಗೆ ಮುಕ್ತಾಯವಾಗುತ್ತದೆ.

ಈ ದಿನ ಆರ್. ಎಂ ಯೂನಿಯನ್ ಜಾಲಿಯನ್ಸ್ ಫುಟ್‌ಬಾಲ್ ಕ್ಲಬ್ಬುಗಳು ಆಡುತ್ತವೆ

Edited printed and published by A. R. Nagarajan, Sadhvi Press, D. Subbiah Road, Myso

ಸೈಟುಗಳ ಹರಾಜು

ಮೈಸೂರು ಸಿಟಿ ಇಂಪ್ರೂಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಕೆಲವು ಸೈಟುಗಳು, ಈ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಸೈಟುಗಳ ಬಳಿ ಹರಾಜು ಮಾಡಲ್ಪಡುತ್ತೆ. ಹರಾಜು ಷರತ್ತುಗಳ ವಿವರ ವಗೈರೆಗಳನ್ನು ಆಫೀಸಿನಲ್ಲಿ ತಿಳಿಯಬಹುದು

(ಸಹಿ) ಬಿ. ಎಸ್. ರಾಘವೇಂದ್ರರಾವ್

ಛೇರ್ಮನ್.

	ಸ್ಥಳ		ಹರಾಜಿನ ತಾರೀಖು ಮತ್ತು
೧	ವಾಣಿವಿಲಾಸ ಮೊಹಲ್ಲಾದಲ್ಲಿರುವ ಸೈಟುಗಳು 27 ಮತ್ತು 28 ನೇ		ಸೆಪ್ಟೆಂಬರ್ 1942 ಬೆಳಿಗ್ಗೆ 10 ಗಂ
೨	ಸೂನಂದವಾಡಿ ರೋಡ್	"	29 ನೇ ಸೆಪ್ಟೆಂಬರ್ 1942. "
೩.	ಚಾಮುಂಡಿ ಬಡಾವಣೆ	"	4 ನೇ ಅಕ್ಟೋಬರ್ 1942. "
೪	ನರಸಿಂಹರಾಜ ಮೊಹಲ್ಲಾ	"	21 ನೇ " 1942. "
೫.	ಜಲಪುರಿ ಎಕ್ಸ್‌ಟೆನ್ಷನ್	"	25 ನೇ " 1942. "

ನ್ಯಾಷನಲ್ ಎಂಪೋರಿಯಂ ಪ್ರಿಂಟೆಡ್ ಸೀರೆಗಳು

ಸಯ್ಯಾಜಿರಾವ್ ರೋಡು, ಮೈಸೂರು ನಮ್ಮಲ್ಲಿ ದೊರೆಯುತ್ತವೆ.

ಮನೆಗಳಲ್ಲಿ ಉಪಯೋಗಿಸುವುದಕ್ಕೆ

೬ ಗಜದ್ದು ರೂ. ೩—೮—೦
೭ " ರೂ. ೪—೩—೦
೮ " ರೂ. ೪-೧೦—೦

Regd. M 4343

ಚಂದಾ ದರ
ಮೈಸೂರು, ಬೆಂಗಳೂರಿಗೆ ತಿಂಗಳಿಗೆ ಎಂಟಾಣೆ.
ಹೊರಸ್ಥಳಗಳಿಗೆ ತಿಂಗಳಿಗೆ ಹತ್ತಾಣೆ.
ಪೋಸ್ಟ್ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನಪಡೆಯಿ ದರಗಳಿಗೆ ಬರೆಯಿರಿ.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನಪತ್ರಿಕೆ

SADHWI : LEADING NATIONALIST DAILY OF MYSORE.

ಪುಟ ೧] MYSORE : SATURDAY 26-9-1942 ಮೈಸೂರು : ಶನಿವಾರ ೨೬—೯—೪೨ [ಸಂಚಿಕೆ ೭೭

ದ್ವಿತೀಯ ರಣರಂಗ : ರಷ್ಯಾದವರ ಅತೃಪ್ತಿ

ಪೋಲೀಸ್ ಅತ್ಯಾಚಾರಗಳ ವಿಷಯದಲ್ಲಿ ಬಹಿರಂಗ ವಿಚಾರಣೆಯಿಲ್ಲ

ರಷ್ಯಾದವರ ಅತೃಪ್ತಿ

ವಾಷಿಂಗ್‌ಟನ್ನಿನ ಸಮಾಚಾರದ ಪ್ರಕಾರ ಶ್ರೀ ವೆಂಡೆಲ್ ವಿಲ್ಕಿಯವರು ದ್ವಿತೀಯ ಯುದ್ಧರಂಗ ಸ್ಥಾಪನೆಯ ವಿಷಯದಲ್ಲಿ ಮಿತ್ರಪಕ್ಷದವರ ಕರ್ತವ್ಯಲೋಪವೂ ಮತ್ತು ರಷ್ಯಾದ ಅತೃಪ್ತಿಯೂ ಇರುವ ವಿಷಯವಾಗಿ ಒಂದು ನಿರ್ದಾಕ್ಷಿಣ್ಯವಾದ ಹೇಳಿಕೆಯನ್ನು ಕೊಟ್ಟರು. ಇದಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಡಲಾಗುತ್ತಿದೆ. (ಆ ಹೇಳಿಕೆ ನಮ್ಮ ದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲ.

ಲಂಡನ್ನಿನ ಸಮಾಚಾರದ ಪ್ರಕಾರ ಈ ದ್ವಿತೀಯ ಯುದ್ಧರಂಗದ ವಿಷಯದಲ್ಲಿ ರಷ್ಯ-ಬ್ರಿಟನ್‌ಗಳಿಗೆ ಭಿನ್ನಾಭಿಪ್ರಾಯವು ಸ್ಟಾಲಿನ್‌ಗ್ರಾಡ್ ಯುದ್ಧವು ಬಿರುಸಾಗುತ್ತಾ ಆಗುತ್ತಾ ಹೆಚ್ಚುತ್ತಿರುವುದು ತಿಳಿದುಬಂದಿದೆ

ಈ ಸಂದರ್ಭದಲ್ಲಿ ಮಾಲಟೋವ್‌ರವರು ಲಂಡನ್ ಮತ್ತು ವಾಷಿಂಗ್‌ಟನ್ನುಗಳ ಭೇಟಿಯಾದಂತರ ಇತ್ತ ಹೇಳಿಕೆಗಳಲ್ಲಿ ಈ ವರ್ಷದಲ್ಲಿ ಈ ದ್ವಿತೀಯ ಯುದ್ಧರಂಗ ಸ್ಥಾಪನೆಯ ವಿಷಯ ಪೂರ್ಣ ಒಪ್ಪಂದವಿತ್ತೆಂದು ಹೇಳಲಾಗಿದೆ. ಇದು ಅವಶ್ಯಕವಿದ್ದಾಗ ಈ ದ್ವಿತೀಯ ಯುದ್ಧರಂಗ ಸ್ಥಾಪನೆಯ ನಿರ್ಧಾರವನ್ನು ಪ್ರಕಟಿಸಲಾಗಿಲ್ಲವೆಂದು ಹೇಳಲಾಗಿದೆ. ಇದೇ ಸಂದರ್ಭದಲ್ಲಿ ದ್ವಿತೀಯ ರಣಕ್ಷೇತ್ರವನ್ನು ಏರ್ಪಡಿಸಬೇಕಾದಲ್ಲಿ ಬಹಳ ಕಾಲ ಸಿದ್ಧ ಮಾಡಿಕೊಳ್ಳಬೇಕಾಗುವುದೆಂದೂ ಹೇಳಲಾಗಿದೆ

ರಷ್ಯದ ಪ್ರಾರ್ಥನೆ

ಮಾಸ್ಕೋ ರೇಡಿಯೋವಿನಲ್ಲಿ ರಷ್ಯಾದವರು "ಹಲವು ತಿಂಗಳಿಂದ ಜರ್ಮನಿಯವರು ಒಂಟಿಯಾಗಿ ಯುದ್ಧಮಾಡುತ್ತಿದ್ದರೂ ಅವರ ... ಸ್ಟಾಲಿನ್‌ಗ್ರಾಡಿನ ಯುದ್ಧವು ... ಮೇಲೆ ... ಮುಖ್ಯವಾದದ್ದು. ಆದ್ದರಿಂದ ಈ ಸಂದರ್ಭದಲ್ಲಿ ಪ್ರಬಲರಾಗಿ ... ಕೂಡಲೆ ಸಹಕರಿಸಬೇಕು" ಎಂದು ಪ್ರಾರ್ಥಿಸಿದ್ದಾರೆ.

ಗುಪ್ತ ಮುದ್ರಣಾಲಯದ ಪತ್ತೆ

ಬೊಂಬಾಯಿನಲ್ಲಿ ಸಿ. ಐ. ಡಿ. ಪೋಲೀಸರು ... ಮುದ್ರಣಾಲಯವೊಂದಕ್ಕೆ ನುಗ್ಗಿ ... ಕಾಂಗ್ರೆಸ್ ಬುಲೆಟಿನ್ ಪತ್ರಿಕೆಗಳು ಪ್ರಕಟವಾಗುತ್ತಿರುವುದನ್ನು ಕಂಡುಹಿಡಿದರು. ಮುದ್ರಣಾಲಯದ ... ಮಂದಿಯನ್ನು ದಸ್ತಗಿರಿ ಮಾಡಿದರು. ಮುದ್ರಣಾಲಯಕ್ಕೆ ... ಮಾಡಿದ ... ಕಾಲೇಜಿನ ಒಬ್ಬ ಪ್ರೊಫೆಸರ್ ... ಈ ಸಂಬಂಧವಾಗಿ ದಸ್ತಗಿರಿ ಮಾಡಲಾಗಿದೆ.

ಕೇಂದ್ರ ಶಾಸನ ಸಭೆ

ಬಹಿರಂಗ ವಿಚಾರಣೆಗೆ ಒತ್ತಾಯ

ಶ್ರೀ ಕೆ. ಸಿ. ನಿಯೋಗಿಯವರು "ಘಟನೆ ದುರಂತಗಳಿಗೆ ಕಾರಣವನ್ನೂ ಈ ಸಂದರ್ಭದಲ್ಲಿ ಪೋಲೀಸ್ ಮತ್ತು ಮಿಲಿಟರಿಯವರು ನಡೆಸಿದ ಅತ್ಯಾಚಾರಗಳನ್ನು ವಿಚಾರಿಸುವುದಕ್ಕಾಗಿ ಒಂದು ಬಹಿರಂಗ ವಿಚಾರಣಾ ಸಮಿತಿಯನ್ನು ಏರ್ಪಡಿಸಬೇಕು" ಎಂದು ಠರಾವನ್ನು ತಂದರು. ಇದರ ಮೇಲೆ ಸ್ವಾರಸ್ಯವಾದ ಚರ್ಚೆಗಳಾದವು.

ಚರ್ಚೆಗೆ ಉತ್ತರಕೊಡುತ್ತಾ ನ್ಯಾಯಾಂಗ ಮಂತ್ರಿಗಳಾದ ಸರ್ ಸುಲ್ತಾನ್ ಅಹಮದ್‌ರವರು ಈ ಠರಾವನ್ನು ಅಂಗೀಕರಿಸಿದರೆ ಅದರಿಂದ ಬಹಳ ಅನರ್ಥ ಪರಿಣಾಮ ಉಂಟಾಗುತ್ತದೆ. ಈ ತರಹ ಕಟ್ಟುಕಥೆಗಳು ಅನೇಕವಿವೆ. ಬಹಳ ಹಿಂಸೆಯ ಕೆಲಸಗಳನ್ನು ... ಸಹಾಯಮಾಡಿದ ಪೋಲೀಸ್ ಮತ್ತು ಮಿಲಿಟರಿಯವರಿಗೆ ಕೆಟ್ಟ ಹೆಸರು ಬರುವಂತಹ ಯಾವ ಕಾರ್ಯವನ್ನೂ ನಡೆಸುವುದಿಲ್ಲವೆಂದು ಹೇಳಿದರು.

ಇಂಡಿಯಾದ ಮೇಲೆ ಶತ್ರುಗಳು ಬಿದ್ದರೆ ಸರ್ಕಾರದ ಆಸ್ತಿಗಳ ನಾಶ

ಶತ್ರುಗಳೇನಾದರೂ ಇಂಡಿಯಾದ ಮೇಲೆ ಬೀಳುವುದಾದರೆ ಅಗ್ಗಿ ಯಾವುದಾದರೂ ಸ್ಥಳಗಳಿಂದ ಸೈನ್ಯಗಳು ವಾಪಸು ಬರಬೇಕಾದರೆ ಆ ಸ್ಥಳಗಳಲ್ಲಿ ಶತ್ರುಗಳಿಗೆ ಉಪಯೋಗಕರವಾದಂತಹ ವಸ್ತುಗಳನ್ನು ಬಿಟ್ಟುಬರುತ್ತದೆ ... ಜನಜೀವನಕ್ಕೆ ಬೇಕಾದ ವಸ್ತುಗಳಾವವನ್ನೂ ಮುಟ್ಟುವುದಿಲ್ಲ" ಎಂದು ಇಂಡಿಯಾದ ರಕ್ಷಣಾ ... ಸರ್ ... ಕೌನ್ಸಿಲ್ ಆಫ್ ಸ್ಟೇಟ್ಸಿನಲ್ಲಿ ತಿಳಿಸಿದರು.

ಗಾಂಧಿ ವೈಸರಾಯ್ ಪತ್ರವ್ಯವಹಾರ

ಮಹಾತ್ಮಾ ಗಾಂಧಿಯವರಿಗೂ ವೈಸರಾಯರಿಗೂ ನಡೆದ ಪತ್ರವ್ಯವಹಾರ ಪ್ರಕಟವಾಗಬೇಕೆಂಬುದಾಗಿ ... ಎಂದು ಹಿಂದೂಸ್ಥಾನ್ ಸ್ಟ್ಯಾಂಡರ್ಡ್ ಪತ್ರಿಕೆಯು ಬೊಂಬಾಯಿನ ಬಾತ್ಮೀದಾರರು ತಿಳಿಸಿದ್ದಾರೆ.

ಗಾಂಧೀಜಿಯವರು ವೈಸರಾಯರಿಗೆ ಕಳುಹಿಸಿದ ಪತ್ರದಲ್ಲಿ ಅತಿಕ್ರಮಣಿಗಳಾದವರನ್ನು ... ಕೇಳಿಕೊಂಡಿದ್ದಾರೆ ... ವೈಸರಾಯರನ್ನು ಒತ್ತಾಯಪಡಿಸಿದ್ದಾರೆ.

ರಾಜಧಾನಿಯ ಸುದ್ದಿಗಳು

(ನಮ್ಮ ಸ್ವಂತ ವರದಿಗಾರರಿಂದ)

ನೆನ್ನೆಯ ದಿವಸ ಸಾಯಂಕಾಲ ಸುಬ್ಬರಾಯನ ಕೆರೆಯಲ್ಲಿ ಬಹಿರಂಗ ಸಭೆ ಸೇರಿತ್ತು. ಉಪಾಧ್ಯಾಯ ವೃತ್ತಿಗೆ ರಾಜಿನಾಮೆ ಕೊಟ್ಟ ಶ್ರೀ ... ಮತ್ತು ಇನ್ನಿಬ್ಬರು ವಿದ್ಯಾರ್ಥಿಗಳು ಭಾಷಣ ಮಾಡಿ ಒಡನೆಯೇ ದಸ್ತಗಿರಿ ಮಾಡಲ್ಪಟ್ಟರು.

ನ್ಯಾಯಾಂಗಸಚಿವರು ಮತ್ತು ವಿದ್ಯಾರ್ಥಿ ಮುಖಂಡರ ಭೇಟಿ

ನೆನ್ನೆಯ ದಿವಸ ಸಾಯಂಕಾಲ ನ್ಯಾಯಾಂಗ ಸಚಿವರು ... ವಿದ್ಯಾರ್ಥಿಗಳ ಪರವಾಗಿ ಶ್ರೀ ... ಪ್ರಸಾದ್ ... ಅಬ್ದುಲ್ ಗಫಾರ್ ... ಪ್ರತ್ಯೇಕವಾಗಿ ಭೇಟಿ ನಡೆಯಿತು.

ಈ ದಿವಸ ಬೆಳಗ್ಗೆ ಸುಬ್ಬರಾಯನ ಕೆರೆಯಲ್ಲಿ ವಿದ್ಯಾರ್ಥಿಗಳು ರಾಷ್ಟ್ರೀಯ ಧ್ವಜಾರೋಹಣ ಮತ್ತು ವಂದನೆಯನ್ನು ನಡೆಯಿಸಿ ಮೆರವಣಿಗೆ ಹೊರಟರು. ಆ ಸಮಯದಲ್ಲಿ ಈ ಕೆಳಕಂಡ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದ್ದಾರೆ. ಅವರುಗಳು ಯಾರ್ಯಾರೆಂದರೆ:—ಎಂ. ಕೆ ... ಬಿ. ಕೆ. ನಾಗರಾಜರಾವ್, ... ಕೆ. ... ಕಾಲೇಜಿನ ... ಅಯ್ಯಂಗಾರ್, ... ಶ್ರೀನಿವಾಸಯ್ಯಂಗಾರ್ ಇವರೆಲ್ಲರನ್ನೂ ... ದಸ್ತಗಿರಿ ಮಾಡಲಾಗಿದೆ

ಕಾಲೇಜ್ ರೀಡಿಂಗ್ ರೂಮಿಗೆ ಬೆಂಕಿ

ಬೊಂಬಾಯಿಯಲ್ಲಿ ... ಕಾಲೇಜಿನ ರೀಡಿಂಗ್ ರೂಮಿನ ಬಾಗಿಲು ... ಕೆಲವು ಮಂದಿ ವಿದ್ಯಾರ್ಥಿಗಳು ರೀಡಿಂಗ್ ರೂಮಿಗೆ ಹೋಗಿ ... ರೀಡಿಂಗ್ ರೂಮಿನ ಒಂದು ಭಾಗದಲ್ಲಿ ಬೆಂಕಿ ಹತ್ತಿಕೊಂಡಿತು ... ತಕ್ಷಣವೇ ಬೆಂಕಿಯನ್ನು ಆರಿಸಲಾಯಿತು. ಏನೂ ಅಪಾಯವಾಗಲಿಲ್ಲವೆಂದು ಗೊತ್ತಾಗಿದೆ

ಶ್ರೀ ಆರ್ ಎಸ್ ರುಯಿಕರರ ದಸ್ತಗಿರಿ

... ಟ್ರೇಡ್ ಯೂನಿಯನ್ ... ಶ್ರೀ ... ರುಯಿಕರರನ್ನು ... ದಸ್ತಗಿರಿ ಮಾಡಲಾಯಿತು ... ಹೊರಗೆ ... ಕಳುಹಿಸಲಾಯಿತು.

ಬೊಂಬಾಯಿಯಲ್ಲಿ ಗುಂಡು

ಮೊನ್ನೆ ದಿನ ಬೊಂಬಾಯಿಯ ಶಿವಾಜಿ ಪಾರ್ಕ್, ಮತ್ತು ದಾದರ್‌ನಲ್ಲಿ ಪೋಲೀಸರು ಗುಂಡು ಹಾರಿಸಿದರು. ಸಾವು ನೋವುಗಳೇನೂ ಉಂಟಾಗಿಲ್ಲ. ಒಂದು ದೊಡ್ಡ ಗುಂಪು ಸಭೆಯನ್ನು ಏರ್ಪಡಿಸಬೇಕೆಂದು ಪ್ರಯತ್ನಿಸಿತು. ಅದರೆ ಸಾಧ್ಯವಾಗಲಿಲ್ಲ. ಗೋಖಲೆ ರಸ್ತೆ ಮತ್ತು ಪಾರ್ಕ್ ಹತ್ತಿರ ಜನಗಳು ಪೋಲೀಸ್ ಮೋಟಾರು ಬಸ್ಸಿನ ಮೇಲೆ ಕಲ್ಲುಗಳನ್ನೆಸೆದುದರಿಂದ ಪೋಲೀಸರು ಗುಂಡು ಹಾರಿಸಿ ಗುಂಪನ್ನು ಚದುರಿಸಿದರು. ಜನಗಳು ಪ್ರಯಾಣಕ್ಕೆ ತೊಂದರೆ ಮಾಡಲು ಮರಳು ... ಸಾಮಾನುಗಳ ... ರಸ್ತೆಗಳಲ್ಲಿ ಇರಿಸಿದ್ದರು.

ದಾದರ್‌ನ ಒಂದು ... ಬಳಿ ಒಂದು ಬಾಂಬು ಸಿಡಿಯಿತು. ಯಾರಿಗೂ ಅಪಾಯವಾಗಲಿಲ್ಲ. ತನಿಖೆ ನಡೆಯುತ್ತಿದೆ.

ಮುದ್ರಣಾಲಯದ ಶೋಧನೆ

ಅಹಮದಾಬಾದಿನಲ್ಲಿರುವ "ನವಭಾರತ" ಮುದ್ರಣಾಲಯವನ್ನು ಪೋಲೀಸರು ಶೋಧಿಸಿ ಸ್ಥಳೀಯ ಕಮ್ಯೂನಿಸ್ಟರಿಂದ ಪ್ರಕಟಿಸಲ್ಪಟ್ಟ "ಜಾಹಿದ್ ಜನವಾಣಿ" ಎಂಬ ಪ್ರತಿಗಳನ್ನು ವಶಪಡಿಸಿಕೊಂಡಿದ್ದಾರೆ

ರಬ್ಬರಿನಿಂದ ಪೆಟ್ರೋಲ್ ತಯಾರಿ

ಆರ್. ಎಸ್. ಇಂಡಿಯಾದ ... ಒಬ್ಬ ವಿಜ್ಞಾನಿ ರಬ್ಬರಿನಿಂದ ಪೆಟ್ರೋಲನ್ನು ತಯಾರಿಸುವ ಒಂದು ಕಾರ್ಖಾನೆಯನ್ನು ... ಎಂದು ... ಈ ಪೆಟ್ರೋಲು ... ಉಪಯೋಗಕ್ಕೆ ಯೋಗ್ಯವಾಗಿರುವುದೆಂದೂ ಆಗುವುದು

ಆಕಾಶವಾಣಿ

ಸೆಪ್ಟೆಂಬರ್ ೨೬ನೇ ಶನಿವಾರ

... ಕರ್ನಾಟಕ ... ಎಚ್. ಕೆ. ... ಆರ್. ರಂಗಸ್ವಾಮಿ ... ವಾರ್ತೆ ... ಶ್ರೀ ... ರಾಷ್ಟ್ರ ... ವಿದ್ಯಾರ್ಥಿ ...

ಪೆಟ್ಟಿಗೆಯಿಂದ ಆಸ್ಫೋಟನೆ
ಅಲಿಘರ್ ರೈಲ್ವೆಸ್ಟೇಷನ್ನಿನಲ್ಲಿ ಬಾಂಬು

ಮೊನ್ನೆ ಪ್ರಾತಃಕಾಲ ಅಲಿಘರ್ ರೈಲ್ವೆ ಸ್ಟೇಷನ್ನಿನಲ್ಲಿ ಒಂದು ಬಾಂಬು ಆಸ್ಫೋಟನವಾಗಿ ಇಬ್ಬರು ಮರಣ ಹೊಂದಿದರು ಮತ್ತು ಮತ್ತಿಬ್ಬರಿಗೆ ತೀವ್ರ ಗಾಯವುಂಟಾಯಿತು.

ಕಲ್ಕತ್ತವಿಗೆ ಹೋಗುವ ರೈಲಿನಿಂದ ಒಬ್ಬ ಪ್ರಯಾಣಿಕನು ಇಳಿದು ಬರುತ್ತಿದ್ದಾಗ ಅತನ ಕೈಯಲ್ಲಿ ಒಂದು ಪೆಟ್ಟಿಗೆಯಿದ್ದಿತು. ಆ ಪೆಟ್ಟಿಗೆಯನ್ನು ಮೊದಲನೇ ತರಗತಿಯ ಬುಕ್ಕಿಂಗ್ ಆಫೀಸ್ ಬಳಿ ಇಡಲಾಯಿತು. ಅದರೆ ಆ ಪ್ರಯಾಣಿಕನು ತಪ್ಪಿಸ್ಕೊಂಡನು.

ರೈಲು ಹೊರಟುಹೋದ ಮೇಲೆ ಇಬ್ಬರು ಪೋಲೀಸ್ ಕಾನ್ಸ್ಟೇಬಲುಗಳು ಆ ಪೆಟ್ಟಿಗೆಯನ್ನು ಮರೆತು ಬಿಟ್ಟುಹೋಗಿದ್ದಾರೆ ಎಂಬುದಾಗಿ ತಿಳಿದು ಅದನ್ನು ಲಗೇಜ್ ಆಫೀಸಿಗೆ ತೆಗೆದುಕೊಂಡು ಹೋಗಲು ಯತ್ನಿಸಿದರು. ಆಗಲೇ ಪೆಟ್ಟಿಗೆಯೊಳಗಿದ್ದ ಬಾಂಬು ಆಸ್ಫೋಟಿಸಿತು.

ಡ್ಯೂಟಿಯ ಮೇಲಿದ್ದ ಟಿಕೆಟ್ ಕಲೆಕ್ಟರು ಆ ಸಮಯದಲ್ಲಿ ಹಾಜರಿರಲಿಲ್ಲ. ಆತನನ್ನು ಈಗ ದಸ್ತಗಿರಿಮಾಡಿದೆ. ತನಿಖೆ ನಡೆಯುತ್ತಿದೆ.

ಫ್ರಾನ್ಸಿನ ಹೊಸ ಕೂಲಿಗಾರರ ಕಾನೂನು

ವಿಚಿ ಸರ್ಕಾರವು ಜಾರಿಗೆ ತಂದಿರುವ ಹೊಸ ಲೇಬರ್ ಕಾನೂನಿನ ಪ್ರಕಾರ ಯಾವ ಫ್ರೆಂಚ್ ಕೆಲಸಗಾರರೂ ಜರ್ಮನಿಗೆ ಹೋಗಿ ಕೆಲಸಮಾಡುವುದಿಲ್ಲವೋ ಅವರಿಗೆ ಬಲವಾದ ಶಿಕ್ಷೆ ವಿಧಿಸಲಾಗುವುದು ಎಂದು ವಿಚಿ ನ್ಯೂಸ್ ಏಜೆನ್ಸಿಯ ವರದಿಯು ತಿಳಿಸುತ್ತದೆ.

ಸಂಸ್ಥಾನದಲ್ಲಿ ಸಕ್ಕರೆ ಮೂಟೆಗಳ ಹಂಚಿಕೆ

ಸಕ್ಕರೆ ಕಂಟ್ರೋಲಿನ ಆರ್ಡರಿನ ಮೇರೆಗೆ ಸರ್ಕಾರದವರಿಂದ ಸಂಸ್ಥಾನದ ಪ್ರತಿ ಜಿಲ್ಲೆಗೂ ಈ ಕೆಳಗೆ ಕಂಡಂತೆ ಸಕ್ಕರೆಯ ಸರಬರಾಜನ್ನು ಕೊಡಲಾಗಿದೆ—

ಬೆಂಗಳೂರು ಸಿಟಿ ತಿಂಗಳಿಗೆ ೨೦೦೦ ಮೂಟೆ ದಂಡಿನ ಪ್ರದೇಶಕ್ಕೆ ೧೨೦೦, ಬೆಂಗಳೂರು ಜಿಲ್ಲೆ ೫೦೦, ಮೈಸೂರು ಸಿಟಿ ೧೦೦೦ ಮೈಸೂರು ಜಿಲ್ಲೆ ೫೦೦, ಮಂಡ್ಯ ೩೦೦, ಹಾಸನ ಜಿಲ್ಲೆ ೪೦೦, ಕಡೂರು ಜಿಲ್ಲೆ ೩೦೦, ಚಿತ್ರದುರ್ಗ ಜಿಲ್ಲೆ ೫೦೦, ಶಿವಮೊಗ್ಗಾ ೫೦೦, ತುಮಕೂರು ಜಿಲ್ಲೆ ೪೦೦, ಕೋಲಾರದ ಚಿನ್ನದಗಣಿ ಪ್ರದೇಶ ಮತ್ತು ಬೌರಿಂಗ್‌ಪೇಟೆ ೫೦೦, ಕೋಲಾರ ಜಿಲ್ಲೆಯ ಇತರ ಪ್ರದೇಶಗಳಿಗೆ ೩೦೦ ಒಟ್ಟು ೮೫೦೦ ಮೂಟೆಗಳು

ಬೊಂಬಾಯಿನ ಗಲಭೆಗಳಲ್ಲಿ ೯೫ ಸಾವಿರ ರೂಪಾಯಿಗಳಷ್ಟು ನಷ್ಟ

ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಬೊಂಬಾಯಿ ನಗರದಲ್ಲಿ ಗಲಾಟೆಗಳ ಫಲವಾಗಿ ಮುನಿಸಿಪಲ್ ಆಸ್ತಿಪಾಸ್ತಿಗಳಿಗೆ ೯೫ ಸಾವಿರ ರೂಪಾಯಿ ನಷ್ಟವುಂಟಾಗಿದೆ, ಈ ಅಂಶವನ್ನು ಮುನಿಸಿಪಲ್ ಕಮಿಷನರಾದ ಶ್ರೀ ಎಂ. ಡಿ. ಭಟ್‌ರವರು ಕಾರ್ಪೊರೇಷನ್ನಿನ ಸಭೆಯಲ್ಲಿ ಹೊರಪಡಿಸಿದರು. ಈ ನಷ್ಟಕ್ಕಾಗಿ ಸರಕಾರವು ಪರಿಹಾರ ಕೊಡಬೇಕೆಂದು ಕಾರ್ಪೊರೇಷನ್ನು ಕೇಳುವುದು ಯುಕ್ತವಾಗಿಲ್ಲವೆಂದೂ ಅವರು ಹೇಳಿದರು.

ಸರ್ಕಾರಿ ನೌಕರರಿಗೆ ಡಿಯರ್‌ನೆಸ್ ಅಲೋಯನ್ಸ್

ಸರ್ಕಾರಿ ನೌಕರರ ... ತಿಂಗಳಿಗೆ ರೂ. ೨೦೦ರವರೆಗೆ ಸಂಬಳ ತೆಗೆದುಕೊಳ್ಳುವವರಿಗೆ ರೂ ೫ ರಂತೆಯೂ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ರೂ. ೬೦ ರಿಂದ ೨೦೦ ರ ವರೆಗೆ ಸಂಬಳ ಪಡೆಯುವವರಿಗೆ ರೂ. ೭ ರಂತೆಯೂ ಇತರೆ ಕಡೆಗಳಲ್ಲಿ ಇರುವವರಿಗೆ ರೂ ೪-೮ ರಂತೆಯೂ ಡಿಯರ್‌ನೆಸ್ ಅಲೋಯನ್ಸ್ ಕೊಡಲು ಮಂಜೂರು ಮಾಡಿರುವುದಾಗಿ ಗೊತ್ತಾಗಿದೆ

ಬೆಂಗಳೂರು ಪೌರಸಭಾ ಉಪಾಧ್ಯಕ್ಷರು ಅಧಿಕಾರನಡೆಸಲು ಅವಕಾಶ

ಬೆಂಗಳೂರು ಪೌರಸಭೆಯ ಅಧ್ಯಕ್ಷರು ಬಂಧನದಲ್ಲಿರುವುದರಿಂದ ಪೌರಸಭೆಯ ಆಡಳಿತವನ್ನು ನೋಡಿಕೊಳ್ಳಲು ಉಪಾಧ್ಯಕ್ಷರಿಗೆ ಅಧಿಕಾರ ಕೊಡಲಾಗಿದೆ. ಈ ಬಗ್ಗೆ ವಿಶೇಷ ಕಾನೂನು ಒಂದು ಪತ್ರದಲ್ಲೇ ಜಾರಿಗೆ ಬರುವುದು.

ತೀರಪ್ರದೇಶಗಳನ್ನು ಖಾಲಿಮಾಡಿ
ಫ್ರೆಂಚ್ ಜನರಿಗೆ ಬಿ. ಬಿ. ಸಿ. ಹಿತನುಡಿ

೨೪ ನೇ ತಾ|| ರಾತ್ರಿ ಫ್ರೆಂಚ್ ತೀರ ಪ್ರದೇಶದಲ್ಲಿರುವ ನಗರಗಳಿಗೆ ಒಂದು ಹಿತನುಡಿಗಳನ್ನು ಕೊಡುತ್ತಾ— ಫ್ರೆಂಚ್ ತೀರ ಪ್ರದೇಶಗಳನ್ನು ಖಾಲಿ ಮಾಡಬೇಕೆಂದೂ ಮಿತ್ರ ಪಕ್ಷದ ಪ್ರತಿ ಧಾಳಿಯು ಸಿದ್ಧವಾಗುತ್ತಿದೆ. ಎಂಬುದಾಗಿ ಬಿ ಬಿ ಸಿ. ಸುದ್ದಿಯು ತಿಳಿಸುತ್ತದೆ.

ಬಾಂಬು ತಯಾರುಮಾಡಲು ಸಿದ್ಧತೆ

ನೆನ್ನೆ ದಿನ ಬೊಂಬಾಯಿಯಲ್ಲಿ ಒಂದು ಘಟನೆ ನಡೆಯಿತು, ಏನೆಂದರೆ ಶ್ರೀ ಬಲವಂತಸಿಂಗ್ ದ..ರ್ ಎಂಬುವರು, ಬೊಂಬಾಯಿಯಿಂದ ನಾಸಿಕ್‌ಗೆ, ರೈಲುಹತ್ತಲು ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹತ್ತುವಷ್ಟರಲ್ಲಿ, ಪೋಲೀಸರು ಅವನನ್ನು ಬಂಧಿಸಿ, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಆ ಯುವಕನು, ಬಾಂಬು ತಯಾರ ಮಾಡಲು ಕೆಲವು ಸಿದ್ಧತೆ ಉಂಟಾಗತಕ್ಕ ಸಾಮಾನುಗಳನ್ನು ಇಟ್ಟುಕೊಂಡಿದ್ದುದೇ ಕಾರಣ.

ಇಬ್ಬರು ಆರ್. ಎ ಎಫ್ ಅಧಿಕಾರಿಗಳ ಕ್ರೂರಕೊಲೆ

ಇಬ್ಬರು ರಾಯಲ್ ಏರ್ ಫೋರ್ಸ್ ಅಧಿಕಾರಿಗಳು ಸಾಮಾನ್ಯ ಅಧಿಕಾರಿಗಳಂತೆ ಒಂದು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಆಗ ಒಂದು ಉದ್ರೇಕಗೊಂಡ ಗುಂಪು ರೈಲನ್ನು ಸುತ್ತುವರಿದು ಜನಗಳು ಆ ಅಧಿಕಾರಿಗಳು ಕುಳಿತಿದ್ದ ಗಾಡಿಗೆ ಕಲ್ಲುಗಳನ್ನು ಎಸೆದರು ಗುಂಪನ್ನು ತಡೆಯುವ ಪ್ರಯತ್ನವು ನಿಷ್ಫಲವಾಯಿತು. ಕಡೆಗೆ ಅಧಿಕಾರಿಗಳು ಗಾಡಿಯನ್ನು ಬಿಟ್ಟು ಪ್ಲಾಟ್‌ಫಾರಂಗೆ ಇಳಿದು ಬಂದರು. ತಕ್ಷಣವೇ ಇಬ್ಬರ ಮೇಲೂ ಗುಂಪಿನವರು ಬಿದ್ದು ಅವರನ್ನು ಅತ್ಯಂತ ಕ್ರೂರವಾದ ರೀತಿಯಲ್ಲಿ ಸಾಯಿಸಿದರು. ಅವರ ಶರೀರಗಳನ್ನು ಗಾಡಿಯಲ್ಲಿಟ್ಟು ಊರಿನಲ್ಲಿ ಮೆರವಣಿಗೆ ಮಾಡಿ ನದಿಗೆ ಎಸೆಯಲಾಯಿತು. ಆ ನಂತರ ರೈಲನ್ನೂ ಸುಟ್ಟು ಹಾಕಲಾಯಿತು. ಈ ಘೋರ ಕೃತ್ಯವನ್ನು ಎಂತು ವರ್ಣನ ಮಾಡಬೇಕೆಂದು ತಿಳಿಯದು ಎಂದು ಸೆಂಟ್ರಲ್ ಅಸೆಂಬ್ಲಿಯಲ್ಲಿ ಸರ್ ಸುಲ್ತಾನ್ ಅಹಮದ್ ರವರು ಹೇಳಿದರು. ಈ ಇಬ್ಬರು ಏರ್ ಫೋರ್ಸ್ ಆಫೀಸರುಗಳು ಕನೆಡಿಯನ್ ಆರ್. ಎ. ಎಫ್. ದಳಕ್ಕೆ ಸೇರಿದವರು.

ಮಾರ್ಸ್ ಮೆಟ್ರೋವಿನ ಮೇಲೆ
ಆರ್. ಎ. ಯಫ್. ಬಾಂಬರುಗಳು

ಆರ್. ಎ. ಯಫ್. ವಿಮಾನದವರ ಬಾಂಬರುಗಳು ಶತ್ರುಗಳಿಗೆ ಸೇರಿದ ಮಾರ್ಸ್‌ಮೆಟ್ರೋ ಮೇಲೆ ಧಾಳಿ ನಡೆಸಿ ಬಾಂಬು ಹಾಕಿದರು. ಅಲ್ಲಿಯ ವಿಮಾನ ನಿಲ್ದಾಣದ ಮೇಲೆ ಬಾಂಬು ಬಿದ್ದು, ಭಾರಿ ಬೆಂಕಿ ಜ್ವಾಲೆಗಳೆದ್ದವು. ಈ ಬೆಂಕಿ ಜ್ವಾಲೆಯು ೫೦ ಮೈಲಿಗಳ ದೂರದವರೆಗೂ ಕಾಣುತ್ತಿತ್ತು. ಆಸ್ಟ್ರೇಲಿಯನ್ ಬಾಂಬರುಗಳು ಟಿಮೋರ್ ಮೇಲೆ, ಶತ್ರುಗಳ ಕಾರ್ಯಾಚರಣೆ ಮತ್ತು ಯುದ್ಧ ಸಾಮಗ್ರಿಗಳ ಠಾಣ್ಯದ ಮೇಲೆ ಬಾಂಬು ಹಾಕಿದವು, ಬೆಂಕಿ ಜ್ವಾಲೆಗಳು ಉತ್ಪನ್ನವಾದವು. ಕೆಲವು ಬ್ಯಾಂಬರುಗಳು, ಟಿಮೋರ್ ಮತ್ತು ಬಸ್ಟ್ ರಸ್ತೆಗಳ ಮೇಲೆ ಬಾಂಬು ಹಾಕಿದುವು. ಮಿತ್ರರಾಷ್ಟ್ರಗಳ ವಿಮಾನಗಳು ಸುರಕ್ಷಿತವಾಗಿ ಹಿಂತಿರುಗಿವೆ.

ರಾಜಪುಟಾಣದಲ್ಲಿ ಪ್ರವಾಹದ ಹಾವಳಿ

ರಾಜಪುಟಾಣದಲ್ಲಿ ಜಯಪುರ, ಜೋಧಪುರ, ಮತ್ತು ಬಿಕಾನೀರ ಸಂಸ್ಥಾನಗಳ ಕೆಲವು ಪ್ರದೇಶಗಳಲ್ಲಿ ಪ್ರವಾಹದ ಹಾವಳಿಯು ಸಂಭವಿಸಿ ರೈತರೂ ಕೆಲಸಗಾರರು ಮನೆಮಠಗಳನ್ನು ಕಳೆದುಕೊಂಡಿದ್ದಾರೆ. ಜಾನುವಾರುಗಳು ಸಾವಿರಗಟ್ಟಲೆ ನಾಶವಾಗಿದೆ. ಮಲೇರಿಯಾ ಜ್ವರವು ಹೆಚ್ಚಾಗಿ ಹರಡಿದೆ. ಒಟ್ಟು ೩ ಸಾವಿರ ಗ್ರಾಮಗಳಲ್ಲಿ ಈ ರೀತಿ ಭಯಂಕರ ಪರಿಸ್ಥಿತಿಯುಂಟಾಗಿದೆ. ಒಟ್ಟು ಒಂದು ಕೋಟಿ ರೂಪಾಯಿಗಳ ನಷ್ಟವುಂಟಾಗಿದೆ ಎಂಬುದಾಗಿ ಆರ್ಯ ಧರ್ಮ ಸಂಘದ ಕಾರ್ಯನಿರ್ವಾಹಕ ಮಂಡಲಿ ಸದಸ್ಯರಾದ ಶ್ರೀ ಸಿ ಎಲ್ ಪಟೇಲರು ಹೇಳಿಕೆ ಹೊರಡಿಸಿದ್ದಾರೆ.

ಜಪಾನರನ್ನು ಕೊಲೆಮಾಡಲು ಪಿತೂರಿ

ಮಲಯಾದಲ್ಲಿ ಮುಖ್ಯಸ್ಥರಂತಹ ಜಪಾನೀಯರನ್ನು ಕೊಲೆಮಾಡಲು ಪಿತೂರಿ ಇದ್ದಿತೆಂಬುದಾಗಿಯೂ ಅದನ್ನು ಪತ್ತೆ ಹಚ್ಚಿ ಅನೇಕ ಪಿತೂರಿಗಾರರನ್ನು ಮರಣದಂಡನೆಗೆ ಗುರಿಮಾಡಿದ್ದಾರೆಂದೂ ಇನ್ನು ಕೆಲವರಿಗೆ ದೀರ್ಘಕಾಲದವರೆಗೆ ಕಾರಾಗೃಹ ಶಿಕ್ಷೆಯನ್ನು ವಿಧಿಸಿರುವುದಾಗಿಯೂ ಟೋಕಿಯೋ ರೇಡಿಯೋ ಪ್ರಕಟಣೆಯು ತಿಳಿಸುತ್ತದೆ.

ಅಹಮದಾಬಾದಿನಲ್ಲಿ ಕಮ್ಯೂನಿಸ್ಟರ ಮನವಿ

ಪಂಡಿತ ಜವಾಹರಲಾಲ್‌ನೆಹರೂ ಮತ್ತು ಮಹಮ್ಮದಾಲಿ ಜಿನ್ನಾರವರಿಂದೊಡಗೂಡಿದ ರಾಷ್ಟ್ರೀಯ ಸರ್ಕಾರವನ್ನು ರಚಿಸುವ ತತ್ಪೂರ್ವದಲ್ಲಿ ಕಾಂಗ್ರೆಸ್ಸಿಗೂ ಮತ್ತು ಮುಸ್ಲಿಂ ಲೀಗಿಗೂ ಒಂದು ಸಂಬಂಧವನ್ನು ಕಲ್ಪಿಸಲು ಅಹಮದಾಬಾದಿನ ಸ್ಥಳೀಯ ಕಮ್ಯುನಿಸ್ಟ್ ಪಾರ್ಟಿಯವರು ಸುಮಾರು ೫೦೦ ಮಂದಿ ಸಹಿಯುಳ್ಳ ಒಂದು ಮೆಮೊರಾಂಡಂನ್ನು ತಯಾರಿಸಿದರು. ಆ ಮೆಮೊರಾಂಡಂನ್ನು ಕಾಂಗ್ರೆಸ್ಸಿಗೂ ಮತ್ತು ಮುಸ್ಲಿಂ ಲೀಗಿಗೂ ಸಂಬಂಧವನ್ನು ಕಲ್ಪಿಸಲಿರುವ ಆವಶ್ಯಕತೆಯನ್ನು ಸೂಚಿಸಿ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೂ ಮತ್ತು ಮಹಮ್ಮದಾಲಿ ಜಿನ್ನಾರವರಿಗೂ ಒಪ್ಪಿಸಲಾಗಿದೆ.

ರಾಷ್ಟ್ರೀಯ ಸರ್ಕಾರವನ್ನು ರಚಿಸಬೇಕೆಂದೂ ಮತ್ತು ರಾಷ್ಟ್ರೀಯ ಮುಖಂಡರುಗಳನ್ನು ಬಿಡುಗಡೆ ಮಾಡಬೇಕೆಂದೂ ಪ್ರಾರ್ಥಿಸಿ ಸರ್ಕಾರಕ್ಕೆ ಒಂದು ಮೆಮೊರಾಂಡಂನ್ನು ಒಪ್ಪಿಸಲು ಕೇಂದ್ರ ಜಿಲ್ಲೆಯಲ್ಲಿ ಸುಮಾರು ೬೦೦ ಗ್ರಾಮಗಳಿಂದ ೧ ಲಕ್ಷಕ್ಕಿಂತ ಹೆಚ್ಚು ಮಂದಿಯಿಂದ ಸಹಿಯನ್ನು ತೆಗೆದುಕೊಳ್ಳಲಾಗುತ್ತಿದೆ

Edited printed and published by A. R. Nagarajan. Sadhvi Press, D. Subbiah Road, Mysore.

ಶಿವಮೊಗ್ಗ ಸುದ್ದಿಗಳು
(ಸ್ವಂತ ವರ|| ಸುದ್ದಿಗಾರರಿಂದ)

ಶಿವಮೊಗ್ಗಾ ಸೆ. ೨೩

ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಕೆಲಸಗಾರರಲ್ಲೊಬ್ಬರಾಗಿದ್ದು ಕೆಲಸದಿಂದ ವಜಾಮಾಡಲ್ಪಟ್ಟ ಶ್ರೀ ತಿರುಮಲರಾವ್ (ಲೇಬರ್ ಸಂಘದ ಹಂಗಾಮಿ ಅಧ್ಯಕ್ಷರು) ಎಂಬುವರು ಈ ಜಿಲ್ಲೆಯ ಸರಹದ್ದಿನೊಳಗೆ ಪ್ರವೇಶಿಸದಂತೆ, ಜಿಲ್ಲಾ ಮ್ಯಾಜಿಸ್ಟ್ರೇಟರವರು ಭಾರತ ರಕ್ಷಣಾ ಶಾಸನದ ಪ್ರಕಾರ ಪ್ರತಿಬಂಧಿಸಿದ್ದಾರೆ. ಅವರನ್ನು ನಿನ್ನೆಯ ದಿನ ರಾತ್ರಿ ಈ ಜಿಲ್ಲೆಯಿಂದ ಹೊರಗಡೆ ಕರೆದುಕೊಂಡು ಹೋಗಿ ಬಿಡಲಾಯಿತು

೦ ೦ ೦ ೦

ಕಬ್ಬಿಣದ ಕಾರ್ಖಾನೆಯ ಕೆಲಸಗಾರರ ಪೈಕಿ ನಲವತ್ತೆಂಟು ಜನರನ್ನು ಕೆಲಸದಿಂದ ವಜಾಮಾಡಲಾಗಿದೆ. ಈ ಹಿಂದೆ ೪೮ ಜನ ಕೆಲಸಗಾರರನ್ನು ವಜಾಮಾಡಲಾಗಿತ್ತು. ಈ ವರೆಗೆ ವಜಾಮಾಡಲ್ಪಟ್ಟವರ ಒಟ್ಟು ಸಂಖ್ಯೆ ೯೬.

೦ ೦ ೦ ೦

ಈ ವರೆವಿಗೆ ಕಾಗದದ ಕಾರ್ಖಾನೆಯಲ್ಲಿ ೭ ಜನ ಕೆಲಸಗಾರರನ್ನು ವಜಾಮಾಡಲಾಗಿತ್ತು ಆ ಪೈಕಿ ೩ ಜನ ಕೆಲಸಗಾರರು ತಮ್ಮ ಗೈರುಹಾಜರಿಗೆ ಕಾರಣವನ್ನು ತಿಳಿಸಿದ್ದರಿಂದ ಅವರ ಅಪವಾದಗಳನ್ನು ಮನ್ನಿಸಿ, ಅವರುಗಳನ್ನು ಕೆಲಸದ ಮೇಲೆ ತೆಗೆದುಕೊಳ್ಳಲಾಯಿತು.

೦ ೦ ೦ ೦

ಶಿವಮೊಗ್ಗಾ ಕೋ ಆಪರೇಟಿವ್ ಬ್ಯಾಂಕಿ ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಸಭೆಯು ನಿನ್ನೆಯ ದಿನ ನಡೆದು ಶ್ರೀ|| ಪೆಚ್ ನರಸಿಂಹಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ವಿ. ಜನತಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ ಶ್ರೀನಿವಾಸಯ್ಯಂಗಾರ್‌ರವರು ಕಾರ್ಯದರ್ಶಿಗಳಾಗಿಯೂ, ಶ್ರೀ ಎನ್. ಶಾಮರಾವ್‌ರವರು ಸಹಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು.

೦ ೦ ೦ ೦ ೦

ಭದ್ರಾವತಿಯಲ್ಲಿ ಭಾರತ ರಕ್ಷಣಾ ಶಾಸನದ ಪ್ರಕಾರ ನಿರ್ಬಂಧಿಸಿ ಮಾಡಲ್ಪಟ್ಟ ಕಾರ್ಖಾನೆಯ ಕೆಲಸಗಾರರ ಕುಟುಂಬದವರಿಗೆ, ಅವರು ತಮ್ಮ ತಮ್ಮ ಸ್ಥಳಗಳಿಗೆ ಹೋಗಲು ಎಲ್ಲ ಅನುಕೂಲಗಳನ್ನೂ ಕಾರ್ಖಾನೆಯವರು ಕಲ್ಪಿಸಿರುತ್ತಾರೆ.

೦ ೦ ೦ ೦

ಶಿವಮೊಗ್ಗಾ-ಶಿಕಾರಿಪುರದ ರಸ್ತೆಯಲ್ಲಿ ಹಾರೆಗೊಪ್ಪದ ಸಮೀಪದಲ್ಲಿ ಒಂದು ಕಲ್ವರ್ಟನ್ನು ಯಾರೋ ಒಡೆದಿರುವರೆಂದೂ ಇದರಿಂದ ವಾಹನ ಸಂಚಾರಕ್ಕೆ ಸ್ವಲ್ಪ ತೊಂದರೆಯಾಗಿದೆಯೆಂದೂ ವರ್ತಮಾನ ಬಂದಿದೆ. ಈ ವಿಷಯದ ತನಿಖೆಯು ನಡೆಯುತ್ತಿದೆ ಎಂದು ಗೊತ್ತಾಗಿದೆ.

ಸಾಮಾನುಗಳ ಲೂಟಿ

ಕಳೆದ ಸೋಮವಾರ ೫೦ ಜನ ದರೋಡೆಕಾರರು ಗೊಂಡಾಲ್ ಸ್ಟೇಟಿನ ವಡೋದರ ಎಂಬ ಹಳ್ಳಿಯಲ್ಲಿ ಅಂಗಡಿಗಳಿಗೆ ನುಗ್ಗಿ ಸುಮಾರು 50,00 ರೂ ಬೆಲೆಬಾಳತಕ್ಕ ಸಾಮಾನುಗಳನ್ನು ಲೂಟಿ ಮಾಡಿ, ಅಲ್ಲಿನ ಪೋಲೀಸ್ ಸ್ಟೇಷನ್ನಿಗೆ ಬೆಂಕಿ ಹಾಕಿ ಸಾಮಾನುಗಳನ್ನು ಕದ್ದೊಯ್ದರೆಂದು ತಿಳಿದು ಬಂದಿದೆ.

ಸೈಟುಗಳ ಹರಾಜು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಕೆಳಕಂಡ ಸೈಟುಗಳು ಈ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಸೈಟುಗಳ ಬಳಿ ಹರಾಜು ಮಾಡಲ್ಪಡುತ್ತೆ. ಹರಾಜು ಷರತ್ತು ಸೈಟುಗಳ ವಿವರ ವಗೈರೆಗಳನ್ನು ಆಫೀಸಿನಲ್ಲಿ ನೋಡಬಹುದು.

(ಸಹಿ) ಬಿ. ಎಸ್. ರಾಘವೇಂದ್ರರಾವ್

ಛೇರ್ಮನ್.

	ಸ್ಥಳ	ಹರಾಜಿನ ತಾರೀಖು ಮತ್ತು ಕಾಲ	
೧.	ರಾಣಿವಿಲಾಸ ಮೊಹಲ್ಲಾದಲ್ಲಿರುವ ಸೈಟುಗಳು	27 ಮತ್ತು 28 ನೇ ಸೆಪ್ಟೆಂಬರ್ 1912	ಬೆಳಗ್ಗೆ 10 ಗಂಟೆ
೨	ಮಾದಂಪಡಿ ರೋಡ್ ,,	29 ನೇ ಸೆಪ್ಟೆಂಬರ್ 1912	,,
೩.	ಚಾಮುಂಡಿ ಬಡಾವಣೆ ,,	4 ನೇ ಅಕ್ಟೋಬರ್ 1912.	,,
೪.	ನರಸಿಂಹರಾಜ ಮೊಹಲ್ಲಾ ,,	21 ನೇ ,, 1912	,,
೫	ಜಲಪುರಿ ಎಕ್ಸ್‌ಟೆನ್‌ಷನ್ ,,	25 ನೇ ,, 1912.	,,

Regd. M 4342.

ಚಂದಾದರ
ಮೈಸೂರು, ಬೆಂಗಳೂರಿಗೆ
ತಿಂಗಳಿಗೆ ಎಂಟಾಣೆ.
ಪರಸ್ಥಳಗಳಿಗೆ
ತಿಂಗಳಿಗೆ ಹತ್ತಾಣೆ.
ಪೋಸ್ಟು ಮೂಲಕ
ತಿಂಗಳಿಗೆ ಒಂದು ರೂ.

ಸಾಧ್ವಿ

ಬಿಡಿ ಪ್ರತಿಕೆ 3 ಕಾಸು

ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನವನ್ನು ಪಡೆಯಿರಿ. ವರಗಳಿಗೆ ಬರೆಯಿರಿ.

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

SADHWI : LEADING NATIONALIST DAILY OF MYSORE.

ಸಂಪುಟ ೧] MYSORE : SUNDAY 27-9-1942 ಮೈಸೂರು : ಭಾನುವಾರ ೨೭—೯—೪೨ [ಸಂಚಿಕೆ ೭೮

"ಯುದ್ಧದಲ್ಲಿ ನಾವು ಇನ್ನೂ ಸೋಲುತ್ತಲೇ ಇದ್ದೇವೆ"

ಬೊಂಬಾಯಿ ಅಹಮದಾಬಾದುಗಳಲ್ಲಿ ಪುನಃ ಬಾಂಬು

ಮಿ॥ ರಾಲ್ಫ್ ಬಾರ್ಡ್‌ರ ಹೇಳಿಕೆ

ಅಮೆರಿಕದ ನೌಕಾಖಾತೆಯ ಉಪ ಕಾರ್ಯದರ್ಶಿಗಳಾದ ಮಿ॥ ರಾಲ್ಫ್ ಬಾರ್ಡರು "ನಾವು ಯುದ್ಧದಲ್ಲಿ ಇನ್ನೂ ಸೋಲುತ್ತಲೇ ಇದ್ದೇವೆ. ಜಪಾನೀಯರಿಂದ ನಮ್ಮ ಸರ್ವಸ್ವವನ್ನೂ ಒತ್ತೆ ಇಡಬೇಕಾಗಿದೆ. ನಾವು ಯುದ್ಧದಲ್ಲಿ ಸೋಲುವುದಿಲ್ಲವೆಂದು ಹೇಳಿಕೊಂಡು ತಿರುಗುತ್ತೇವೆ. ಇದು ಒಂದು ಬರಿಯ ಮಾತೆಂದು ನಮಗೆ ಮನವರಿಕೆಯಾಗಿದೆ. ಆದರೆ ಬಹಳ ನಾವು ಇನ್ನೂ ಸೋಲುತ್ತಲೇ ಇದ್ದೇವೆ ಎಂಬುದನ್ನು ಮನಃಪೂರ್ತಿಯಾಗಿ ತಿಳಿದು ಅದನ್ನು ತಪ್ಪಿಸಲು ಯತ್ನಿಸಬೇಕು" ಎಂದು ನೌಕಾ ಕೆಲಸಗಾರರ ಸಭೆಯೊಂದರಲ್ಲಿ ತಿಳಿಸಿದರು.

—

ಅಹಮದಾಬಾದಿನಲ್ಲಿ ಬಾಂಬು ಸಿಡಿತ

ಅಹಮದಾಬಾದ್ ನಗರದಲ್ಲಿ ನಾಲ್ಕು ಕಡೆಗೂ ಬಾಂಬುಗಳ ಆಸ್ಫೋಟನೆಗಳುಂಟಾದವು. [illegible]ಪುರದ ಪ್ರದೇಶಗಳಲ್ಲಿ ಒಂದು ಬಾಂಬು ಸ್ಫೋಟಿಸಿತು. ಅಲ್ಲಿ ಕೆಲವರಿಗೆ ಗಾಯಗಳುಂಟಾದವು.

[illegible] ಪ್ರದೇಶದಲ್ಲಿ ಒಬ್ಬ ಬಾಂಬನ್ನು ಹಿಡಿದುಕೊಂಡು ಹೋಗುತ್ತಿದ್ದಾಗ ಅದು ಸಿಡಿಯಿತು. ಅವನಿಗೆ ತೀವ್ರ ಗಾಯವಾಗಿದೆ.

[illegible]ಪುರದ ಪೋಲೀಸ್ ಚೌಕಿಯ ಬಳಿ ಒಂದು ಬಾಂಬು ಸಿಡಿಯಿತು. ಅಲ್ಲಿ ಗೋಡೆಯು ಕುಸಿದಿದೆ. ಆದರೆ ಯಾರಿಗೂ ಏನೂ ಗಾಯವಾಗಿಲ್ಲ.

—

ರೆಸಿಡೆನ್ಸಿಗೆ ಮುತ್ತಿಗೆ

[illegible] ನಗರದ ಜನರು ರೆಸಿಡೆನ್ಸಿಯನ್ನು ಮುತ್ತಿ ಅದನ್ನು ವಶಪಡಿಸಿಕೊಳ್ಳಲು ಜನರ ಗುಂಪೊಂದು ಹೊರಟಿತು. ಆಗ ಪೋಲೀಸರು ಲಾಠಿ ಪ್ರಹಾರದಿಂದ ಚದುರಿಸಿದರು ಮತ್ತು ಇದೇ ಸಂದರ್ಭದಲ್ಲಿ ಜನರನ್ನು ದಸ್ತಗಿರಿ ಮಾಡಿದರು.

ಪೋಲೀಸರು [illegible] ಗಲ್ಲಿಗಳಲ್ಲೆಲ್ಲಾ ನಿಂತಿದ್ದರು. ಜನರನ್ನು ಚದುರಿಸಲು ಮುಂಭಾಗದಲ್ಲೇ [illegible].

—

ಪಟೇಲರುಗಳ ರಾಜೀನಾಮೆ

[illegible] ತಾಲ್ಲೂಕಿನ ಹಳ್ಳಿಗಳ ಪಟೇಲರು ತಮ್ಮ ನೌಕರಿಗೆ ರಾಜೀನಾಮೆ ಕೊಟ್ಟಿರುವುದಾಗಿ [illegible] ಪ್ರೆಸ್ ವಾರ್ತಾ ಸಂಸ್ಥೆ ತಿಳಿಸುತ್ತದೆ.

ನ್ಯೂಗಿನಿಯಲ್ಲಿ ಹೋರಾಟ

ನ್ಯೂಗಿನಿಯ ಉತ್ತರ ಭಾಗದಲ್ಲಿರುವ ಮಿತ್ರ ಸೇನೆಗಳು ಜಪಾನೀಯರ ಮೇಲೆ ಧಾಳಿ ನಡೆಸುತ್ತಿವೆ. ನಗರದ ಸುತ್ತಮುತ್ತಲಲ್ಲಿ ಮಿತ್ರ ಸೇನೆಗಳು ಸ್ಥಳ ಬಿಟ್ಟು ಹಿಮ್ಮೆಟ್ಟಿದವು. ಆದರೆ ಕೊಕೊಡ ಪ್ರದೇಶದ ಮೇಲೆ ಪ್ರತಿಧಾಳಿ ನಡೆಸಿ ಮುಖ್ಯವಾದ ಸ್ಥಳವನ್ನು ಮಿತ್ರ ಸೇನೆಗಳು ವಶಪಡಿಸಿಕೊಂಡವೆಂದು ಜ॥ ಮೆಕ್‌ಆರ್ಥರ್ ಕೇಂದ್ರ ಕಚೇರಿ ಪ್ರಕಟಣೆ ತಿಳಿಸಿದೆ.

—

ಮೆರವಣಿಗೆಗೆ ಪ್ರತಿಬಂಧಕ

ಮಹಾಲಯದಿಂದ ನವರಾತ್ರಿ ನಡೆಯುವಂತೆ ಪೂನಾದಲ್ಲಿ ಈ ವರ್ಷ ಸಾರ್ವಜನಿಕ ಗಣಪತಿ ಮೆರವಣಿಗೆ ಉತ್ಸವಗಳು ನಡೆಯುವುದಿಲ್ಲ. ನಗರದ ಮುಖ್ಯ ಬೀದಿಗಳಲ್ಲಿ ಈ ವರ್ಷ ಮೆರವಣಿಗೆ ನಡೆಯಕೂಡದೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿರುವುದರಿಂದ ಈ ಆಜ್ಞೆ ಬಗ್ಗೆ ಅಸಮಾಧಾನವನ್ನು ಸೂಚಿಸಲು ಪೂನಾದಲ್ಲಿ ಈ ವರ್ಷ ಮೆರವಣಿಗೆಗಳಲ್ಲವೆಂದು ನಿರ್ಧರಿಸಲಾಗಿದೆ. ಆದ್ದರಿಂದ ಈ ದಿನ ಮೆರವಣಿಗೆಗಳಾವುದೂ ನಡೆಯಲಿಲ್ಲ.

ಕಳೆದ ೫೦ ವರ್ಷಗಳಿಂದ ಪೂನಾದಲ್ಲಿ ಇಂತಹ ಪರಿಸ್ಥಿತಿ ಬಂದಿರಲಿಲ್ಲ. ಅನೇಕ ಜನರು ಮನೆಗಳಲ್ಲಿಯೇ ಗಣಪತಿಗಳನ್ನು ಮುಳುಗಿಸಿದರು. ಗಲಭೆಯಾಗದಂತೆ ಪೋಲೀಸರು ನೋಡಿಕೊಂಡರು.

ಟೆಲಿಫೋನ್‌ಗಳ ನಾಶ

ಅವಶ್ಯಕವಾದ ಸಾರ್ವಜನಿಕ ಉಪಯೋಗಕ್ಕಾಗಿ ಟೆಲಿಫೋನ್ ಬೇಕಾಗಿರುವುದರಿಂದ ಬೆಂಗಳೂರು ನಗರದ ಹೋಟೆಲುಗಳಲ್ಲಿರುವ ಟೆಲಿಫೋನುಗಳನ್ನು ಎ ಆರ್ ಪಿ ಕಚೇರಿಯವರು [illegible] ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿರುವರು.

ನೆನ್ನೆ ರಾತ್ರಿ ಬೀದಿ ದೀಪಗಳ ಹತ್ತಿರ ಮತ್ತು ಜನರ ನಾಲ್ಕು ಬ್ರಾಂಚುಗಳಲ್ಲಿದ್ದ ಟೆಲಿಫೋನುಗಳನ್ನು ಡಿಫೆನ್ಸ್ ಆಫ್ ಇಂಡಿಯಾ ಕಾನೂನು [illegible] ಪ್ರಕಾರ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನವರು ತಮ್ಮ ವಶಕ್ಕೆ ತೆಗೆದುಕೊಂಡು ಹೋದರು.

—

ರೊಮ್ಮೆಲ್ಲರು ವಾಪಸ್

ಆಫ್ರಿಕದಲ್ಲಿ ಜರ್ಮನ್ ಸೇನೆಗಳ ಪ್ರಧಾನ ಸೇನಾನಾಯಕರಾದ ಜ॥ ರೊಮ್ಮೆಲ್ಲರು ಜರ್ಮನಿಗೆ ವಾಪಸ್ ಹೋಗಿರುವರೆಂದೂ, ಲೆಫ್ಟಿನೆಂಟ್ ಜ॥ ಸ್ಟೂಮ್ ಅವರು ಜರ್ಮನ್ ಸೇನೆಗಳ [illegible] ಅಧಿಕಾರವನ್ನು ವಹಿಸಿಕೊಳ್ಳಲು ಹೋದರೆಂದೂ ಬಾಹುಲಿಯ ನೆರವಿಂದ ಜರ್ಮನಿಗೆ ವಾಪಸ್ ಹೋಗಿರುವರೆಂದೂ ತಿಳಿದುಬಂದಿದೆ.

ರಾಜಧಾನಿಯ ಸುದ್ದಿಗಳು

(ಸ್ವಂತ ವಾ॥ ಸುದ್ದಿಗಾರರಿಂದ)

ಚಾಮರಾಜ ಹೋಟೆಲ್ಲಿನ ವಿದ್ಯಾರ್ಥಿಗಳು ಈ ದಿನ ಬೆಳಗ್ಗೆ ೧೧-೩೦ ಘಂಟೆಯ ಸಮಯದಲ್ಲಿ ಕಾಂತರಾಜ ರೋಡಿನಲ್ಲಿರುವ ಬಯಲು ಪ್ರದೇಶದಲ್ಲಿ ಸಭೆ ಸೇರಿದ್ದರು. ಶಾಲಾ ಕಾಲೇಜುಗಳಿಗೆ ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ತೀರ್ಮಾನಿಸಿದರು. ಸಭೆಗೆ ಸುಮಾರು ೧೫೦ ರವರೆಗೂ ವಿದ್ಯಾರ್ಥಿಗಳು ಬಂದಿದ್ದರು. ಸಭೆ ಮುಗಿದ ನಂತರ ಈ ಕೆಳಕಂಡ ವಿದ್ಯಾರ್ಥಿಗಳು ದಸ್ತಗಿರಿ ಮಾಡಲ್ಪಟ್ಟರು — ಶ್ರೀಗಳಾದ ಎಸ್. ಪಿ. ಕೃಷ್ಣಮೂರ್ತಿ, ಆರ್. ವೆಂಕಟರಾಮಯ್ಯ, ಆರ್. ಕೃಷ್ಣಮೂರ್ತಿ, ಸಿ. ಜಿ. ಶ್ರೀನಿವಾಸಮೂರ್ತಿ, ಸಿ. ಎಲ್. ಶ್ರೀಕಂಠಶಾಸ್ತ್ರಿ.

o o o o

ಹೊಟ್ಟೆನೋವಿಗೆ ವಜ್ರ ನುಂಗಿದನು!

ನಮ್ಮ ಸಾಹಿದನಲ್ಲಿರುವ ವಿನಾಯಕ ಸುಂದರಂ ಎಂಬುವನು ಹೊಟ್ಟೆನೋವನ್ನು ತಾಳಲಾರದೆ ವಜ್ರದ ಚೂರೊಂದನ್ನು ನುಂಗಿದನಂತೆ. ಅದರ ಫಲವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವ ನೆಂದೂ ತಿಳಿದು ಬಂದಿದೆ.

—

ಕಲ್ಕತ್ತಾ ಪುರಭವನದಲ್ಲಿ ಮಹಿಳೆಯರ ಸಭೆ!

ನೆನ್ನೆ ಕಲ್ಕತ್ತಾ ಕಾರ್ಪೊರೇಷನ್ನಿನ ಸಭೆಯು ಸೇರುವುದಕ್ಕಿಂತ ಮುಂಚೆ ಕೆಲವು ಮಂದಿ ಹೆಂಗಸರು ಬಂದು, ವಿಸ್ತಾರವಾದ ಮಹಿಳೆಯರ ಗುಂಪು ಮುನಿಸಿಪಲ್ ಪುರಭವನವನ್ನು ಪ್ರವೇಶಿಸಿದರು. ಕಾಂಗ್ರೆಸ್ ಧ್ವಜಗಳನ್ನು ಹಿಡಿದುಕೊಂಡು ಕಾಂಗ್ರೆಸ್ ಘೋಷಣೆಗಳನ್ನು ಕೂಗುತ್ತಾ ಕೌನ್ಸಿಲ್ ಚೇಂಬರಿನಲ್ಲಿ ಸೇರಿದ್ದರು.

ಕಲ್ಕತ್ತಾ ನಗರದ ಮೇಯರಾದ ಶ್ರೀ ಹೇಮ ಚಂದ್ರನಸ್ಕರ್ ರವರು ಕೌನ್ಸಿಲ್ ಚೇಂಬರನ್ನು ಪ್ರವೇಶಿಸಿದರು. ಒಬ್ಬ ಮಹಿಳೆಯು ಸಭೆಯ ಮೇಯರವರ ವೇದಿಕೆಯನ್ನು ಹತ್ತಿ ಅದರ ಮೇಲೆ ಕಾಂಗ್ರೆಸ್ ತ್ರಿವರ್ಣ ಧ್ವಜವನ್ನು ಆರೋಹಣ ಮಾಡಿದ್ದಳು. ಇವ್ವರು ಮಹಿಳೆಯರು ಭಾಷಣ ಮಾಡುತ್ತಿದ್ದರು.

"ಕಲ್ಕತ್ತಾ ನಗರದ ಕೌನ್ಸಿಲರುಗಳು ದಿವಂಗತ ದೇಶಬಂಧು ಚಿತ್ತರಂಜನ ದಾಸರಂತೆ ದೇಶಾಭಿಮಾನದಿಂದ ವರ್ತಿಸಬೇಕು. ದೇಶಬಂಧು ಕಲ್ಕತ್ತಾದ ಮೊದಲನೆಯ ಮೇಯರ್ ಆಗಿದ್ದರು" ಎಂದು ಹೇಳಿದರು. ಭಾಷಣ ಮಾಡಿದರು.

ಮಹಿಳೆಯರು, ಕಾಂಗ್ರೆಸ್ ಧ್ವಜ ವನ್ನು [illegible] ಹೊರಟರು.

ಅನಂತರ ಕೌನ್ಸಿಲಿನ ವಿನಿಯೋಗ ನಡೆಯಿತು.

ಶಿವಮೊಗ್ಗ ಸುದ್ದಿಗಳು

(ಸ್ವಂತ ವಾ॥ ಬಾತ್ಮೀದಾರರಿಂದ)

ಶಿವಮೊಗ್ಗ, ಸೆ. ೨೬

ಇಲ್ಲಿಯ ಬಂಧನದಲ್ಲಿದ್ದ ರಾಜಕೀಯ ಬಂಧಿಗಳಾದ ಶ್ರೀ ಕೆರೋಡಿ ಕೃಷ್ಣಮೂರ್ತಿ, ಡಿ. ಎಸ್. ದಿವಾಕರ್ ಮತ್ತು ಶ್ರೀ ಬಿ ಸಿ. ಪಾಲಪ್ಪ ಹೊದ ಇವರ [illegible] ಜನ ಮಂದಿಗಳನ್ನು ಮೊನ್ನೆ ರಾತ್ರಿ ರೈಲಿನಲ್ಲಿ ಇಲ್ಲಿಂದ ಬೆಂಗಳೂರು ಸೆಂಟ್ರಲ್ ಜೈಲಿಗೆ ರವಾನಿಸಲಾಯಿತು.

ಶಿಕಾರಿಪುರದಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ಯಾರೋ ಹೊಡೆದರೆಂದು ವದಂತಿ ಹಬ್ಬಿದ್ದುದು ನಿಜವಲ್ಲ. ಈ ಘಟನೆಗೂ ರಾಜಕೀಯ ಚಳವಳಿಗೂ ಯಾವ ಸಂಬಂಧವಿಲ್ಲವೆಂದು ಖಚಿತವಾಗಿ ತಿಳಿದು ಬರುತ್ತದೆ.

ಶಿರಾಳಕೊಪ್ಪದ [illegible] ದಲ್ಲಿ ಒಂದು ಟೆಲಿಫೋನ್ ಕಂಬ ಉರುಳಿಸಲ್ಪಟ್ಟಿದೆ. ಈಗ ಆರೋಪಿಯಾಗಿ ವಶಕ್ಕೆ ತೆಗೆದುಕೊಂಡು ದಸ್ತಗಿರಿ ಮಾಡಲ್ಪಟ್ಟಿದೆ ಎಂದು ಗೊತ್ತಾಗಿದೆ.

ಈದಿನ ಪ್ರಾತಃಕಾಲ ಜಿಲ್ಲಾ ಮುಖ್ಯಾಧಿಕಾರಿಗಳಾದ ಶ್ರೀ॥ ಎಂ ನರಸಿಂಹ[illegible]ರವರ ಅಧ್ಯಕ್ಷತೆಯಲ್ಲಿ ಪುರಜನರ ಸಭೆ ನಡೆದು ಜೋಗದ ಆಹಾರ ಪದಾರ್ಥಗಳನ್ನು, ಸೀಮೆ ಎಣ್ಣೆಯನ್ನು ಸರಿಯಾದ ಬೆಲೆಗೆ ಸರಬರಾಜು ಮಾಡಲು ವ್ಯವಸ್ಥೆಗೊಳಿಸಲಾಯಿತು. ಈ ಸಭೆಗೆ ಜೋಗದ ವಿದ್ಯುದ್ಯೋಜನೆಯ ಸೂಪರಿಂಟೆಂಡೆಂಟ್ ಇಂಜಿನಿಯರವರು ದಯಮಾಡಿಸಿದ್ದರು.

ಶಿವಮೊಗ್ಗ ಪೌರಸಭೆಯ ವಿಶೇಷ ಸಭೆಯು ಶ್ರೀ॥ ಸಿ. ರಾಮಸ್ವಾಮಿ ರವರ ಅಧ್ಯಕ್ಷತೆಯಲ್ಲಿ ನಡೆದು 1941-42 ನೇ ಸಾಲಿನ ಜಮಾಖರ್ಚನ್ನು ಅಂಗೀಕರಿಸಲಾಯಿತು. ಈ ಸಾಲಿನಲ್ಲಿ ಪುರಸಭೆಯವರ ಒಟ್ಟು ರೂ 123750 [illegible] ವಿದ್ಯುತ್ ವ್ಯವಸ್ಥೆಯನ್ನು ಪುನಃ ರೂಪಿಸುವ [illegible] ಮತ್ತು ನಗರದ ಪ್ರದೇಶವನ್ನು ವಿಸ್ತರಿಸಿ, ಪುರಸಭೆಯ ಸ್ವತ್ತಿಗಾಗಿ [illegible] ರೂ. [illegible] ಮ. ರಾ. ರಾ. ಶ್ರೀನಿವಾಸಯ್ಯಂಗಾರ್‌ರವರು ಇಲ್ಲಿಗೆ ವರ್ಗವಾಗಿ ಬಂದಾಗಿನಿಂದ ಪೌರಸಭೆಯ ಆಡಳಿತದಲ್ಲಿ ಹೊಸ ಹೊಸ ಸೌಕರ್ಯಗಳನ್ನು ಕಲ್ಪಿಸಿಕೊಡುವುದರ ಜೊತೆಗೆ [illegible] ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. [illegible] ಪೌರಸಭೆಯವರು ಪುರಜನರ ವಿವಿಧ ಕೆಲಸಗಳನ್ನು ವಿಶೇಷ ಆಸಕ್ತಿಯಿಂದ ನೆರವೇರಿಸುತ್ತಿದ್ದಾರೆ.

ನೆನ್ನೆ ದಿನ ರಾತ್ರಿ ಗಾಂಧಿನಗರ ಮತ್ತು [illegible] ಮನೆಗಳನ್ನು [illegible] ಪೋಲೀಸರು [illegible] ಶೋಧಿಸಿ [illegible] ಅವರ ಮನೆಯಲ್ಲಿ [illegible] ದಸ್ತಗಿರಿ ಮಾಡಲಾಗಿದೆ.

ಬ್ರಿಸಾ ಸಬೋಮೆರೀನಿಗೆ ಮುತ್ತಿಗೆ

ಮೊನ್ನೆ ದಿನ ಸಮ್ಮಾನಿತ [illegible] ಪಟ್ಟಣದ ಮೇಲೆ [illegible] ಪತ್ರಿಕೆಗೆ [illegible] ಫ್ರಾನ್ಸಿನ [illegible] ಸಮ್ಮತಿಯಿಲ್ಲದೆ [illegible] ಮುತ್ತಿಗೆಯ [illegible] ೨೫೦೦ ಟನ್ [illegible] ಬಾಂಬು [illegible]

ಈಜಿಪ್ಟ್ ರಣಕ್ಷೇತ್ರ

[illegible] ಈಜಿಪ್ಟಿನ [illegible] ಬ್ರಿಟಿಷ್ [illegible] ಸಾಧ್ಯವಾಯಿತೆಂದು [illegible] ವಿಮಾನಗಳು [illegible] ಶತ್ರುಗಳ [illegible] ವಿಮಾನಗಳು ನಾಶವಾದುವು.

ಜನರ ಮೇಲೆ ಮೆಷಿನ್‌ಗನ್ ಪ್ರಯೋಗ

[illegible] ಜನರ ಗುಂಪಿನ ಮೇಲೆ ವಿಮಾನದಿಂದ ಮೆಷಿನ್ ಗನ್ನುಗಳನ್ನು [illegible] ಕೇಂದ್ರ ಶಾಸನಸಭೆಯಲ್ಲಿ [illegible]

ಜನರ ಗುಂಪಿನ ಮೇಲೆ [illegible] ವಿಮಾನಗಳಿಂದ [illegible]

[illegible] ಜನರ ಗುಂಪಿನ ಮೇಲೆ [illegible] ರೈಲ್ವೆ [illegible] ಜನರ ಗುಂಪಿನ ಮೇಲೆ [illegible] ದಕ್ಷಿಣ [illegible]

[illegible] ವಿಮಾನಗಳಿಂದ [illegible]

ನ್ಯಾಷನಲ್ ಸ್ಪಾಹ್ ರಣಕ್ಷೇತ್ರದಲ್ಲಿ ಶತ್ರುಗಳ ಮುಂದೊಟ್ಟು

[illegible]

ಮಾರ್ಷಲ್ ಪೆಟೈನರ ಮೇಲೆ ವಿಚಾರಣೆ?

[illegible] ಮಾರ್ಷಲ್ ಪೆಟೈನರ [illegible] ವಿಚಾರಣೆ [illegible]

ಕರಾಚಿಯಲ್ಲಿ ವಿಮಾನ ದುರಂತ

ಮೊನ್ನೆ ದಿನ [illegible] ಕರಾಚಿ [illegible]

[illegible] ವಿಮಾನ [illegible] ವಿಮಾನದಲ್ಲಿ [illegible] ಬೆಂಕಿ ಹತ್ತಿಕೊಂಡಿತು.

ಈ ವಿಮಾನ [illegible]

ಕೇಂದ್ರ ಶಾಸನ ಸಭೆಗೆ ರಾಜೀನಾಮೆ

ಶ್ರೀ [illegible] ಕೇಂದ್ರ ಶಾಸನ ಸಭೆಗೆ ರಾಜೀನಾಮೆ [illegible] ರಾಜೀನಾಮೆ ಕೊಟ್ಟಿದ್ದಾರೆ [illegible]

ಹಾಸನದ ತಾಲ್ಲೂಕಿನಲ್ಲಿ ಪೋಲೀಸರು ಗುಂಡು ಹಾರಿಸಿದರು

[illegible] ಹಾಸನ ತಾಲ್ಲೂಕಿನ [illegible] ಪೋಲೀಸ್ [illegible] ಗುಂಡು [illegible] ಪೋಲೀಸಿನವರ [illegible]

[illegible]

[illegible]

ಪ್ರೊಫೆಸರನ್ನು ಪತ್ತೆಮಾಡಿ ಕೊಟ್ಟವರಿಗೆ ಬಹುಮಾನ

ಕಾಶಿ ಹಿಂದೂ ವಿಶ್ವವಿದ್ಯಾನಿಲಯದ ಆಯುರ್ವೇದಿಕ್ ಕಾಲೇಜಿನ ಪ್ರೊಫೆಸರರಾದ ಡಾ|| ಎಲ್. ಡಿ. [illegible] ದಸ್ತಗಿರಿ ಮಾಡ [illegible] ರೂ. ಬಹುಮಾನವನ್ನು [illegible] ಪ್ರಕಟಿಸಿದ್ದಾರೆ. ಆವರು ಕಳೆದ ತಿಂಗಳಲ್ಲಿ ನಡೆದ ಗಲಭೆಗಳಲ್ಲಿ ಭಾಗವಹಿಸಿದ್ದು ಈಗ ತಪ್ಪಿಸಿಕೊಂಡಿರುವರೆಂದು ಹೇಳಲಾಗಿದೆ.

[illegible] ವಿಶ್ವವಿದ್ಯಾನಿಲಯದಲ್ಲಿ [illegible] ತಪ್ಪಿಸಿಕೊಂಡಿರುವರೆಂದೂ [illegible] ಬಹುಮಾನವನ್ನು [illegible] ಪ್ರಕಟಿಸಲಾಗಿದೆ.

ಸಿಂಧ್ ಕಾಲೇಜ್ ಪ್ರಿನ್ಸಿಪಾಲರ ಮನೆಯ ಮುಂದೆ ಪಿಕೆಟಿಂಗ್

ಸಿಂಧ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ [illegible] ಮನೆಯ ಮುಂದೆ [illegible] ಪಿಕೆಟಿಂಗ್ ನಡೆಸಿದರು.

ಕಾಲೇಜಿನ ಮುಂದೆ ವಿದ್ಯಾರ್ಥಿಗಳು ಪಿಕೆಟಿಂಗ್ ನಡೆಸುತ್ತಿದ್ದಾರೆ. ಪ್ರೊಫೆಸರುಗಳೂ ಮತ್ತು [illegible] ವಿದ್ಯಾರ್ಥಿಗಳು [illegible] ಪಿಕೆಟಿಂಗ್ [illegible]

ಲಂಚ ತೆಗೆದುಕೊಂಡದ್ದಕ್ಕೆ ಕಠಿಣ ಶಿಕ್ಷೆ

[illegible] ಲಂಚ ತೆಗೆದು [illegible] ಪೋಲೀಸ್ ಕಾನ್ಸ್‌ಟೇಬಲನಿಗೆ [illegible] ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

ವಿದ್ಯಾರ್ಥಿಗಳ ದಸ್ತಗಿರಿ

[illegible] ಹೈಸ್ಕೂಲ್ ಮುಂದೆ ಪಿಕೆಟಿಂಗ್ ಮಾಡಿದ್ದಕ್ಕೆ [illegible] ವಿದ್ಯಾರ್ಥಿಗಳನ್ನು [illegible] ದಸ್ತಗಿರಿ ಮಾಡಲಾಯಿತು [illegible]

ವರ್ತಕರ ದಸ್ತಗಿರಿ

ಅಂಗಡಿಗಳನ್ನು ತೆರೆಯಲು ನಿರಾಕರಿಸಿದರೆಂದು [illegible] ವರ್ತಕರನ್ನು ದಸ್ತಗಿರಿ ಮಾಡಲಾಗಿದೆ.

ಹಿಂದೂ ಮಹಾಸಭೆ

ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿ [illegible] ಸೇರುವುದು.

ಹಿಂದೂ ಮಹಾಸಭೆಯ [illegible] ಮುಂದೆ [illegible]

ಛಡಿ ಶಿಕ್ಷೆ

[illegible] ಕಾಂಗ್ರೆಸ್ [illegible] ಕಮಿಟಿಯ [illegible]

Edited printed and published
by [illegible] R. Narayan[illegible] Sastry
Press [illegible] Road [illegible]

ಋಣಪರಿಹಾರ ಸಮಿತಿ

ಮೈಸೂರು ಸರ್ಕಾರದವರು [illegible] ಋಣಪರಿಹಾರ ಸಮಿತಿಯನ್ನು ಸ್ಥಾಪಿಸಲು ಆಜ್ಞೆ ಮಾಡಿ, ಆ ಸಮಿತಿಗೆ [illegible] ಅಧ್ಯಕ್ಷರಾಗಿಯೂ ಇತರ ಇಬ್ಬರು ಸದಸ್ಯರೂ ಇರಬೇಕೆಂದು ತೀರ್ಮಾನಿಸಿದ್ದಾರೆ.

° ° ° °

ಇಂಡಿಯಾ ಗವರ್ನಮೆಂಟಿನವರು ಕಳೆದ [illegible] ಹೊಸ ಸರ್ಕಾರಿ ಅಧಿಕಾರಿ [illegible] ತೀರ್ಮಾನಿಸಿದ್ದಾರೆ. [illegible] ಬದಲಾವಣೆಯು [illegible] ಬಹುದೆಂದು ತಿಳಿಯಬರುತ್ತದೆ.

ಮುದ್ರಣಾಲಯದ ಮೇಲೆ ಪ್ರತಿಬಂಧಕ

[illegible] ಮುದ್ರಣಾಲಯದ [illegible] ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ಪ್ರತಿಬಂಧಕಾಜ್ಞೆ [illegible] ಮುದ್ರಣಾಲಯವು [illegible] ಉಪಯೋಗಿಸಿಕೊಳ್ಳಕೂಡದು ಎಂದು ಪ್ರತಿಬಂಧಕಾಜ್ಞೆ ಮಾಡಲಾಗಿದೆ.

ಬರೋಡಾದಲ್ಲಿ ವಿವಾಹವಿಚ್ಛೇದನ ಅರ್ಜಿಗಳು

೧೯೪೦-೪೧ ನೇ ಸಾಲಿನಲ್ಲಿ ಬರೋಡಾ ಸಂಸ್ಥಾನದಲ್ಲಿ [illegible] ವಿವಾಹ ವಿಚ್ಛೇದನದ ಅರ್ಜಿಗಳು [illegible]

ಅಹಮದಾಬಾದಿನಲ್ಲಿ ಬೆಂಕಿ

ಕೆಲವರು [illegible] ಪೋಲೀಸರ ಮೇಲೆ ಕಲ್ಲುಗಳನ್ನು [illegible] ಪೋಲೀಸರು ಗುಂಡು ಹಾರಿಸಿದರು [illegible] ದಸ್ತಗಿರಿ ಮಾಡಿದ್ದಾರೆ.

ಕೆಲವು ಜನ ವಿದ್ಯಾರ್ಥಿನಿಯರು [illegible] ಗರ್ಲ್ಸ್ ಹೈಸ್ಕೂಲಿನ ಮೇಲೆ [illegible] ಕೆಲವು ವಿದ್ಯಾರ್ಥಿನಿಯರನ್ನು ದಸ್ತಗಿರಿ ಮಾಡಿದ್ದಾರೆ.

ಬಿ. ವಿ. ಪಂಡಿತರ
ಭಿಷಗ್ರತ್ನ ಆಯುರ್ವೇದ ವಿದ್ಯಾ[illegible]
ಜೀವನಿ
ಗರ್ಭಾಶಯಕ್ಕೆ ಸತ್ವವರ್ಧಕ.
[illegible]
ಜೀವನಿ [illegible]
ದಕ್ಷಿಣ ಕನ್ನಡ [illegible]
ನಷ್ಟವೈದ್ಯಶಾಲೆ, ನಂಜನಗೂಡು

WEEKLY EDITION

ಎಲ್ಲಾ ನೋವುಗಳಿಗೂ
ಅ
ಮೃ
ತಾಂ
ಜ
ನ ಅತ್ಯುತ್ತಮವಾದ ಔಷಧ

ಇಂದಿನ ಪತ್ರಿಕೆ 6 ಕಾಸು



Regd. No. M. 4312

ಅಮೃತಾಂಜನದ
"ಯೂಕಲಿಪ್ಟ" ಔಷಧ
ಇದು ಎಲ್ಲಾ

ಚರ್ಮ ಸಂಬಂಧವಾದ
ರೋಗಗಳಿಗೂ ಗುಣ
ಕೊಡುವುದು

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

SADHWI : LEADING NATIONALIST DAILY OF MYSORE.

ಸಂಪುಟ ೧] MYSORE : MONDAY 28-9-1942 ಮೈಸೂರು : ಸೋಮವಾರ ೨೮—೯—೪೨ [ಸಂಚಿಕೆ ೭೧

ಸ್ಟಾಲಿನ್‌ಗ್ರಾಡ್ ಕದನ

ಸ್ಟಾಲಿನ್‌ಗ್ರಾಡಿನ ವಾಯವ್ಯ ಮತ್ತು ಉತ್ತರ ದಿಕ್ಕುಗಳಲ್ಲಿ ರಷ್ಯಾ ಸೈನ್ಯವು ಶತ್ರುಗಳು ಬಲವಾಗಿ ಎದುರಿಸುತ್ತಿದ್ದರೂ ಕೂಡಾ ಅವೆಲ್ಲವನ್ನೂ ಸಹಿಸಿ ಮುಂದುವರಿಯುತ್ತಲಿದೆ. ಶತ್ರುಗಳಿಂದ ಎರಡು ಪ್ರಾಮುಖ್ಯ ಸ್ಥಳಗಳನ್ನು ರಷ್ಯನರು ವಾಪಸ್ ತೆಗೆದುಕೊಂಡಿದ್ದಾರೆ. ಜರ್ಮನರು ಸ್ಟಾಲಿನ್‌ಗ್ರಾಡ್ ಕಡೆಗೆ ಮುಂದುವರಿಯುವುದನ್ನು ತಡೆಗಟ್ಟುತ್ತ, ಜರ್ಮನರು ವೋಲ್ಗಾ ನದಿಯ ಪ್ರದೇಶದಲ್ಲಿ ಓಡಾಟವನ್ನು ತಡೆಗಟ್ಟಲು ಸ್ಯಾಂಪಾ ಬೋಟುಗಳಿಂದ ಮನುಷ್ಯರನ್ನು ಸಾಗಿಸುತ್ತಿದ್ದಾರೆ. ಮೇಲಿಂದ ಮೇಲೆ ಜರ್ಮನರು ವಿಶೇಷವಾಗಿ ಯುದ್ಧೋಪಕರಣಗಳನ್ನು ಒದಗಿಸುತ್ತಲಿದ್ದಾರೆ.

ಜರ್ಮನಿಯಲ್ಲಿರುವ ಸ್ವೀಡಿಷ್ ಪತ್ರಿಕೋದ್ಯಮಿಗಳು ರಷ್ಯಾದೇಶದ ಪ್ರತಿಭಟನೆಯನ್ನು ಕಂಡು ಸ್ಟಾ॥ ಗ್ರಾಡಿನ ಪತನದ ಬಗ್ಗೆ ಅನುಮಾನಾಸ್ಪದರಾಗಿದ್ದಾರೆ. ಮಾರ್ಷಲ್ ವಾನ್‌ಬಾಕ್ ಟ್ಯಾಂಕುಗಳಿಂದ ಸಜ್ಜಿತರಾಗಿ ಸ್ಟಾ॥ ಗ್ರಾಡಿನ ಮೇಲೆ ಹೂಡಿದ ಈ ಧಾಳಿಯು ಅವರ (ವಾನ್ ಬಾಕರ) ಅಂತ್ಯ ಧಾಳಿಯೆಂದು ಅಭಿಪ್ರಾಯಪಡುತ್ತಾರೆ.

ಉತ್ತರ ಸಮುದ್ರದ ಶತ್ರುಗಳ ೪೦ ವಿಮಾನಗಳನ್ನು ಕೆಡವಿದರು

ಜರ್ಮನರು ಉತ್ತರ ಸಮುದ್ರದಲ್ಲಿ ಸಾಮಾನನ್ನು ಸಾಗಿಸುತ್ತಿದ್ದಾಗ, ಕೂಡಲೇ ರಷ್ಯನರ ಟ್ಯಾಂಕುಗಳು ಮತ್ತು ಸಬ್‌ಮೆರೀನುಗಳ ಶತ್ರುಗಳ ಹಡಗುಗಳನ್ನು ಮುಳುಗಿಸಿದರು. ವಿಮಾನದಲ್ಲಿ ಯುದ್ಧ ಸಾಮಗ್ರಿಗಳನ್ನು ಸಾಗಿಸುತ್ತಿದ್ದಾಗ ರಷ್ಯನರು ೪೦ ಜರ್ಮನ್ ವಿಮಾನಗಳನ್ನು ಹೊಡೆದು ಸಮುದ್ರಕ್ಕೆ ಮುಳುಗಿಸಲಾಯಿತು. ಎರಡು ಯು ಬೋಟುಗಳು ಮತ್ತು ಡಿಸ್ಟ್ರಾಯರು ನಷ್ಟ ಹೊಂದಿದವು.

ರಷ್ಯಾ ರಣಕ್ಷೇತ್ರದಲ್ಲಿ ಜರ್ಮನ್ ಸೇನಾನಾಯಕರ ಮರಣ

ಜರ್ಮನಿಯ ೫೯ ನೇ ಡಿವಿಜನ್ನಿನ ಸೈನ್ಯಾಂಗದ 'ಮೇಯರ್' ಜನರಲ್ ರಟ್ಯೂರವರು ಮತ್ತು ಕೆಲವು ಜನ ಸೈನಿಕರು ಮರಣಹೊಂದಿರುವರೆಂದು ಮಾಸ್ಕೋ ರೇಡಿಯೋವು ತಿಳಿಸುತ್ತದೆ.

ಸ್ಕಾಟ್ಲೆಂಡಿನಲ್ಲಿ ಜಾಂ ಸಾಹೇಬ್

ನವನಗರದ ಮಹಾರಾಜರವರು ಜಾಮ್‌ಸಾಹೇಬರ ಸ್ಕಾಟ್ಲೆಂಡಿನಲ್ಲಿ ಒಂದು ಭಾರತೀಯ ಸೈನ್ಯದಳವನ್ನು ಪರೀಕ್ಷಿಸಿದರು. ಆಗ ಅವರೊಡನೆ ಜನರಲ್ ಕ್ಲಿಫ್ಟನರವರು ಮತ್ತು ಮಹಾರಾಜರ ಸ್ಟಾಫ್ ಆಫೀಸರವರು ಇಂಡಿಯಾ ಆಫೀಸಿನ ಪ್ರಿಜರ್ ಅಧಿಕಾರಿಗಳು ಇದ್ದರು. ಭಾರತೀಯ ಸೈನಿಕರಿಗೆ ಅವರು ಇಲ್ಲಿನ ಪ್ರಸಕ್ತ ಪರಿಸ್ಥಿತಿಗಳ ಬಗ್ಗೆ ವಿವರಿಸಿದರು. ಸೈನಿಕರು ಹರ್ಷೋತ್ಸಾಹವನ್ನು ನೋಡಿ ಬಹಳ ಪ್ರಶಂಸಿಸಿದರು.

ಜರ್ಮನ್ ಸೇನಾನಿ ವಾನ್ ಬಾಕ್

ಯುದ್ಧದ ಸೋಲುಗೆಲವುಗಳು ಯಾವುದೊಂದು ದೇಶದ ಸೇನೆ ಸಮರ ಸನ್ನಾಹಗಳನ್ನವಲಂಬಿಸುವದಲ್ಲದೆ ಆ ಸೈನ್ಯದ ಅಧಿನಾಯಕನ ಶೌರ್ಯ, ಕರ್ತೃತ್ವಶಕ್ತಿ, ಚಾತುರ್ಯ ವ್ಯಕ್ತಿತ್ವಗಳನ್ನೂ ಅವಲಂಬಿಸಿದೆ. ಸೈನ್ಯದ ಸಂಘಟಕನು ಸೇನಾನಾಯಕನು ಆವಶ್ಯಕ ಶಿಕ್ಷಣ ಕೊಡುವವನೂ ಆತನ ಚತುರೋಪಾಯಗಳೇ ಕಾರಣವಾಗುವವು.

ಅವರೆ ಟಿಮೋಶೆಂಕೋರವರ ಪ್ರತಿಸ್ಪರ್ಧಿಯಾದ ಜರ್ಮನ್ ಸೇನಾಪತಿ ವಾನ್ ಬಾಕರವರು ಎಷ್ಟೇ ಕಷ್ಟವಾದರೂ ಸ್ಟಾಲಿನ್‌ಗ್ರಾಡನ್ನು ವಶಪಡಿಸಿಕೊಂಡೇ ತೀರುವೆನೆಂದು ಪ್ರತಿಜ್ಞೆ ಮಾಡಿರುವನಂತೆ.

ವಾನ್ ಬಾಕರವರನ್ನು ಹಿಟ್ಲರನು ಕಳೆದವರ್ಷ [illegible] ಮತ್ತು ಅವರ "ಯುದ್ಧ [illegible]" ಅವರನ್ನು ಸ್ಟಾಲಿನ್‌ಗ್ರಾಡಿನ ಯುದ್ಧದಲ್ಲಿ ಸೇನಾಪತಿಯೆಂದು ನೇಮಿಸಿದ್ದರು. ಈಗ ಅವರು ಸ್ಟಾಲಿನ್‌ಗ್ರಾಡ್ ಯುದ್ಧದಲ್ಲಿ ಜರ್ಮನ್ ಸೈನ್ಯದ ಸೂತ್ರಧಾರರಾಗಿದ್ದಾರೆ.

ಸ್ಟಾಲಿನ್‌ಗ್ರಾಡ್ ಯುದ್ಧದ ಪರಿಣಾಮವು ಏನೇ ಆದರೂ ಈ ಇಬ್ಬರು ಸೇನಾಪತಿಗಳ ವಾನ್ ಬಾಕ್ ಮತ್ತು ಟಿಮೋಶೆಂಕೋ ಇವರ ಕಾರ್ಯಸಾಹಸಗಳು ಮಾತ್ರ ಅವಿಸ್ಮರಣೀಯವಾಗಿವೆ ಎಂದು ಹೇಳಬಹುದು.

ಜಪಾನಿಗೆ ಗುಲಾಮರು !

ಉತ್ತರ ಚೀಣಾದಲ್ಲಿ ೫೦ ಲಕ್ಷ ಚೀಣಾ ಕೂಲಿಗಾರರನ್ನು ಜಪಾನೀಯರು ಸೆರೆಹಿಡಿದು ಅವರನ್ನು ಮಂಚೂರಿಯಾ ಮತ್ತು ಜಪಾನ್‌ಗಳಿಗೆ ಕಳುಹಿಸಿ ಅಲ್ಲಿ ತಮ್ಮ ಕಡುಕಠಿಣವಾದ ಕೂಲಿ ಕೆಲಸಗಳನ್ನು ಇವರಿಂದ ಮಾಡಿಸಿಕೊಳ್ಳುತ್ತಿದ್ದಾರೆ. ಚೀಣಾದ ಅಧಿಕಾರಿ ವರ್ಗದ ಸುದ್ದಿಯ ಪ್ರಕಾರ ಜಪಾನರು ಇನ್ನೂ ೫೦ ಲಕ್ಷ ಕೂಲಿಗಾರರನ್ನು ಕೂಡಿಸಬೇಕೆಂದು ಹವಣಿಸುತ್ತಿರುವದಾಗಿ ತಿಳಿಯಬರುತ್ತದೆ. ಜಪಾನೀಯರು ಈ ಕೂಲಿಗಾರರನ್ನು ಕೂಡಿಸಲು ಮಾಡುವ ಒಂದು ಪ್ರಿಯವಾದ ವಿಧಾನವೆಂದರೆ, ಚೀಣೀ ತರುಣರನ್ನು ಅನೇಕಾನೇಕ ಮನೆಗಳ ಮೇಲೆ ದಸ್ತಗಿರಿ ಮಾಡುವದು, ಕಳೆದ ಫೆಬ್ರವರಿ ತಿಂಗಳಲ್ಲಿ ಜಪಾನೀಯರು ಶಾನ್ಸಿ ಪ್ರಾಂತ್ಯದ ಆಗ್ನೇಯ ಭಾಗದಲ್ಲಿ ೧ ಸಾವಿರಕ್ಕೆ ಮೇಲ್ಪಟ್ಟು ತರುಣರನ್ನು ದಸ್ತಗಿರಿ ಮಾಡಿ ಅವರನ್ನು [illegible] ಕಾರ್ಯಗಳಿಗಾಗಿ [illegible] ರವಾನಿಸಿದ್ದಾರೆ.

ಹೈಸ್ಕೂಲಿಗೆ ಬೆಂಕಿ

[illegible] ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲು ಕಟ್ಟಡಕ್ಕೆ ಬೆಂಕಿ [illegible] ಭಾಗಗಳೂ ಮತ್ತು [illegible] ಹೋಗಿವೆ. ಅಲ್ಲಿನ ಜನರು [illegible] ಮಾಡುತ್ತಿರುವುದಾಗಿ ತಿಳಿದುಬಂದಿದೆ.

ರಾಜಧಾನಿಯ ಸುದ್ದಿಗಳು

(ಸ್ವಂತ ವರದಿಗಾರರಿಂದ)

ಶಾಲಾ ಕಾಲೇಜುಗಳ ಪರಿಸ್ಥಿತಿ

ಈ ದಿನ ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಹಾಜರಿಯು ಇದುವರೆಗೂ ಇದ್ದುದಕ್ಕಿಂತಲೂ ಸ್ವಲ್ಪ ಉತ್ತಮಗೊಂಡಿದೆ. ಡಿ. ಡಿ. ಪಿ. ಐ. ರವರು ಹೈಸ್ಕೂಲುಗಳಿಗೆ ಪರಿಸ್ಥಿತಿಯನ್ನು ಪರೀಕ್ಷಿಸಲು ಭೇಟಿಯಿತ್ತರು. ಕಾಲೇಜುಗಳಲ್ಲೂ ಸಹ ವಿದ್ಯಾರ್ಥಿಗಳ ಹಾಜರಿಯು ಸ್ವಲ್ಪ ಉತ್ತಮಗೊಂಡಿತ್ತು. ಮೆಡಿಕಲ್ ಕಾಲೇಜಿನಲ್ಲಿ ೧೫ ಜನ ವಿದ್ಯಾರ್ಥಿಗಳು ಮಾತ್ರ ಹಾಜರಿದ್ದರು.

ದಸ್ತಗಿರಿಗಳು

ಚಾಮರಾಜನಗರದ ಆರ್. ಎ. ವೆಂಕಟರಾಮ [illegible] ಲಿಂಗಪ್ಪನವರನ್ನು ನೆನ್ನೆ ರಾತ್ರಿ ವಸ್ತ್ರ [illegible] ಚಾಮರಾಜನಗರದಲ್ಲಿ ಭಾಷಣ ಮಾಡಿದರೆಂದು ಆಪಾದಿಸಿ ಅವರ ಮೇಲೆ ಕೋರ್ಟಿನಲ್ಲಿ ಮೊಕದ್ದಮೆ ಹೂಡುವರೆಂದು ತಿಳಿದು ಬಂದಿದೆ.

ವಿದ್ಯಾರ್ಥಿಗಳ ದಸ್ತಗಿರಿಗಳು

ಈ ದಿನ ಬೆಳಗ್ಗೆ ಮಹಾರಾಜರ ಹೈಸ್ಕೂಲಿನ ೪ ಜನ ವಿದ್ಯಾರ್ಥಿಗಳನ್ನೂ ಶಾರದಾ ವಿಲಾಸ ಹೈಸ್ಕೂಲಿನ ಒಬ್ಬರು ವಿದ್ಯಾರ್ಥಿಗಳನ್ನೂ ದಸ್ತಗಿರಿ ಮಾಡಿರುತ್ತಾರೆ.

ಹೈಸ್ಕೂಲು ಮತ್ತು ಕಾಲೇಜುಗಳ ಬಳಿಯಲ್ಲಿ ಪೋಲೀಸಿನವರ ಕಾವಲಿರುತ್ತೆ.

ಮೈಸೂರು ಬ್ಲೂಸ್ ಫುಟ್‌ಬಾಲ್ ಕ್ಲಬ್ಬಿನ ಮಹಾ ಗಣಪತಿ ಉದ್ಯಾಪನೆ

ಇದೇ ಮಾಹೆ ತಾ|| ೨೬ ರಲ್ಲಿ ಮೈಸೂರು ಬ್ಲೂಸ್ ಫುಟ್‌ಬಾಲ್ ಕ್ಲಬ್ಬಿನವರು, ಈ ವರ್ಷ ತಮ್ಮ ಫುಟ್‌ಬಾಲ್ ಕ್ಲಬ್ಬಿನ ಆವರಣದಲ್ಲಿ ಪ್ರತಿಷ್ಠಿಸಿದ್ದ ಮಹಾ ಗಣಪತಿ ಉತ್ಸವವು ಮೂರು ದಿನಗಳಿಂದಲೂ ವಿಜೃಂಭಿಸಿದ್ದ ವಿದ್ವಾಂಸರುಗಳ ಸಂಗೀತ ಸಮಾರಂಭಗಳೊಡನೆ ೨೬ ನೇ ತಾ|| ಮುಕ್ತಾಯಗೊಂಡಿತು.

ಅದೇ ದಿನ ಸಾಯಂಕಾಲ [illegible] ಮೆರವಣಿಗೆಯಲ್ಲಿ ಮಹಾ ಗಣಪತಿಯನ್ನು ಬಿಜಯಮಾಡಿಸಲಾಯಿತು. ರಾಜಧಾನಿಯ ಪ್ರಮುಖ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿ, ರಾತ್ರಿ ೧೦ ಘಂಟೆಗೆ ಸರಿಯಾಗಿ ಕುಕ್ಕರಹಳ್ಳಿ ಕೆರೆಯನ್ನು ಸೇರಿ, ಅಲ್ಲಿ ಮಹಾ ಗಣಪತಿಯನ್ನು ವಿಸರ್ಜನೆ [illegible] ಬಂದ ಜನರಿಗೆ [illegible] ಫಲಾಹಾರ ದಾನ ನಂತರ [illegible] ಸಮಾಪ್ತಿಗೊಂಡಿತು.

ಗಾಂಧಿ ಜಯಂತಿಗಾಗಿ ರಿಯಾಯಿತಿ ಮೇಲೆ ಖಾದಿ ಮಾರಾಟ

ತಾ|| 2-10-1912 ರಿಂದ ಒಂದು ವಾರ ಗಾಂಧಿ ಜಯಂತಿ ಪ್ರಯುಕ್ತ ಖಾದಿ ಮಾರಾಟದ ಮೇಲೆ ರೂಪಾಯಿಗೆ 6 ರ ಸೆಂಟ್ ರಿಯಾಯಿತಿ ಕೊಡಲಾಗುವದು. ಖಾದಿ ಪ್ರೇಮಿಗಳೂ, ದೇಶಭಕ್ತರೂ ಪ್ರೋತ್ಸಾಹಿಸಬೇಕಾಗಿ ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸುಬ್ರಹ್ಮಣ್ಯಂ "ಬಿ" ಡಿವಿಜನ್ ಪಂದ್ಯಗಳು

[illegible] ನಡೆದ ಪಂದ್ಯಗಳ ಫಲಿತಾಂಶ [illegible] ೧ ಗೋಲುಗಳಿಂದ ಗೆದ್ದರು.

[illegible] ಕ್ಲಬ್‌ಗೂ ಗೌ|| ಬ್ರಾಂಚ್, ಫ್ರೆಂಡ್ಸ್ ಕ್ಲಬ್ಬಿಗೂ ಇದ್ದ ಪಂದ್ಯದಲ್ಲಿ, [illegible] ಕ್ಲಬ್ಬಿನವರು ೬ ಗೋಲುಗಳಿಂದ ಗೆದ್ದರು.

ಮಹಾರಾಜ ಸ್ಪೋರ್ಟಿಂಗ್ ಗೂ ಮತ್ತು ರೋವರ್ಸ್ ಕ್ಲಬ್ಬಿಗೂ ಇದ್ದ ಪಂದ್ಯದಲ್ಲಿ, ಮ|| ಸ್ಪೋರ್ಟಿಂಗ್‌ನವರು ೧ ಗೋಲಿನಿಂದ ಗೆದ್ದರು. ಇದೇ ಪಂದ್ಯದಲ್ಲಿ, ಆಟವು ನಡೆಯುತ್ತಿದ್ದಾಗ ಮ|| ಸ್ಪೋರ್ಟಿಂಗ್ ಕ್ಲಬ್ಬಿನ ಒಬ್ಬ ಆಟಗಾರನು ರೋವರ್ಸ್ ಕ್ಲಬ್ಬಿನ ಇತರ ಒಬ್ಬ ಆಟಗಾರನನ್ನು ಹೊಡೆದನಂತೆ! ಅವನನ್ನು ಆಟದ ಮೈದಾನದಿಂದ ಹೊರಗೆ ಕಳುಹಿಸಲಾಯಿತು.

ಈ ದಿನ ಬ್ಲೂಸ್ ಕ್ಲಬ್‌ಗೂ "ಬಿ" ಗೂ ಮ|| ಸ್ಪೋರ್ಟಿಂಗ್ ಕ್ಲಬ್ "ಬಿ" ಗೂ ಪಂದ್ಯವಿರುತ್ತದೆ.

ಜಗ್ಗಯ್ಯಪೇಟೆಯಲ್ಲಿ ಬಾಂಬು ಸಿಡಿತ

ಮೊನ್ನೆ ದಿನ ರಾತ್ರಿ ಜಗ್ಗಯ್ಯಪೇಟೆಯ ಥಿಯೇಟರಿನಲ್ಲಿ ತೆಲುಗು ನಾಟಕವು ನಡೆಯುತ್ತಿದ್ದಾಗ ಒಂದು ಸ್ಫೋಟಕ ಬಾಂಬು ಸಿಡಿಯಿತು. ಈ ಬಾಂಬು ಅಕಸ್ಮಾತ್ತಾಗಿ [illegible] ಮುಖಾಂತರ, ಕಲೆಕ್ಟರರ ಪಕ್ಕದಲ್ಲಿ ಬಿದ್ದಿತು. ೬ ಜನರನ್ನು [illegible] ಸಬ್‌ಇನ್ಸ್‌ಪೆಕ್ಟರ್ [illegible] ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಮುಸ್ಲಿಂ ಲೀಗಿಗೆ ರಾಜೀನಾಮೆ

ಮುಸ್ಲಿಂ ಲೀಗು ಈಗ ವಹಿಸಿರುವ ಧೋರಣೆಯನ್ನು ಪ್ರತಿಭಟಿಸುವ ಸಲುವಾಗಿ ಬೆಂಗಾಲಿನ ಪಾರ್ಲಿಮೆಂಟರಿ ಸೆಕ್ರೆಟರಿ [illegible] ಎಂ. ಎಲ್. ಎ. [illegible] ಮುಸ್ಲಿಂ ಲೀಗಿನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ಔರಂಗಾಬಾದ್ ಪೊಲೀಸಠಾಣೆಯ ಅಧಿಕಾರಿಯ ಮೇಲೆ ಮೊಕದ್ದಮೆ

[illegible]

ಶ್ರೀರಂಗಪಟ್ಟಣದಲ್ಲಿ ರುಂಡವಿಲ್ಲದ ಮುಂಡವು ಸಿಕ್ಕಿದೆ

[illegible]

ಮಿ|| ರಾಬರ್ಟ್ ಪೋಪೆಟ್ಟರ ಹಾವಳಿ

[illegible]

"ರಕ್ಷಣಾ ಲೀಗ್"

[illegible]

ಎಸ್. ಎಸ್. ಪಕ್ಷದ ನಾಜಿಗಳ ಸಾವು

[illegible]

ಸೈನ್ಯಾಧಿಕಾರಿಯೊಬ್ಬರ ವಿಷಾದಾಂತ ಮರಣ

[illegible]

ಸೃಷ್ಟಿ ಸರೋವರ

[illegible]

ಸ್ತ್ರೀಪುರುಷರ ಸಿಂಹಾಬಲದ ಸ್ಪರ್ಧೆ

[illegible]

ಮಿ|| ಜಿನ್ನಾರವರ ಆರೋಪ ಪ್ರಲಾಪ

ಮಿ|| ಜಿನ್ನಾರವರು ಒಂದು ಹೇಳಿಕೆಯಲ್ಲಿ ಬ್ರಿಟಿಷರು ಮುಸ್ಲಿಮರಿಂದ ಕಿತ್ತುಕೊಂಡ ರಾಜ್ಯವನ್ನು ಮುಸ್ಲಿಮರಿಗೇ ವಾಪಸ್ಸು ಕೊಟ್ಟು ಆ ಮೂಲಕ ತಾವು ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪವನ್ನು ಮಾಡಿಕೊಳ್ಳಬೇಕೆಂದು ಸೂಚಿಸಿದ್ದಾರಂತೆ.

ಇದಕ್ಕೆ ಉತ್ತರವಾಗಿ ರಾಯ್ಟರ್ ಪತ್ರಿಕೆಯಲ್ಲಿ ಕೆಳಗೆ ಕಂಡಂತೆ ತಿಳಿಸಲ್ಪಟ್ಟಿದೆ.—

ಮಿ|| ಜಿನ್ನಾರವರು ಇಂಡಿಯಾ ದೇಶದ ಚರಿತ್ರೆಯನ್ನು ಸರಿಯಾಗಿ ಓದಿಲ್ಲ. ಬ್ರಿಟಿಷರು ಇಂಡಿಯಾ ದೇಶವನ್ನು ಗೆದ್ದಾಗ ಇಲ್ಲಿ ಮೊಗಲ್ ಸಾಮ್ರಾಜ್ಯವು ಇರಲೇ ಇಲ್ಲ. ಬ್ರಿಟಿಷರಿಗೆ ಬಲವಾದ ಪ್ರತಿಭಟನೆಯನ್ನು ಕೊಟ್ಟವರೆಂದರೆ ಮರಾಟರು ಮತ್ತು ಸಿಕ್ಖರು. ಇವರಿಂದಲೇ ಬ್ರಿಟಿಷರು ರಾಜ್ಯವನ್ನು ಪಡೆದುಕೊಂಡರು.

ಆದ್ದರಿಂದ ಮಿ|| ಜಿನ್ನಾರವರು ತಮ್ಮ ಕೆಲಸವನ್ನು ಸಾಧಿಸಲು ಈ ಕುಟಿಲ ವಾದವನ್ನು ಹೊರಡಿಸಲಿ.

ಯಹೂದ್ಯರ ಕೊಲೆ

ಈಗ ಲಂಡನ್ನಿನಲ್ಲಿರುವ ಪೋಲಿಷ್ ಸರ್ಕಾರಕ್ಕೆ ಬಂದಿರುವ ವರ್ತಮಾನದ ಪ್ರಕಾರ ವರ್ಸಾದಲ್ಲಿ ಕಂಡ ಕಂಡವಾಗಿ ಯಹೂದ್ಯರ ಕೊಲೆಯು ಪ್ರಾರಂಭವಾಗಿರುವುದೆಂದು ತಿಳಿಯಬರುತ್ತೆ.

ದಿನ ಒಂದಕ್ಕೆ 7000 ದ ಹೂದ್ಯರು ಜರ್ಮನರಿಂದ ಕೊಲ್ಲಲ್ಪಡುತ್ತಿದ್ದಾರೆಂದೂ ಕಳೆದ ಮೂರು ತಿಂಗಳವರೆಗೆ ಒಟ್ಟು 7 ಲಕ್ಷ ಯಹೂದ್ಯರ ಕೊಲೆ ನಡೆದಿರುವುದೆಂದೂ ತಿಳಿಯಬರುತ್ತೆ.

ಆ ಕಾ ಶ ವಾ ಣಿ

ಸೆಪ್ಟೆಂಬರ್ ೩ ನೇ ಮಂಗಳವಾರ

೬-೦೦ ಕರ್ನಾಟಕ ಹಾಡುಗಾರಿಕೆ [illegible] ಪೇಟೆಧಾರಣೆ, [illegible] 'ನಾಟಕ ಕರ್ತ' [illegible] ವ್ಯಾಖ್ಯಾನ [illegible] 'ಕುರುಲಕ್ಷ್ಮೀ' : ವಿವಿಧ [illegible] ಹಾಡುಗಾರಿಕೆ [illegible] ಆಕಾಶವಾಣಿ [illegible] ವೃತ್ತಾಂತ [illegible] ರಾಷ್ಟ್ರಗೀತೆ

A JOB WITH A FUTURE

GOOD PAY & QUICK PROMOTION IN THE ROYAL INDIAN NAVY

There are good jobs waiting for qualified men in the following trades:

MECHANICAL ENGINEERING

RADIO ENGINEERING

ELECTRICAL ENGINEERING

JOINERY & SHIP CONSTRUCTION

Applicants should be between 18 and 30 years of age, of matriculation standard and either possess a Diploma or Certificate from a Technical Institute or College—or have served four years as an apprentice in an engineering firm or dockyard.

★

Apply to the nearest TECHNICAL RECRUITING OFFICE or write to A. G. 2(b) RECRUITING DIRECTORATE, ADJUTANT GENERAL'S BRANCH, GENERAL HEADQUARTERS, NEW DELHI.

ಈ ವಾರದ ವಿದ್ಯಮಾನಗಳು

ರಷ್ಯಾ

ಪರಿಸ್ಥಿತಿಯು ಒಂದೇ ಸಮನಾಗಿದೆ. ಸ್ಟಾಲಿನ್‌ಗ್ರಾಡ್ ಕದನವು ಈಗ ಹೆಚ್ಚು ಆಘಾತಕಾರಕವಾಗಿ ಪರಿಣಮಿಸುತ್ತಿದೆ. ನಗರಕ್ಕೆ ಹೊಸದಾಗಿ ಸಾಮಾನು ಸರಂಜಾಮುಗಳು ಸರಬರಾಜಾಗುತ್ತಿ. ಈ ಒಂದು ವಾರದಲ್ಲಿ ಈ ಪಟ್ಟಣವನ್ನು ಜಯಿಸಲು ೨೫ ಸಾವಿರ ಜರ್ಮನ್ ಯೋಧರು ಪ್ರಾಣತೆತ್ತಿದ್ದಾರೆ. ನಗರವೆಲ್ಲವೂ ಹೊಗೆ ಮತ್ತು ಧೂಳುಮಯವಾಗಿದೆ. ಆದರೂ ರಷ್ಯಾ ಯೋಧರು ದೃಢಮನಸ್ಕರಾಗಿ ಕಾದಾಡುತ್ತಿದ್ದಾರೆ. ಈ ವಾರಗಳಿಂದಲೂ ರಷ್ಯಾದಲ್ಲಿರುವ ಜರ್ಮನ್ ಸೇನೆಗಳ ಅತಿ ಸ್ವಾತಂತ್ರ್ಯ ಮತ್ತು ಹೆಚ್ಚು ಭಾಗ ಈ ನಗರವನ್ನು ಪಡೆಯಲು ಕಾದಾಡುತ್ತಿದೆ. ಹೇಗಾದರೂ ನಗರವು ಬೀಳದೆ ಜರ್ಮನರ ಪ್ರಯತ್ನಗಳೆಲ್ಲವೂ ನುಚ್ಚುನೂರಾಗಿವೆ. ಈ ನಗರ ಬೀಳುವ ಸೂಚನೆಗಳು ಕಂಡುಬರುವುದಿಲ್ಲ. ಆದರೂ ಜರ್ಮನಿಯವರು ತಾವು ಸ್ಟಾಲಿನ್‌ಗ್ರಾಡ್‌ನ ಕಾಕಸಸ್ ಎಣ್ಣೆಗಣಿಗಳನ್ನಾಗಲಿ ಕಪ್ಪು ಸಮುದ್ರ ಪ್ರಾಂತ್ಯವನ್ನಾಗಲಿ ಹಿಡಿಯಲು ಸಾಧ್ಯವಿಲ್ಲ. ಇದಿಷ್ಟಕ್ಕೂ ಸ್ಟಾಲಿನ್‌ಗ್ರಾಡ್ ನಗರವು ಇನ್ನೂ ಪತನವಾಗದಿರುವುದೇ ಕಾರಣವಾಗಿದೆ. ಹಾಗೆ ಸ್ಟಾಲಿನ್‌ಗ್ರಾಡ್ ನಗರವು ಸೆಬಾಸ್ಟಪೋಲ್ ಮತ್ತು ಒಡೆಸ್ಸಾ ಇವುಗಳಂತೆ ಅಭೇದ್ಯವಾದ ಕೋಟೆಗಳನ್ನೇನೂ ಹೊಂದಿಲ್ಲ. ವೋಲ್ಗಾ ನದಿ ದಡದಲ್ಲಿ ಸುಮಾರು ೩೦ ಮೈಲಿಗಳವರೆಗೂ ಹಬ್ಬಿಕೊಂಡಿದೆ. ಇಂತಹ ಅನುಕೂಲವಾದ ಸ್ಥಿತಿಯಲ್ಲಿ ಇರುವ ನಗರವನ್ನು ಕರಗತ ಮಾಡಿಕೊಳ್ಳಲು ಜರ್ಮನರಿಗೆ ಸಾಧ್ಯವಾಗದೇ ಇರುವುದು ರಷ್ಯಾ ಯೋಧರ ಪರಾಕ್ರಮವನ್ನು ಪ್ರದರ್ಶಿಸುತ್ತದೆ.

ರೂಸ್‌ವೆಲ್ಟರ ಅನಧಿಕೃತ ಪ್ರತಿನಿಧಿಯಾದ ಮಿ॥ ವೆಂಡೆಲ್ ವಿಲ್ಕಿಯವರು ಮಾಸ್ಕೋಗೆ ಹೋಗಿ ಅಲ್ಲಿನ ಯುದ್ಧ ಕಾರ್ಯಕ್ರಮಗಳನ್ನು ಪರಿಶೀಲಿಸಿದರು. ಮತ್ತು ಸ್ಟಾಲಿನ್ನರೊಡನೆ ಸಂಭಾಷಣೆಯನ್ನು ಮಾಡಿದರು. ... ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟು ರಷ್ಯಾದವರ ಪರಾಕ್ರಮವನ್ನು ಪ್ರಶಂಸಿಸಿ ರಷ್ಯಾದವರು ದ್ವಿತೀಯ ಯುದ್ಧರಂಗವನ್ನು ಬಹಳವಾಗಿ ಅಪೇಕ್ಷಿಸುತ್ತಿದ್ದಾರೆಂದೂ ಸಧ್ಯದಲ್ಲಿ ಯುದ್ಧ ಜಯಿಸಬೇಕಾದರೆ ಎಲ್ಲಾ ಮಿತ್ರರು ತಾವು ಒಪ್ಪಿರಬೇಕಾಗಿದೆಯೆಂದು ಹೇಳುತ್ತಿದ್ದಾರೆಂದೂ ಪ್ರಿಯದ ದ್ವಿತೀಯ ಯುದ್ಧರಂಗವನ್ನು ಸಧ್ಯದಲ್ಲಿಯೇ ಸ್ಥಾಪಿಸಬೇಕೆಂದೂ ಹೇಳಿದ್ದಾರೆ.

ಫಿನ್‌ಲೆಂಡ್

ಈಗ ಸ್ವಲ್ಪ ಕಾಲದಿಂದ ಫಿನ್‌ಲೆಂಡು ರಷ್ಯಾದೊಡನೆ ಒಂದು ಒಪ್ಪಂದವನ್ನು ಮಾಡಿಕೊಳ್ಳುವುದೆಂದು ಸಮಾಚಾರ ಹೊರಟಿತ್ತು. ಆದರೆ ನಮ್ಮಿಂದು ತಾವು ಬೇರೆಯಾಗಿ ಒಪ್ಪಂದ ಮಾಡಿಕೊಳ್ಳಲು ಸಿದ್ಧರಿಲ್ಲವೆಂದೂ ಫಿನ್‌ಲೆಂಡ್ ಸರ್ಕಾರವು ತಿಳಿಸಿದೆ.

ಜರ್ಮನಿ

ಬ್ರಿಟನ್ ವಿಮಾನ ದಳದವರು ಜರ್ಮನಿಯ ಪ್ರಧಾನ ಕೈಗಾರಿಕಾ ಕೇಂದ್ರಗಳಾದ ಸಾರ್ ಮತ್ತು ರೂರ್ ಕಣಿವೆಗಳ ಮೇಲೆ ದಾಳಿಗಳನ್ನು ನಡೆಸಿ ಅನೇಕ ಲಕ್ಷ ಪೌಂಡುಗಳಷ್ಟು ಬಾಂಬುಗಳನ್ನು ಹಾಕಿದ್ದಾರೆ. ಇದರ ಜೊತೆಯಲ್ಲಿ ನಾಜಿಗಳಿಗೆ ಕಾಣಿಸಿಕೊಂಡಿರುವ ... ಪ್ರಕಟಣೆಯಾಗಿದೆ. ಪತ್ರಿಕೆಗಳು ಗೋಬೆಲ್ಸ್‌ನವರು ನಾನಾ ರೀತಿಯಾಗಿ ಹೇಳುತ್ತಿದ್ದು ಜರ್ಮನರ ಕಾರ್ಯವನ್ನು ಬಿಟ್ಟುಕೊಟ್ಟು ಯುದ್ಧಾನಂತರ ಜರ್ಮನಿಯು ಸೋತದ್ದೇ ಆದರೆ ಅಲ್ಲಿಯ ಸಿರಿ ಹಿಡಿದು ಜನ ಪರದೇಶಗಳಿಗೆ ಹೋಗಬೇಕಾಗುತ್ತದೆ

ಲ್ಲಾ ಪರದೇಶಗಳಲ್ಲಿ ಕರಪೀಡಿತ ಕೊಡಬೇಕೆಂದು ನಿರ್ಬಂಧಿಸುವುದು ಇಂಗ್ಲೀಷರ ಆಶಯವಾಗಿದೆಯೆಂದು ಹೇಳಿದರು.

ಸಧ್ಯದಲ್ಲಿಯೇ ವಿಯೆನ್ನಾದಲ್ಲಿ ಹಿಟ್ಲರ್ ಮುಸೋಲಿನಿಗಳಿಗೆ ಒಂದು ಭೇಟಿಯು ನಡೆಯುವುದೆಂದು ತುರ್ಕಿಯಿಂದ ಒಂದು ಸಮಾಚಾರ ಹೊರಟಿದೆ.

ಇಂಗ್ಲೆಂಡ್

ಕಳೆದ ವಾರ ಇಂಗ್ಲೆಂಡಿನ ಆಗ್ನೇಯ ಭಾಗದ ಕೆಲವು ಪಟ್ಟಣಗಳ ಮೇಲೆ ಶತ್ರುವಿಮಾನಧಾಳಿ ನಡೆಯಿತು. ಅಂತಹ ನಷ್ಟವೇನೂ ಆಗಲಿಲ್ಲ. ಬ್ರಿಟನ್ ಮತ್ತು ಅಮೇರಿಕಾಗಳಿಂದ ರಷ್ಯಾಕ್ಕೆ ಸಾಮಾನುಗಳನ್ನು ಸಾಗಿಸುತ್ತಿದ್ದ ಹಡಗುಗಳ ಗುಂಪಿನ ಮೇಲೆ ಪೆಟ್ಸಾಮೋ ದ್ವೀಪಗಳ ಸಮೀಪದಲ್ಲಿ ಶತ್ರುವಿಮಾನಗಳೂ, ಸಬ್ ಮೇರೀನುಗಳೂ ಧಾಳಿ ನಡೆಸಿದವು. ಬ್ರಿಟನರ ಕಡೆ ಕೆಲವು ಹಡಗುಗಳು ಮುಳುಗಿ ಹೋದವು. ಆದರೆ ಬಹುಭಾಗ ಹಡಗುಗಳು ಸುರಕ್ಷಿತವಾಗಿ ರಷ್ಯಾವನ್ನು ತಲುಪಿದವು. ಇಂಡಿಯಾ ವಿಷಯದಲ್ಲಿ ಇಲ್ಲಿ ಜನತೆಯು ಪುನಃ ಸಂಧಾನಗಳನ್ನು ಪ್ರಾರಂಭಿಸಬೇಕೆಂದು ಅಭಿಪ್ರಾಯಪಟ್ಟಿದ್ದಾಗಿದೆ. ಆದರೂ ಸರ್ಕಾರದವರು ಅಧಿಯಲ್ಲಿ ಈಗಿನ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಯಿತೆಂದು ಹೇಳಲಾಗಿದೆ.

ಅನ್‌ಸನ್ ಮತ್ತು ಹೋವ್ ಎಂಬ ೩೫ ಸಾವಿರ ಟನ್ನುಗಳು ತೂಗುವ ಭಾರಿ ಯುದ್ಧ ನೌಕೆಗಳನ್ನು ಕಟ್ಟುತ್ತಿದ್ದಾರೆಂದು ತಿಳಿದು ಬಂದಿದೆ.

ಬ್ರಿಟಿಷ್ ಯುದ್ಧಮಂತ್ರಿ ಮಂಡಲದಲ್ಲಿ ಭಾರತೀಯ ಸದಸ್ಯರಾದ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರು ಮತ್ತು ನವನಗರದ ಜಾಂ ಸಾಹೇಬರು ಭಾರತೀಯ ವಿವಿಧ ಯುದ್ಧೋದ್ಯಮಗಳಲ್ಲಿ ನೇರವಾಗುತ್ತಿರುವುದನ್ನು ಪ್ರಶಂಸಿಸಿ ರೇಡಿಯೋವಿನಲ್ಲಿ ಭಾಷಣಗಳನ್ನು ಮಾಡಿದರು.

ಪಾರ್ಲಿಮೆಂಟಿನಲ್ಲಿ ಸಧ್ಯದಲ್ಲಿಯೇ ಚರ್ಚಿಲ್ಲರು ಇಂಡಿಯಾದ ಹೇಳಿಕೆಯ ಮೇಲೆ ಚರ್ಚೆ ನಡೆ... ದಿನದಲ್ಲಿ ಜರ್ಮನ್ ಗೂಢಾಚಾರರೂ ಮತ್ತು ಅವರಿಗೆ ಪ್ರತಿಯಾಗಿ ಅಮೇರಿಕ ಗೂಢಾಚಾರರೂ ವಿಪರೀತವಾಗಿರುವರೆಂದು ತಿಳಿದುಬಂದಿದೆ.

ಅಮೇರಿಕಾ

ಕಾಂಗ್ರೆಸ್ ಮತ್ತು ಸೆನೇಟ್ ಸಭೆಗಳು ನಡೆಯುತ್ತಿವೆ. ಈ ಸಲ ಅಮೇರಿಕದ ರೈತರು ಗೋಧಿಯನ್ನು ಕಡಿಮೆಯಾಗಿ ಬೆಳೆದು ಅದರ ಬದಲು ಯುದ್ಧೋಪಕರಣಗಳಿಗೆ ಬೇಕಾಗುವಂತಹ ಶಿಂಬುಗಳು, ಬೀಟ್‌ರೂಟ್, ಹತ್ತಿ, ಕಡಲೆ ಕಾಯಿ ಮುಂತಾದುವುಗಳನ್ನು ಬೆಳೆಯಲು ಸರ್ಕಾರ ಹೇಳುತ್ತಿದೆ. ಅಮೇರಿಕದ ಗಣಿ ಕೆಲಸಗಾರರು ಇನ್ನುಮೇಲೆ ಸ್ವಲ್ಪ ಹೆಚ್ಚು ಕೆಲಸ ಮಾಡಬೇಕಾಗುವುದು. ಸಂಯುಕ್ತ ಸಂಸ್ಥಾನದಲ್ಲೆಲ್ಲಾ ಪೆಟ್ರೋಲ್ ರೇಷನಿಂಗ್ ಜಾರಿಯಲ್ಲಿ ಬರುವುದು. ಇದರ ಫಲವಾಗಿ ಸುಮಾರು ೧೧ ಸಾವಿರದವರೆಗೂ ಸಾವಿರ ಟ್ರಾಕ್ಟರ್‌ಗಳಲ್ಲಿ ... ನಿಂತುಹೋಗಬಹುದೆಂದು ಹೇಳಲಾಗಿದೆ. ನ್ಯೂಯಾರ್ಕ್ ನಗರದಲ್ಲಿ ಪೆಟ್ರೋಲ್ ಖರ್ಚನ್ನು ಕಡಿಮೆ ಮಾಡಲು ಮೋಟಾರುಗಳ ವೇಗವನ್ನು ಗಂಟೆಗೆ ೨೫ ಮೈಲಿಗಳಿಗೆ ಇಳಿಸಿದ್ದಾರೆ.

ಇತ್ತೀಚಿನಲ್ಲಿ ಭಾರತದ ವಿಷಯದಲ್ಲಿ ಬಹಳ ಸಮಾಲೋಚನೆಯಿದೆ ಯೆಂದೂ ಪತ್ರಿಕೆ ಮತ್ತು ರೇಡಿಯೋಗಳಲ್ಲಿ ಈ ವಿಷಯವಾಗಿ ಬಹಳ ಚರ್ಚೆಗಳಾಗುತ್ತಿವೆಯೆಂದೂ ಸಹಜವಾಗಿ ... ಇವರು ಕಾದವರು ಆಲೋಚನೆಯಲ್ಲಿ ಅಮ್ರಾವಿಗೆ ಸರಕಾರದ ಗೋಷ್ಠಿಗೆ ಒಂದು ಪತ್ರಿಯನ್ನು ಕಳುಹಿಸುತ್ತಿರುವರೆಂದು ಗೊತ್ತಾಗಿದೆ

ಪೆಸಿಫಿಕ್ ಯುದ್ಧರಂಗ

ಪರಿಸ್ಥಿತಿಯು ಒಂದೇ ಸಮನಾಗಿದೆ. ಸಾಲಮನ್ ದ್ವೀಪಸ್ತೋಮವನ್ನು ಪುನಃ ಹಿಡಿಯಲು ಜಪಾನು ಹವಣಿಸುತ್ತಲಿರುವುದಾಗಿದೆ. ನ್ಯೂಗಿನಿಯಲ್ಲಿ ಯುದ್ಧವು ಜಯಪ್ರದವಾಗಿ ನಡೆಯುತ್ತಿದೆ. ಜಪಾನರು ಇನ್ನೂ ಒಂದು ಹೆಜ್ಜೆಯೂ ಮುಂದುವರಿಯಲು ಸಾಧ್ಯವಾಗಿಲ್ಲವಾಗಿದೆ. ನ್ಯೂಗಿನಿಯ ಅರಣ್ಯಗಳಲ್ಲಿ ಶತ್ರುಸೈನ್ಯಗಳನ್ನು ಎದುರಿಸುತ್ತಿರುವ ಆಸ್ಟ್ರೇಲಿಯಾ ಸೈನಿಕರಿಗೆ ವಿಮಾನಗಳ ಮುಖಾಂತರ ಆಹಾರ ಸಾಮಾನು ಮಾಡಲಾಗುತ್ತಿದೆ.

ಜಪಾನಿನವರ ಸಬ್‌ಮೆರೀನುಗಳು ಅಟ್ಲಾಂಟಿಕ್ ಸಾಗರಕ್ಕೆ ಹೋಗಿ ಅಲ್ಲಿ ಜರ್ಮನ್ ನೌಕಾದಳದೊಡನೆ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಿವೆಯೆಂದು ತಿಳಿದು ಬಂದಿದೆ.

ಚೀನಾ

ಚೀನಾದ ಪೀಕಿಂಗ್ ನಗರದಲ್ಲಿ ಜಪಾನಿನವರು ಹೆಚ್ಚು ಸೈನಿಕರನ್ನು ಜಮಾಯಿಸುತ್ತಿರುವರೆಂದು ಗೊತ್ತಾಗಿದೆ. ಇದರ ಉದ್ದೇಶವು ಇನ್ನೂ ಗೊತ್ತಾಗಿಲ್ಲ. ಚೀನಾದ ಪರಿಸ್ಥಿತಿಯು ಒಂದೇ ಸಮನಾಗಿದೆ. ಚೆಕಿಯಾಂಗ್ ಪ್ರಾಂತ್ಯದ ರಾಜಧಾನಿಯಾದ ಕಿನ್ವಾ ನಗರವನ್ನು ಹಿಡಿಯಲು ಚೀನಾದವರು ಬಹಳ ಪ್ರಯತ್ನ ಪಡುತ್ತಿದ್ದಾರೆ. ಮತ್ತು ಅದರ ಸಮೀಪದವರೆಗೆ ಬಂದಿದ್ದಾರೆ.

ಮಲಯಾದಲ್ಲಿ ಕೆಲವರು ಜಪಾನ ಅಧಿಕಾರಿಗಳನ್ನು ಕೊಲೆ ಮಾಡಲು ಪ್ರಯತ್ನ ನಡೆಯಿತೆಂದು ಇದರ ಫಲವಾಗಿ ಕೆಲವರನ್ನು ಗಲ್ಲಿಗೇರಿಸಲಾಯಿತೆಂದೂ ತಿಳಿದು ಬಂದಿದೆ.

ಇಂಡಿಯಾ

ಪರಿಸ್ಥಿತಿಯು ಒಂದೇ ಸಮನಾಗಿದೆ. ದೇಶದ ... ಇನ್ನೂ ಅಶಾಂತಿ ಇದ್ದೇ ಇದೆ. ಅಲ್ಲಲ್ಲಿ ಇನ್ನೂ ಪೋಲೀಸಿನವರು ಗುಂಡು ಹಾರಿಸಬೇಕಾದ ಪ್ರಸಂಗಗಳು ಒದಗುತ್ತಲೇ ಇವೆ. ಕೆಲವು ಕಡೆಗಳಲ್ಲಿ ಜನರು ಬಾಂಬುಗಳನ್ನು ಹಾಕುತ್ತಿ...

ಕೇಂದ್ರ ಶಾಸನ ಸಭೆ ಮತ್ತು ಕೌನ್ಸಿಲ್ ಆಫ್ ಸ್ಟೇಟ್ ಸಭೆಗಳು ನಡೆಯುತ್ತಿವೆ. ಎರಡು ಸಭೆಯಲ್ಲಿಯೂ ಚುನಾಯಿತ ಪ್ರತಿನಿಧಿಗಳು ಸರ್ಕಾರದ ವರ್ತನೆಯನ್ನು ಖಂಡಿಸಿದ್ದಾರೆ. ಪೋಲೀಸ್ ಮತ್ತು ಮಿಲಿಟರಿಯ ಅಧಿಕಾರಿಗಳು ಬೇರೆ ಬೇರೆ ಕಡೆ ನಡೆಸಿರುವ ಪ್ರಸಂಗಗಳ ಬಗ್ಗೆ ವಿಚಾರಣಾ ಸಮಿತಿಯನ್ನು ಏರ್ಪಡಿಸಬೇಕೆಂದು, ಶ್ರೀ॥ ಕೆ. ಸಿ. ನಿಯೋಗಿಯವರು ಒಂದು ಠರಾವನ್ನು ತಂದಿದ್ದರು. ನ್ಯಾಯಾಂಗ ಮಂತ್ರಿಗಳು ಸಾಧ್ಯವಿಲ್ಲವೆಂದು ಹೇಳಿದರು. ಯುದ್ಧದ ಪ್ರಯತ್ನ ವಿಷಯದಲ್ಲಿ ಸ್ವಾತಂತ್ರ್ಯವಾದ ಪ್ರತ್ಯೇಕ ರಂಗವಿರಬೇಕಾದವು

ಮದರಾಸ್ ಸರ್ಕಾರದವರು ಪಠೇಲ್ ಮೋಟಾರು ಫೈರುಗಳನ್ನು ಬಿಟ್ಟುಬಿಡಬೇಕೆಂದು ಆಜ್ಞೆ ಮಾಡಿದ್ದಾರೆ. ಮದರಾಸ್ ... ಅಕ್ಟೋಬರ್ ಹತ್ತರ ನಂತರ ಸೀಮೆಎಣ್ಣೆ ವ್ಯಾಪಾರಿಗಳು ಲೈಸನ್ಸ್ ಪಡೆಯಬೇಕು. ಆನಂತರ ಒಂದು ದಿವಸಕ್ಕೆ ಒಬ್ಬರಿಗೆ ... ಎಣ್ಣೆಗಿಂತಲೂ ಹೆಚ್ಚಾಗಿ ಕೊಡಲಾಗುವುದಿಲ್ಲ.

ನಮ್ಮ ದೇಶದಲ್ಲಿ ಇನ್ನೂ ಅಶಾಂತಿ ಇದ್ದೇ ಇದೆ. ಪ್ರಮುಖರಲ್ಲಿ ಕೆಲವು ಕೂಲಿಗಾರರನ್ನು ಕೆಲಸದಿಂದ ವಜಾ ಮಾಡಿದ್ದಾರೆ. ಜಿಂಗ್‌ಮಾರ್ಗದ ಮಿಲ್ ಕೆಲಸಗಾರರೆಲ್ಲರೂ ಮುಷ್ಕರ ಹಿಡಿದಿದ್ದಾರೆ. ಮಿಲ್ ಮಾಲೀಕರುಗಳು ಲಾಕ್ ಔಟ್ ಮಾಡಿರುತ್ತಾರೆ. ವಿಶ್ವ ವಿದ್ಯಾನಿಲಯದ ಮುಖ್ಯಾಧಿಕಾರಿಗಳು ಮತ್ತು ಶಿಕ್ಷಣಾಧಿಕಾರಿಗಳು ಈ ದಿನದ ಒಳಗೆ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗದಿದ್ದರೆ ತೀವ್ರ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆಂದು ಎಚ್ಚರಿಸಿದ್ದಾರೆ.

ಮಡಗಾಸ್ಕರ್

ಬ್ರಿಟಿಷ್ ಸೈನ್ಯಗಳು ಜಯಪ್ರದವಾಗಿ ಮುಂದುವರಿಯುತ್ತಿವೆ. ಮಡಗಾಸ್ಕರಿನ ರಾಜಧಾನಿಯಾದ ಅಂಟನಾನಾರಿವೋ ಪಟ್ಟಣವನ್ನು ಆಕ್ರಮಿಸಿದವು. ಈ ಸಂದರ್ಭದಲ್ಲಿ ಬ್ರಿಟಿಷರವರು ಒಂದು ಘೋಷಣೆಯನ್ನು ಹೊರಡಿಸಿ ಇನ್ನು ಮುಂದೆಯೂ ಮಡಗಾಸ್ಕರಿನಲ್ಲಿ ಈಗ ನಡೆಯುತ್ತಿದ್ದ ಹಾಗೆ ರಾಜ್ಯಭಾರಕ್ರಮವನ್ನು ನಡೆಸಲಾಗುವುದೆಂದೂ ತಾತ್ಕಾಲಿಕವಾಗಿ ಬ್ರಿಟಿಷ್ ಮಿಲಿಟರಿ ಆಡಳಿತವನ್ನು ಏರ್ಪಡಿಸಲಾಗುವುದೆಂದು ತಿಳಿಸಿದ್ದಾರೆ.

ಈಜಿಪ್ಟ್

ಮಿತ್ರಪಕ್ಷದ ವಿಮಾನಗಳು ಮರ್ಸಾ ಮಟ್ರೂ, ಟೊಬ್ರುಕ್, ಇವುಗಳ ಮೇಲೆ ಬಾಂಬುಗಳನ್ನು ಹಾಕಿದವು. ಇದಲ್ಲದೆ ಲಿಬಿಯಾ ಮರುಭೂಮಿಯಲ್ಲಿ ಶತ್ರು ಸೈನ್ಯಗಳ ಶಿಬಿರಗಳ ಮೇಲೂ ಬಾಂಬುಗಳ ಮಳೆಗರೆದವು.

ಹೊಸಕೋಟೆಯಲ್ಲಿ ದಸ್ತಗಿರಿ

ಶ್ರೀಯುತರಾದ ಎಸ್. ... ಶ್ರೀನಿವಾಸ ಶೆಟ್ಟಿ, ... ಕೆ. ಟಿ. ಪುಟ್ಟಸ್ವಾಮಿ ... ನರಸಿಂಹಯ್ಯ, ಕೆ. ಟಿ. ಪುಟ್ಟಸ್ವಾಮಿ ಈ ಐವರುಗಳು ಮೈಸೂರು ಸ್ಟೇಟ್ ಶಾಸನದ ... ಕಾರಣದ ಮೇಲೆ ಬಂಧಿಸಲ್ಪಟ್ಟು ರಿಮಾಂಡಿನಲ್ಲಿ ಇಟ್ಟಿರುವರು. ಇವರನ್ನು ಬಂಧಿಸಿದನಂತರ ವಿದ್ಯಾರ್ಥಿಗಳು ಮತ್ತು ಇತರರು ಕಾಂಗ್ರೆಸ್ ಧ್ವಜಗಳನ್ನು ಹಿಡಿದು, ಜಯ ಜಯಕಾರಗಳೊಡನೆ ಊರಿನ ನಾನಾ ಭಾಗಗಳಲ್ಲಿ ಮೆರವಣಿಗೆ ನಡೆಸಿದರು. ನಂತರ ಪೆಟ್ಟಿಗೆಯಾದವರನ್ನು ಪೋಲೀಸ್ ಸ್ಟೇಷನ್ನಿಗೆ ವಿದ್ಯಾರ್ಥಿಗಳೇ ಕರೆದೊಯ್ದರು.

ಟೆಲಿಗ್ರಾಮ್ಸ್:— ಟೆಲಿಫೋನ್ ೨೨೭೨

ದಿ ರಿಲಯನ್ಸ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು:—ರಿಲೈಯನ್ಸ್ ಬಿಲ್ಡಿಂಗ್ಸ್, ಬೆಂಗಳೂರು ಸಿಟಿ.

ಬ್ರಾಂಚ್ ಆಫೀಸು:— ಬೊಂಬಾಯಿ.

೧೯೩೬ನೇ ಇಸವಿಯ ಮೈಸೂರು ಕಂಪೆನಿ ರೆಗ್ಯುಲೇಷನ್ ಪ್ರಕಾರ ಸ್ಥಾಪಿಸಲ್ಪಟ್ಟಿರುತ್ತೆ. ಮತ್ತು ೧೯೩೮ನೇ ಇಸವಿಯ ಮೈಸೂರು ಇನ್ಶೂರೆನ್ಸ್ ಆಕ್ಟಿನಂತೆ ರಿಜಿಸ್ಟರ್ ಆಗಿರುತ್ತೆ.

ಸಂಪಾದಿಸಿಯಾದ ಪ್ರೀಮಿಯಮ್ ಹಣ ರೂ ೪ ಸಾ,೫೦೦

೧೯೩೯ನೇ ಇಸವಿ ಡಿಸೆಂಬರ್ ೩೧ನೇ ತಾರೀಖಿನ ವರೆಗೆ ಸಂಪಾದಿಸಲ್ಪಟ್ಟ ಕಂಪೆನಿ ಪಾಲಿಸಿ...

ಬೋನಸ್ಸು:— ಹೋಲ್ ಲೈಫ್ ರೂ ೧೦ ... ಎಂಡೋಮೆಂಟ್ ,, ... } ಪ್ರತಿ ೧,೦೦೦ ಕ್ಕೆ ವಾರ್ಷಿಕ

ಪ್ರಮುಖರುಗಳು ಪ್ರಸಿದ್ಧರೂ ಮತ್ತು ಗವರ್ನಮೆಂಟ್ ... ವಿಚಾರದವರೂ ಆದ ಡಿ. ಎಸ್. ... ಎಂ.ಎ ಬಿ.ಎ (ಲಂಡನ್) ಇವರಿಂದ ... ಮಾಡಲ್ಪಟ್ಟ ... ವ್ಯವಹಾರ ನಡೆಯುತ್ತಿದೆ. ತೆಗೆದುಕೊಳ್ಳಲಿಚ್ಛಿಸುವವರು ಕೂಡಲೆ ಬರೆಯಿರಿ

ತಿರುಪತಿ ಅಂಡ್ ಕೋ. ಮ್ಯಾನೇಜಿಂಗ್ ಏಜೆಂಟ್ಸ್

ನ್ಯಾಷನಲ್ ಎಂಪೋರಿಯಂ ಪ್ರಿಂಟೆಡ್ ಸೀರೆಗಳು

ಶ್ರೀ ಸಯ್ಯಾಜಿರಾವ್ ರೋಡು, ಮೈಸೂರು

ನಮ್ಮಲ್ಲಿ ದೊರೆಯುತ್ತವೆ.

ಮಾರಾಟಕ್ಕಿರುವ ಉಪಯೋಗಿಸುತ್ತಿದ್ದಕ್ಕೆ

೬ ಗಜವು	ರೂ.	೩—೦—೦
೭ ,,	ರೂ.	೩—೮—೦
೮ ,,	ರೂ.	೪—೧೧—೦

ಯುದ್ಧೋದ್ಯಮದಲ್ಲಿ ಆನೆಯ ಉಪಯೋಗ

ಕಳೆದ ಏಪ್ರಿಲ್ ತಿಂಗಳಿನಲ್ಲಿ ಜಪಾನೀಯರು ಸಿಲೋನಿನಲ್ಲಿ ನಡೆಸಿದ ವಿಮಾನ ಧಾಳಿಯನ್ನು ಆರ್. ಎ. ಎಫ್. ದಳದವರು ನೆಲಕ್ಕುರುಳಿಸಿ ಶತ್ರು ವಿಮಾನಗಳನ್ನು ತಳ್ಳಿಕೊಳ್ಳಿಗಳಿಂದ ಮೇಲಕ್ಕೆತ್ತುವ ಕಾರ್ಯವು ಇನ್ನೂ ಜರುಗುತ್ತಲಿದೆ

ಒಂದು ಸಂಧರ್ಭದಲ್ಲಿ ಶತ್ರುವಿಮಾನವೊಂದು ಹೊಡೆಯಲ್ಪಟ್ಟು ಅರಣ್ಯಮಧ್ಯದಲ್ಲಿ ಅದು ಆಳವಾದ ಗುಂಡಿಯಲ್ಲಿ ಹೂತುಹೋಗಿತ್ತು. ಅರಣ್ಯ ಮಧ್ಯವಾದ್ದರಿಂದ ವಿಮಾನವನ್ನೆತ್ತಲು ಕ್ರೇನನ್ನು ಉಪಯೋಗಿಸಲು ಸಾಧ್ಯವಾಗದೆ ಆದ ಕ್ಕಾಗಿ ಆನೆಯನ್ನು ಉಪಯೋಗಿಸಿ ಕಬ್ಬಿಣದ ಸರಪಣಿಯನ್ನು ವಿಮಾನಕ್ಕೆ ಕಟ್ಟಿ ಆನೆಯು ಶಕ್ತಿಗೆ ಮೀರಿ ಎಳೆಸಲು ವಿಮಾನವು ಹಳ್ಳದಿಂದ ಮೇಲಕ್ಕೆ ಬಂದಿತು.

